ಮಂಗಳವಾರ, ಆಗಸ್ಟ್ 16, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ

ಶ್ರೀನಗರದಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕ ದಿರಿಸು ತೊಟ್ಟು ಪಾಲ್ಗೊಂಡಿದ್ದ ಬಾಲಕಿ

SBI
The banker to every indian

75 Azadi Ka Amrit Mahotsav

ನಿಮ್ಮಲ್ಲಿ ಒಂದು ಉಜ್ವಲ ಕನಸ್ಸಿದ್ದರೆ, ಆ ಕನಸನ್ನು ನಾವು ನನಸು ಗೊಳಿಸುತ್ತೇವೆ

ಸ್ಟಾರ್ಟ್–ಅಪ್‌ಗಳಿಗೆಂದೇ ಪ್ರಸ್ತುತಪಡಿಸುತ್ತಿದ್ದೇವೆ ಎಸ್‌ಬಿಐನ ಚೊಚ್ಚಲ ಶಾಖೆ
ಸ್ಥಳ: ಕೋರಮಂಗಲ, ಬೆಂಗಳೂರು. ದಿನಾಂಕ: 16.08.2022

ಎಸ್‌ಬಿಐ ಸ್ಟಾರ್ಟ್–ಅಪ್ ಶಾಖೆ
– ನಿಮ್ಮ ಅನುಕೂಲಕ್ಕಾಗಿ ಸದಾ ಸಿದ್ಧ –



ಒಂದೇ ಸೂರಿನಡಿ ನಿಮ್ಮ ಎಲ್ಲಾ ಅಗತ್ಯಗಳಿಗೆ ಪರಿಹಾರ

- ಸಾಲಗಳು
- ಠೇವಣಿಗಳು
- ವಹಿವಾಟು ಬ್ಯಾಂಕಿಂಗ್
- ಹೊರಮುಖ ಮತ್ತು ಒಳಮುಖ ಹಣ ರವಾನೆ
- ಪಾವತಿಗಳು
- ನಗದು ನಿರ್ವಹಣೆ ಉತ್ಪನ್ನ
- ವಿದೇಶಿ ವಿನಿಮಯ
- ವಿಮೆ
- ಕ್ರೆಡಿಟ್ ಕಾರ್ಡ್
- ಮ್ಯುಚ್ಯುಯಲ್ ಫಂಡ್
- ಅಭಿರಕ್ಷಣಾ ಸೇವೆಗಳು
- ಕ್ಯಾಪಿಟಲ್ ಮಾರುಕಟ್ಟೆ ಮತ್ತು ಕಾನೂನು ಸಲಹೆ
- ಪುನರ್ರಚನೆ
- ಡಿಮ್ಯಾಟ್ ಮತ್ತು ವ್ಯಾಪಾರ

ಮತ್ತು ಇನ್ನೂ ಹಲವು...

ನಮ್ಮನ್ನು ಇಲ್ಲಿ ಅನುಸರಿಸಿ

ಬೆಂಗಳೂರು ಉತ್ತರ ಜಿಲ್ಲೆ ಚಿಕ್ಕಬಿದರಕಲ್ಲು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು 'ಅಮೃತ ಮಹೋತ್ಸವ ಭಾರತದ ಸಂಭ್ರಮ' ನೃತ್ಯರೂಪಕ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಬೆಂಗಳೂರಿನ ಬಿ.ಎಂ. ನಗರದ ಲಿಲ್ಲಿ ರೋಜ್ ಪ್ರೌಢಶಾಲೆ, ಬಿಸ್ಮಿಲ್ಲಾನಗರದ ಎಲ್‌ಆರ್ ಆಂಗ್ಲ ಶಾಲೆಯ ವಿದ್ಯಾರ್ಥಿಗಳು 'ಜೈ ಜವಾನ್ ಜೈ ಕಿಸಾನ್' ನೃತ್ಯರೂಪಕ ಪ್ರಸ್ತುತ ಪಡಿಸಿದರು

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಪ್ಯಾರಾ ರೆಜಿಮೆಂಟ್ ಟ್ರೇನಿಂಗ್ ಸೆಂಟರ್ ಸಿಬ್ಬಂದಿಯ 'ಕೊಂಬ್ಯಾಟ್ ಫ್ರೀ ಫಾಲ್' ಪ್ರದರ್ಶನ

ಕೋವಿಡ್ ಬಳಿಕ ಮಾಣೆಕ್ ಷಾ ಮೈದಾನಕ್ಕೆ ಜನರಿಗೆ ಮುಕ್ತ ಪ್ರವೇಶ • ಗಮನ ಸೆಳೆದ ಈಸೂರು ಹೋರಾಟ, ಜೈ ಜವಾನ್ ಜೈ ಕಿಸಾನ್ ನೃತ್ಯ

ಸ್ವಾತಂತ್ರ್ಯೋತ್ಸವ: ಅನುರಣಿಸಿದ ದೇಶ ಭಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮರೆಯಾದ ಬಳಿಕ, ಮಾಣೆಕ್ ಷಾ ಪರೇಡ್ ಮೈದಾನಕ್ಕೆ ಇದೇ ಮೊದಲ ಬಾರಿ ಸಾರ್ವಜನಿಕರಿಗೆ ಮುಕ್ತ ಪ್ರವೇಶ ನೀಡಿದ್ದರಿಂದ ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು. ಮೈದಾನದ ತುಂಬಾ ದೇಶ ಭಕ್ತಿಯ ಉತ್ಸಾಹದ ಅಲೆ ಕಾಣುತ್ತಿತ್ತು.

ಮಕ್ಕಳ ನೃತ್ಯಗಳಿಗೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು. ವಿವಿಧ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳ ಸಂಭ್ರಮ ಮುಗಿಲುಮುಟ್ಟಿತ್ತು. ಕೇಸರಿ, ಬಿಳಿ, ಹಸಿರು ಎಲ್ಲೆಡೆ ರಾರಾಜಿಸುತ್ತಿದ್ದವು.

ಕಿಕ್ಕೇರಿ ಕೃಷ್ಣಮೂರ್ತಿ ಅವರ ತಂಡದ ಸದಸ್ಯರ ನಾಡಗೀತೆ, ರೈತಗೀತೆಗೆ ಜನರೂ ಧ್ವನಿಗೂಡಿಸಿದರು. ರಾಷ್ಟ್ರಧ್ವಜ ಬೀಸುತ್ತಾ ಸಂಭ್ರಮಿಸಿದರು. ಕವಾಯತಿನ ಶಿಸ್ತು, ಅಚ್ಚುಕಟ್ಟು ನಿರ್ವಹಣೆಗೆ ಮೆಚ್ಚುಗೆ ವ್ಯಕ್ತವಾಯಿತು.

ಬೆಂಗಳೂರು ಉತ್ತರ ಜಿಲ್ಲೆಯ ಚಿಕ್ಕಬಿದರಕಲ್ಲು ಸರ್ಕಾರಿ ಪ್ರೌಢಶಾಲೆಯ 800 ಮಕ್ಕಳು 'ಅಮೃತ ಮಹೋತ್ಸವದ ಭಾರತದ ಸಂಭ್ರಮದ' ನೃತ್ಯ ಪ್ರದರ್ಶಿಸಿದರು. ಉತ್ತರ ವಲಯದ ಹೇರೋಹಳ್ಳಿ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ 800 ಮಕ್ಕಳು 'ಈಸೂರು ಹೋರಾಟ' ಹಾಗೂ ಗುರಪ್ಪನಪಾಳ್ಯದ ಲಿಲ್ಲಿ ರೋಜ್ ಪ್ರೌಢಶಾಲೆಯ 850 ಮಕ್ಕಳು 'ಜೈ ಜವಾನ್ ಜೈ ಕಿಸಾನ್' ಕಾರ್ಯಕ್ರಮ ನಡೆಸಿಕೊಟ್ಟರು. ಎಂಇಜಿ ತಂಡದವರು ಟೆಂಟ್ ಪೆಗ್ಗಿಂಗ್, ಕೊಂಬ್ಯಾಟ್ ಫ್ರೀ ಫಾಲ್ ಮತ್ತು ಉತ್ತಮ ದೇಹದಾರ್ಢ್ಯ ಸಾಹಸ ಪ್ರದರ್ಶಿಸಿದರು.

ಧ್ವಜಾರೋಹಣದ ನಂತರ ಮುಖ್ಯಮಂತ್ರಿ ತೆರೆದ ಜೀಪಿನಲ್ಲಿ ಪರೇಡ್ ವೀಕ್ಷಿಸಿದರಲ್ಲದೇ, ಗೌರವ ರಕ್ಷೆ ಸ್ವೀಕರಿಸಿದರು. ಪೊಲೀಸ್, ಗೃಹ ರಕ್ಷಕ ದಳ, ಅಗ್ನಿಶಾಮಕ ಸೇವಾ ಸಿಬ್ಬಂದಿ ಸೇರಿದಂತೆ 36 ತುಕಡಿಗಳ 1,200 ಮಂದಿ ಪಥಸಂಚಲನದಲ್ಲಿ ಭಾಗವಹಿಸಿದ್ದರು.

ಕವಿತೆಗಳ ಸಾಲು ಪ್ರಸ್ತಾಪ

ಕವಿ ಜಿ.ಎಸ್.ಶಿವರುದ್ರಪ್ಪ ಅವರ 'ನೆಳಲು-ಬೆಳಕುಗಳ ರೆಕ್ಕೆಯ ಬಿಚ್ಚುತ ಹಾರಾಡುವ ಧ್ವಜ ಒಂದೇ' ಬಿ.ಎಂ.ಶ್ರೀಕಂಠಯ್ಯ ಅವರ 'ಭಾರತಾಂಬೆಯ ಹಿರಿಯ ಹೆಳ್ಮಗಳೆ, ದಾರಿ ತೋರುವ ಹಿರಿಯ ಸೊಡರೆ ಬಾಳಮ್ಮ, ಬಾಳು' ಕವಿತೆಯ ಸಾಲುಗಳನ್ನು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಪ್ರಸ್ತಾಪಿಸಿದರು.

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸೋಮವಾರ ಶ್ವಾನದಳದ ಪಥ ಸಂಚಲನ. ನಡೆಯಿತು

'ರಾಷ್ಟ್ರಧ್ವಜ ಸುರಕ್ಷಿತವಾಗಿ ತೆಗೆದಿಡಿ'

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮನೆಗಳ ಮೇಲೆ ಹಾರಿಸಿದ್ದ ರಾಷ್ಟ್ರಧ್ವಜಗಳನ್ನು ಚ್ಯುತಿ ಬಾರದಂತೆ ಮಡಿಚಿ, ಸುರಕ್ಷಿತವಾಗಿ ಎತ್ತಿಡಬೇಕು ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ರಂಗಪ್ಪ ಮನವಿ ಮಾಡಿಕೊಂಡಿದ್ದಾರೆ.

ನಗರದ ನಾಗರಿಕರು ಅಮೃತ ಮಹೋತ್ಸವದ ಅಂಗವಾಗಿ 'ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ' ಅಭಿಯಾನವನ್ನು ಯಶಸ್ವಿಗೊಳಿಸಿದಕ್ಕೆ ಅವರು ಧನ್ಯವಾದ ತಿಳಿಸಿದ್ದಾರೆ. ಮನೆಗಳು, ವಾಣಿಜ್ಯ ಮಳಿಗೆಗಳು, ಕಚೇರಿಗಳು, ಸಂಘ ಸಂಸ್ಥೆಗಳ ಮೇಲೆ ಹಾರಿಸಿದ ರಾಷ್ಟ್ರ ಧ್ವಜವನ್ನು ಜೋಪಾನವಾಗಿ ತೆಗೆದ ಮೇಲೆ, 'ಅಶೋಕ ಚಕ್ರ' ಮೇಲೆ ಬರುವಂತೆ ಮಡಿಚಿಡಬೇಕು. ಧಕ್ಕೆ ಬರದ ಹಾಗೆ ಸುರಕ್ಷಿತ ಸ್ಥಳದಲ್ಲಿ ಇಡುವುದು ಪ್ರತಿ ನಾಗರಿಕರ ಆದ್ಯ ಕರ್ತವ್ಯ ಎಂದರು.

ಮೃತ ಸೈನಿಕರ ಕುಟುಂಬಕ್ಕೆ ನೌಕರಿ

ಕರ್ತವ್ಯದಲ್ಲಿದ್ದಾಗ ಮೃತರಾಗುವ ಸೈನಿಕರ ಕುಟುಂಬದ ಒಬ್ಬ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ನೌಕರಿ ನೀಡಲು ಸರ್ಕಾರ ನಿರ್ಧರಿಸಿದೆ.

ಚಾಮರಾಜಪೇಟೆ ಮೈದಾನ: ಮೊದಲ ಬಾರಿಗೆ ಹಾರಾಡಿದ ತ್ರಿವರ್ಣ ಧ್ವಜ

ಪೊಲೀಸ್ ಸರ್ಪಕಾವಲಿನಲ್ಲಿ ಧ್ವಜಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗದ ಮಾಲೀಕತ್ವ ವಿಚಾರವಾಗಿ ಹೆಚ್ಚು ಸುದ್ದಿಯಾಗಿದ್ದ ಚಾಮರಾಜಪೇಟೆ ಮೈದಾನದಲ್ಲಿ ಪೊಲೀಸರ ಸರ್ಪಕಾವಲಿನಲ್ಲಿ ಸೋಮವಾರ ಮೊದಲ ಬಾರಿಗೆ ತ್ರಿವರ್ಣ ಧ್ವಜಾರೋಹಣ ನೆರವೇರಿತು. ಮೈದಾನದ ಒಂದು ಬದಿಯಲ್ಲಿರುವ ಈದ್ಗಾ (ಗೋಡೆ) ಸುತ್ತಲೂ ಶಸ್ತ್ರಸಜ್ಜಿತವಾಗಿ ಗಸ್ತು ತಿರುಗಿದ ರಕ್ಷಣಾ ಪಡೆಗಳು, ಅಹಿತಕರ ಘಟನೆಗಳು ನಡೆಯದಂತೆ ಹದ್ದಿನ ಕಣ್ಣಿಟ್ಟಿದ್ದವು.

ಸ್ಥಳೀಯವಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಂಡಿದ್ದ ಪೊಲೀಸರು, ಮೈದಾನ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಬಿಗಿ ಭದ್ರತೆ ಕೈಗೊಂಡಿದ್ದರು. ಈದ್ಗಾ ಇರುವ ಮೈದಾನದ ಅರ್ಧ ಭಾಗದಲ್ಲಿ ಜನರ ಪ್ರವೇಶ ನಿರ್ಬಂಧಿಸಲಾಗಿತ್ತು. ಇನ್ನರ್ಧ ಭಾಗದಲ್ಲಿ ಧ್ವಜಾರೋಹಣ ಕಾರ್ಯಕ್ರಮಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಬೆಂಗಳೂರು ನಗರ ಜಿಲ್ಲೆಯ ಉಪ ವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ಅವರು ಬೆಳಿಗ್ಗೆ 8 ಗಂಟೆಗೆ ತಾತ್ಕಾಲಿಕ ಧ್ವಜಸ್ತಂಭದಲ್ಲಿ ಧ್ವಜಾರೋಹಣ ಮಾಡಿದರು. ಸಂಸದ ಪಿ.ಸಿ. ಮೋಹನ್, ಸ್ಥಳೀಯ ಶಾಸಕ ಜಮೀರ್ ಅಹ್ಮದ್ ಖಾನ್, ಹೆಚ್ಚುವರಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ, ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಜೊತೆಗಿದ್ದರು. ಮಹಾತ್ಮ ಗಾಂಧೀಜಿ ಭಾವಚಿತ್ರಕ್ಕೆ ಎಲ್ಲರೂ ಪುಷ್ಪನಮನ ಸಲ್ಲಿಸಿದರು. ಯಾರೊಬ್ಬರೂ ಸಾರ್ವಜನಿಕವಾಗಿ ಭಾಷಣ ಮಾಡಲಿಲ್ಲ.

ಚಾಮರಾಜಪೇಟೆ ಮೈದಾನದಲ್ಲಿ ಧ್ವಜಾರೋಹಣ ನಡೆಯಿತು – ಪ್ರಜಾವಾಣಿ ಚಿತ್ರ

> **ಮೈದಾನದಲ್ಲಿ ಧ್ವಜಾರೋಹಣ ಮಾಡಬೇಕೆಂದು ಹಿಂದೆಯೇ ಹೇಳಿದ್ದೆ. ನನ್ನ ಕನಸು ಇಂದು ನನಸಾಗಿದೆ. ನವೆಂಬರ್ 1 ಹಾಗೂ ಜನವರಿ 26ರಂದೂ ಧ್ವಜಾರೋಹಣ ಮಾಡುತ್ತೇನೆ.**
> **ಜಮೀರ್ ಅಹ್ಮದ್ ಖಾನ್**
> ಚಾಮರಾಜಪೇಟೆ ಕ್ಷೇತ್ರದ ಶಾಸಕ

> **ಮೈದಾನದಲ್ಲಿ ಧ್ವಜಾರೋಹಣ ಆಗುತ್ತಿಲ್ಲವೆಂಬ ದುಃಖ ಸ್ಥಳೀಯರಲ್ಲಿತ್ತು. ಇಂದು ಅವರಿಗೆಲ್ಲ ಖುಷಿಯಾಗಿದೆ. ಕಂದಾಯ ಇಲಾಖೆ ಈ ಜಾಗದಲ್ಲೇ ಶಾಶ್ವತ ಧ್ವಜಸ್ತಂಭ ನಿರ್ಮಿಸಲು ಚಿಂತನೆ ನಡೆಸುತ್ತೇವೆ.**
> **ಪಿ.ಸಿ.ಮೋಹನ್,** ಸಂಸದ

ಧ್ವಜಾರೋಹಣ ಬಳಿಕ ರಾಷ್ಟ್ರಗೀತೆ ಮೊಳಗಿತು. ಮೈದಾನದಲ್ಲಿದ್ದವರು ಹಾಗೂ ರಸ್ತೆಯಲ್ಲಿದ್ದವರೆಲ್ಲ ಎದ್ದು ನಿಂತು ಗೌರವ ಸೂಚಿಸಿದರು. ಶಾಲಾ ಮಕ್ಕಳು, ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸುವ ಕಿರು ನಾಟಕ ಪ್ರಸ್ತುತಪಡಿಸಿದರು.

ಸಿಹಿ ಹಂಚಿದ ಸ್ಥಳೀಯರು: ಧ್ವಜಾರೋಹಣ ನೆರವೇರುತ್ತಿದ್ದಂತೆ ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ನೇತೃತ್ವದಲ್ಲಿ ಸ್ಥಳೀಯರು ಪಟಾಕಿ ಸಿಡಿಸಿದರು. ಲಾಡು, ಹೋಳಿಗೆ ಸೇರಿ ವಿವಿಧ ಸಿಹಿ ಪದಾರ್ಥ ಹಂಚಿದರು. ಭಾರತ ಮಾತೆಗೆ ಜೈಕಾರ ಕೂಗಿದರು. ಉದ್ದದ ತ್ರಿವರ್ಣ ಧ್ವಜ ಹಿಡಿದು ರಸ್ತೆಯುದ್ದಕ್ಕೂ ಮೆರವಣಿಗೆ ಸಹ ನಡೆಸಿದರು.

'ಮೈದಾನದಲ್ಲಿ ಧ್ವಜಾರೋಹಣ ಆಗಬೇಕೆಂಬುದು ಹಲವು ವರ್ಷಗಳ ಕನಸಾಗಿತ್ತು. ಈ ವರ್ಷ ನನಸಾಗಿದೆ. ರಾಜ್ಯ ಸರ್ಕಾರವೇ ಧ್ವಜಾರೋಹಣ ಮಾಡುತ್ತಿರುವುದು ಸಂಭ್ರಮ ತಂದಿದೆ' ಎಂದು ಒಕ್ಕೂಟ ವೇದಿಕೆ ಸದಸ್ಯರು ಖುಷಿ ವ್ಯಕ್ತಪಡಿಸಿದರು.

ಮೈದಾನದೊಳಗೆ ಹೋಗುವ ವಿಚಾರವಾಗಿ ವೇದಿಕೆ ಸದಸ್ಯರು ಹಾಗೂ ಪೊಲೀಸರ ನಡುವೆ ಜಟಾಪಟಿಯೂ ನಡೆಯಿತು. ಮಧ್ಯಪ್ರವೇಶಿಸಿದ ಹಿರಿಯ ಅಧಿಕಾರಿಗಳು, ಪರಿಸ್ಥಿತಿ ತಿಳಿಗೊಳಿಸಿದರು.

ಪೊಲೀಸರ ಕಾವಲು: ಗರುಡಾ ಹಾಗೂ ಕ್ಷಿಪ್ರ ಕಾರ್ಯಪಡೆ (ಆರ್‌ಎಎಫ್) ಸಿಬ್ಬಂದಿ ಜೊತೆಯಲ್ಲಿ 200ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಬಿಜೆಪಿ, ಕಾಂಗ್ರೆಸ್ ಕಚೇರಿಗಳಲ್ಲಿ ಸ್ವಾತಂತ್ರ್ಯೋತ್ಸವ ಸಂಭ್ರಮ

ಬೆಂಗಳೂರು: ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ತಮ್ಮ ಕಚೇರಿಗಳಲ್ಲಿ ಧ್ವಜಾರೋಹಣ ಮಾಡಿ ಸಂಭ್ರಮದಿಂದ ಆಚರಿಸಿದವು.

'ತ್ಯಾಗ ಬಲಿದಾನದಿಂದ ಸ್ವಾತಂತ್ರ್ಯ': ರಾಜ್ಯ ಬಿಜೆಪಿ ಕಚೇರಿಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಧ್ವಜಾರೋಹಣ ಮಾಡಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿ, 'ನಮ್ಮೆಲ್ಲರ ಹಿರಿಯರು ಮತ್ತು ಅಸಂಖ್ಯಾತ ಜನರ ತ್ಯಾಗ- ಬಲಿದಾನಗಳಿಂದ ದೇಶ ಸ್ವಾತಂತ್ರ್ಯ ಪಡೆಯಿತು. 75 ವರ್ಷಗಳ ಕಾಲ ಸೈನಿಕರು ಗಡಿಯನ್ನು ಕಾದಿರುವ ಪರಿಣಾಮ ಸ್ವಾತಂತ್ರ್ಯ ಉಳಿದಿದೆ' ಎಂದರು.

'ಭಾರತವು ಇಂದು ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುತ್ತಿದೆ. ಜಗತ್ತು ಭಾರತದತ್ತ ಗೌರವದಿಂದ ನೋಡುತ್ತಿದೆ. ತಿರಂಗಾಕ್ಕೆ ವಿಶ್ವದಲ್ಲೇ ಮಾನ್ಯತೆ ಬಂದಿದೆ. ರಷ್ಯ-ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಭಾರತೀಯರನ್ನು ತೆರವುಗೊಳಿಸುವಾಗ ತ್ರಿವರ್ಣಧ್ವಜಕ್ಕೆ ಇವೆರಡೂ ದೇಶಗಳ ಸೈನಿಕರು ಗೌರವ ಕೊಟ್ಟಿದ್ದರು' ಎಂದು ಹೇಳಿದರು.

ಸ್ವಾತಂತ್ರ್ಯದ ರಕ್ಷಣೆ ಮಾಡಬೇಕು- ಡಿ.ಕೆ.ಶಿ: ಕೆಪಿಸಿಸಿ ಕಚೇರಿಯಲ್ಲಿ ಧ್ವಜಾರೋಹಣ ಮಾಡಿದ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನಮ್ಮ ನಾಯಕರು ಕಂಡಿದ್ದ ಸಾಮಾಜಿಕ ಸಾಮರಸ್ಯವನ್ನು ತೊಡೆದು ಹಾಕಲು ಆಡಳಿತಾರೂಢ ಪಕ್ಷ ಮತ್ತು ಅವರ ಪ್ರಾಯೋಜಿತ ಸಂಘಟನೆಗಳು ಪ್ರಯತ್ನಿಸುತ್ತಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಪ್ರತಿಯೊಬ್ಬ ಕಾಂಗ್ರೆಸಿಗ ಸ್ವಾತಂತ್ರ್ಯದ ರಕ್ಷಣೆಯ ಸಂಕಲ್ಪ ಮಾಡಬೇಕು. ನಮ್ಮ ನಾಯಕರು ಹೋರಾಟ ಮಾಡಿ ತಂದಿರುವ ಸ್ವಾತಂತ್ರ್ಯವನ್ನು ರಕ್ಷಣೆ ಮಾಡಬೇಕು' ಎಂದರು.

ಧರ್ಮ-ಧರ್ಮಗಳ ನಡುವೆ, ಜಾತಿ- ಜಾತಿಗಳ ನಡುವೆ ವೈಷಮ್ಯ ಹುಟ್ಟು ಹಾಕಿ ಸಾಮಾಜಿಕ ಸಾಮರಸ್ಯ ಕದಡುವ ಸಂಘಟನೆಗಳ ವಿರುದ್ಧ ಹೋರಾಡುವ ಮೂಲಕ ಸ್ವಾತಂತ್ರ್ಯವನ್ನು ಕಾಪಾಡಬೇಕು ಎಂದು ಹೇಳಿದರು.

2,99,176 ಜನರ ವೀಕ್ಷಣೆ, ₹90.50 ಲಕ್ಷ ಸಂಗ್ರಹ

ಫಲಪುಷ್ಪ ಪ್ರದರ್ಶನ: ಅಂತಿಮ ದಿನ ಕಿಕ್ಕಿರಿದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯೋತ್ಸವದ ನಿಮಿತ್ತ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನವನ್ನು ಅಂತಿಮ ದಿನವಾದ ಸೋಮವಾರ 2,99,176 ಜನ ವೀಕ್ಷಿಸಿದರು. ₹90.50 ಲಕ್ಷ ಸಂಗ್ರಹವಾಗಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ ಮಾಹಿತಿ ನೀಡಿದರು.

ಶಾಲೆ-ಕಾಲೇಜು, ಕಚೇರಿಗಳಿಗೆ ರಜೆ ಇದ್ದಿದ್ದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪತಂಡವಾಗಿ ಬಂದರು. ಸಂಜೆ ವೇಳೆ ಎತ್ತ ನೋಡಿದರೂ ಜನ ಜಾತ್ರೆ. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು. ಇದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಉದ್ಯಾನದಲ್ಲಿ ಎಲ್ಲಿ ನೋಡಿದರೂ ತ್ರಿವರ್ಣ ಧ್ವಜಗಳೇ ಕಾಣುತ್ತಿದ್ದವು. ವಿದ್ಯಾರ್ಥಿಗಳು, ಯುವಕರು 'ಭಾರತ್ ಮಾತಾ ಕೀ ಜೈ, ಒಂದೇ ಮಾತರಂ' ಎಂಬ ಜಯಘೋಷ ಕೂಗುತ್ತಿದ್ದರು.

ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಗೆ ಪ್ರಯಾಣಿಕರು ಹರಸಾಹಸ ಪಡುತ್ತಿದ್ದರು.

ಆಗಸ್ಟ್ 5ರಿಂದ 15ರವರೆಗೆ ಒಟ್ಟು ಭೇಟಿ ನೀಡಿದವರು

ವಯಸ್ಕರು	4,27,025
ಮಕ್ಕಳು	62,872
ಶಾಲಾ ವಿದ್ಯಾರ್ಥಿಗಳು	1,60,645
ಪಾಸ್‌ದಾರರು	14,600
ಸ್ವಯಂ ಸೇವಾ ಸಿಬ್ಬಂದಿ, ನಿರ್ವಹಣಾ ಹಾಗೂ ಉಚಿತ ಪ್ರವೇಶದಾರರು	1,66,440
ಒಟ್ಟು ಭೇಟಿ ನೀಡಿದವರು	8,34,552
ಸಂಗ್ರಹವಾದ ಮೊತ್ತ	₹3,31,90,430

ಭಾನುವಾರ ಸಸ್ಯಕಾಶಿಗೆ ಭೇಟಿ ನೀಡಿದವರು

ವಯಸ್ಕರು	1,15,786
ಮಕ್ಕಳು	14,690
ಒಟ್ಟು	2,99,176
ಸಂಗ್ರಹವಾದ ಮೊತ್ತ	₹90,50,790

ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಸೋಮವಾರ ಬಂದಿದ್ದ ಜನಸಾಗರ —ಪ್ರಜಾವಾಣಿ ಚಿತ್ರ/ಖಲೀಲಅಹ್ಮದ ಶೇಖ

'ಕಂಡು ಕೇಳರಿಯದಷ್ಟು ಜನಸಾಗರ'

'ಈ ಬಾರಿ ಫಲಪುಷ್ಪ ಪ್ರದರ್ಶನಕ್ಕೆ ಹಿಂದೆಂದೂ ಕಂಡು ಕೇಳರಿಯದಷ್ಟು ಜನರು ಭೇಟಿ ನೀಡಿದ್ದರು' ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ಹೇಳಿದರು.

'ನೂಕು ನುಗ್ಗಲಿನಲ್ಲಿ ಕಿಲೋ ಮೀಟರ್‌ಗಟ್ಟಲೆ ಸರತಿ ಸಾಲಿನಲ್ಲಿ ನಿಂತು ಗಾಜಿನ ಮನೆಯ ಒಳಗೆ ಹೊಕ್ಕು ಪ್ರದರ್ಶನ ನೋಡಿಯೇ ಹೋಗಬೇಕೆಂಬ ಹಟ ಪ್ರತಿಯೊಬ್ಬರಲ್ಲಿ ಸಾಮಾನ್ಯವಾಗಿತ್ತು. ಆಸೆ, ಕಾತುರ, ಉತ್ಸುಕತೆ ಪ್ರತಿಯೊಬ್ಬರಲ್ಲೂ ಎದ್ದು ಕಾಣುತ್ತಿತ್ತು. ಇದು ಡಾ. ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ಮೇಲಿರುವ ಜನರ ಅಭಿಮಾನ ಮತ್ತು ಪ್ರೀತಿಗೆ ಸಾಕ್ಷಿ' ಎಂದರು.

ಚಿತ್ರಾವಳಿ

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು. ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಬಿಎಂಟಿಸಿ ನಿರ್ದೇಶಕಿ ಜಿ. ರಾಧಿಕಾ, ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮತ್ತು ಜಾಗೃತ ವಿಭಾಗದ ನಿರ್ದೇಶಕ ಸೂರ್ಯ ಸೇನ್, ವೈ. ನವೀನ್ ಭಟ್ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸಿದರು.

ನಗರದ ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಸೋಮವಾರ ವಿದ್ಯಾರ್ಥಿಗಳು ದೇಶಕ್ಕಾಗಿ ಹೋರಾಡಿದವರ ವೇಷ ಧರಿಸಿ, ಕಾರ್ಯಕ್ರಮ ಪ್ರಸ್ತುತಪಡಿಸಿದರು.

ಶೇಷಾದ್ರಿಪುರದಿಂದ ರೇಸ್‌ಕೋರ್ಸ್ ಕಡೆಗೆ ಶಿವಾನಂದ ಮೇಲ್ಸೇತುವೆಯಲ್ಲಿ ಸೋಮವಾರದಿಂದ ವಾಹನ ಸಂಚಾರ ಪ್ರಾಯೋಗಿಕವಾಗಿ ಆರಂಭವಾಯಿತು -ಪ್ರಜಾವಾಣಿ ಚಿತ್ರ/. ಪ್ರಶಾಂತ್ ಎಚ್.ಜಿ.

ಧ್ವಜ ಕಟ್ಟಿ ಇಳಿಯುವಾಗ ಬಿದ್ದು ಟೆಕಿ ಸಾವು

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯ ಮನೆಯೊಂದರ ಮೇಲೆ ತ್ರಿವರ್ಣ ಧ್ವಜ ಕಟ್ಟಿ ಇಳಿಯುವ ಸಂದರ್ಭದಲ್ಲಿ ಕಾಲುಜಾರಿ ಬಿದ್ದು, ವಿಶುಕುಮಾರ್ (33) ಎಂಬುವವರು ಮೃತಪಟ್ಟಿದ್ದಾರೆ.

'ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ವಿಶುಕುಮಾರ್, ಎಚ್‌ಬಿಆರ್ ಲೇಔಟ್ 5ನೇ ಹಂತದಲ್ಲಿ ವಾಸವಿದ್ದರು. ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಇವರ ಸಾವಿನ ಬಗ್ಗೆ ತಂದೆ ನಾರಾಯಣ ಭಟ್ ದೂರು ನೀಡಿದ್ದಾರೆ. ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೆಣ್ಣೂರು ಪೊಲೀಸರು ಹೇಳಿದರು.

'ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆಯಲ್ಲಿ ವಿಶುಕುಮಾರ್ ನೆಲೆಸಿದ್ದರು. ತಾವು ವಾಸವಿದ್ದ ಮನೆಯ ಎರಡನೇ ಮಹಡಿಗೆ ಭಾನುವಾರ ಮಧ್ಯಾಹ್ನ ಹೋಗಿದ್ದ ಅವರು, ಗೋಡೆ ಏರಿ ತ್ರಿವರ್ಣ ಧ್ವಜ ಕಟ್ಟಿದ್ದರು. ನಂತರ, ಕೆಳಗೆ ಇಳಿಯುವಾಗ ಕಾಲು ಜಾರಿ 30 ಅಡಿ ಮೇಲಿಂದ ನೆಲಕ್ಕೆ ಬಿದ್ದಿದ್ದರು.'

'ತಲೆ, ಕೈ-ಕಾಲು ಹಾಗೂ ದೇಹದ ಇತರೆ ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿತ್ತು. ಕುಟುಂಬಸ್ಥರು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ವಿಶುಕುಮಾರ್ ಅವರು ರಾತ್ರಿ ಅಸುನೀಗಿದ್ದಾರೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

COMPUTERS

Hardware

USED COMPUTERS FOR SALE
1. Dual Core/ 2GB Ram/ 250GB HDD/ 15"LCD Rs.6,000/-
For Qty of 10 No's. Rs.5,000/- per system
For Qty of 10 No's. without Monitor Rs.3,000/- per system
LAPTOPS
1. Dual Core/2GB Ram/ 160GB HDD /Adaptor Rs.8,000/-
Courier Charges: Rs.1,000/- per system.
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

BUSINESS

Business Offers

Finance

NRI'S INVESTMENT
And Finance Available On Low Interest Against Properties, Land & Building,Sites,Flats, Converted& Agriculture Lands
Call:7411265189

TIRED OF trading with different platforms. Experience completely new form of trading and secure guarantee income on your investment. We will give you best services and new way of trading. For more details visit- www.globalshippingandtrading.com Contact:9699500429/9324124538

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

PERSONAL

Lost

LOST
I, Venkata Ramana Murthy, have lost my Sale Deed Vide no. 9155-94-95, dated 08/12/1994, while taking xerox.
If found, please Contact :9449046037

Change of Name

I, SUCHITHRA SURYAKANTH PRABHU, residing at No. 20, 16th Cross, 5th Temple Street, Malleshwaram, Bangalore 560003, have changed my name from SUCHITHRA SURYAKANTH PRABHU to SUCHITHRA PRABHU, vide affidavit dated 09/08/2022, sworn before Kundan Babu. M., Notary Bangalore.

I MANJULA R/a #154, 2nd main road Bilekahalli, Dollars colony, BTM 2nd stage, Bangalore- 560076 Have Changed My name To MANJULA NAGARAJAIAH vide Affidavit Dated 13/08/2022 Before Notary Mohammed Hussain Bangalore

I KIRAN R/a. #34/1, S.Kariyappa Road, Kanakapura Main Road, Basavanagudi Bangalore-560004 Have Changed My name To KIRAN NATHA RAM vide Affidavit Dated 13/08/2022 Before Notary Mohammed Hussain Bangalore

I, MAHA LAKSHMI W/o 6498503X-L/NK-Chef (c)-K.RAMASAMY R/a Bolampatti, Villur, Peraiyur, Madurai, TN, changed name from MAHA LAKSHMI to V.MAHALAKSHMI affidavit 15-08-2022 notary K.V.Mani, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಈಗ ಎಲ್ಲೆಲ್ಲೂ ಶೀತಜ್ವರ ಕಾಣಿಸಿಕೊಳ್ಳುತ್ತಿದೆ. ಆದರೆ, ಇದು ಬಹುಮಟ್ಟಿಗೆ ತಂತಾನೇ ಗುಣವಾಗುವ ಆರೋಗ್ಯಸಮಸ್ಯೆ

ಅನುಭವ ಮಂಟಪ ಮಂಜು ಕವಿದ ಘಟ್ಟಗಳಲ್ಲಿ ವಿವೇಕ ಮಾರ್ಗ

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣ: 11 ಕೈದಿಗಳ ಬಿಡುಗಡೆ 8

‘ಅಮೃತ ಭಾರತಿ- ಕರುನಾಡ ಜಾತ್ರೆ’ ಕಾರ್ಯಕ್ರಮದಲ್ಲಿ ಸಿ.ಎಂ ಹೇಳಿಕೆ

ಪರಿಶಿಷ್ಟ ಬಾಲಕ ಸಾವು: ಶಾಸಕ ರಾಜೀನಾಮೆ 9

‘ಆರೆಸ್ಸೆಸ್‌ಗೆ ತಲೆಬಾಗಿರುವೆ’ 8

‘ಅಮೃತ’ದ ಶತಮಾನ ಧ್ಯಾನ

76ನೇ ಸ್ವಾತಂತ್ರ್ಯ ಹಬ್ಬದ ಸಂಭ್ರಮ ● ಐದು ಪ್ರತಿಜ್ಞೆ ಕೈಗೊಳ್ಳಲು ಜನರಿಗೆ ಪ್ರಧಾನಿ ಮೋದಿ ಕರೆ

ನವದೆಹಲಿ (ಪಿಟಿಐ): ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು 2047ರ ಹೊತ್ತಿಗೆ ನನಸು ಮಾಡುವುದಕ್ಕಾಗಿ ದೇಶದ ಜನರು ಐದು ಪ್ರತಿಜ್ಞೆಗಳನ್ನು ಕೈಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ಕೊಟ್ಟಿದ್ದಾರೆ.

ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತಿಸಲು ಗುಲಾಮಗಿರಿಯ ಪ್ರತಿಯೊಂದು ಎಳೆಯನ್ನೂ ನಿರ್ಮೂಲನ ಮಾಡಬೇಕು, ಪರಂಪರೆಯ ಬಗ್ಗೆ ಹೆಮ್ಮೆ ಪಡಬೇಕು, ಏಕತೆ ಮತ್ತು ಸಮಗ್ರತೆ ಕಾಯ್ದುಕೊಳ್ಳಬೇಕು, ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು ನನಸು ಮಾಡಬೇಕು, ನಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು’ ಎಂದು ಪ್ರಧಾನಿ ಹೇಳಿದ್ದಾರೆ.

76ನೇ ಸ್ವಾತಂತ್ರ್ಯೋತ್ಸವ ಭಾಗವಾಗಿ ಕೆಂಪುಕೋಟೆಯಿಂದ ದೇಶವನ್ನು ಉದ್ದೇಶಿಸಿ ಪ್ರಧಾನಿ ಸೋಮವಾರ ಮಾತನಾಡಿದರು. ಸ್ವಾತಂತ್ರ್ಯದ ಶತಮಾನೋತ್ಸವದ ಸಂದರ್ಭದಲ್ಲಿ ದೇಶವು ಅಭಿವೃದ್ಧಿ ಹೊಂದಿದ ದೇಶ ಎಂದು ಕರೆಸಿಕೊಳ್ಳಬೇಕು ಎಂಬ ಕನಸನ್ನು ಅವರು ಬಿತ್ತಿದರು.

76ನೇ ಸ್ವಾತಂತ್ರ್ಯೋತ್ಸವವು ‘ಅಮೃತ ಕಾಲ’ದ ಮೊದಲ ಮುಂಜಾವಿಗೆ ಸಾಕ್ಷಿಯಾಯಿತು ಎಂದು ಅವರು ಹೇಳಿದರು. ಜನರು ಸ್ವ-ಹೊಗಳಿಕೆಯಲ್ಲಿ ನಿರತರಾಗಿ 75 ವರ್ಷಗಳ ಸಾಧನೆಗಾಗಿ ಬೆನ್ನು ತಟ್ಟುತ್ತಾ ಕುಳಿತರೆ ದೇಶದ ಕನಸು ಮರೆಯಾಗಿ ಹೋಗಬಹುದು ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು.

ಅದಕ್ಕೂ ಮೊದಲು ಅವರು ಕೆಂಪುಕೋಟೆಯಲ್ಲಿ ತ್ರಿವರ್ಣ ಧ್ವಜಾರೋಹಣ ಮಾಡಿದರು. ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಫಿರಂಗಿಗಳಿಂದ 21 ಸುತ್ತು ಕುಶಾಲು ತೋಪು ಹಾರಿಸಲಾಯಿತು. ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಫಿರಂಗಿಗಳನ್ನು ಸ್ವಾತಂತ್ರ್ಯದ ಬಳಿಕದ 75 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಬಳಸಲಾಗಿದೆ ಎಂಬುದನ್ನು ಪ್ರಧಾನಿ ತಮ್ಮ ಭಾಷಣದಲ್ಲಿ ಹೇಳಿದರು.

ಸಹಕಾರಿ ಒಕ್ಕೂಟ ವ್ಯವಸ್ಥೆ ಇರಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸಿದ ಅವರು, ದೇಶದ ವೈವಿಧ್ಯ, ಪೌರರ ನಡುವಣ ಒಗ್ಗಟ್ಟು, ಲಿಂಗ ಸಮಾನತೆ, ಸಂಶೋಧನೆ ಮತ್ತು ನಾವೀನ್ಯವನ್ನು ಸಂಭ್ರಮಿಸಬೇಕಿದೆ ಎಂದರು.

ಪ್ರಧಾನಿ ಭಾಷಣವು ಹಲವು ಬುದ್ಧಿಮಾತುಗಳಿಂದ ಕೂಡಿತ್ತು. 82 ನಿಮಿಷಗಳಷ್ಟು ದೀರ್ಘವಾಗಿತ್ತು. ಮಹಿಳೆಯರಿಗೆ ಅವಮಾನ ಆಗುವಂತಹ ವಿಕೃತಿಗಳು ನಮ್ಮ ವರ್ತನೆಯಲ್ಲಿ ಇದ್ದು, ಅವುಗಳನ್ನು ತೊಡೆದು ಹಾಕಲು ಹೇಳಿದರು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಪ್ರಧಾನಿ ನರೇಂದ್ರ ಮೋದಿ ಅವರು 76ನೇ ಸ್ವಾತಂತ್ರ್ಯೋತ್ಸವ ಭಾಗವಾಗಿ ಕೆಂಪುಕೋಟೆಯಿಂದ ದೇಶವನ್ನು ಉದ್ದೇಶಿಸಿ ಸೋಮವಾರ ಮಾತನಾಡಿದರು —ಪಿಟಿಐ ಚಿತ್ರ

ನೆಹರೂ, ಸಾವರ್ಕರ್ ನೆನಪು

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ, ಹಿಂದುತ್ವವಾದಿ ವಿ.ಡಿ. ಸಾವರ್ಕರ್, ಸಮಾಜವಾದಿ ನಾಯಕ ರಾಮ ಮನೋಹರ ಲೋಹಿಯಾ, ಕ್ರಾಂತಿಕಾರಿ ಅಶ್ಫಕುಲ್ಲಾ ಖಾನ್ ಮುಂತಾದವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಸ್ಮರಿಸಿದರು. ಆದಿವಾಸಿಗಳು ಮತ್ತು ಮಹಿಳಾ ಕ್ರಾಂತಿಕಾರಿಗಳನ್ನೂ ಅವರು ನೆನಪಿಸಿ ಕೊಂಡರು. ವಿವಿಧ ಸಿದ್ಧಾಂತಗಳು ಮತ್ತು ವಿವಿಧ ವರ್ಗಗಳ 20ಕ್ಕೂ ಹೆಚ್ಚು ನಾಯಕರ ಹೆಸರನ್ನು ಅವರು ಉಲ್ಲೇಖಿಸಿದರು.

‘ಪೂಜ್ಯ ಬಾಪು (ಮಹಾತ್ಮ ಗಾಂಧಿ), ನೇತಾಜಿ ಸುಭಾಷ್‌ಚಂದ್ರ ಬೋಸ್, ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ವೀರ ಸಾವರ್ಕರ್ ಅವರು ಕರ್ತವ್ಯಕ್ಕಾಗಿ ಇಡೀ ಜೀವನವನ್ನು ಮುಡಿಪಾಗಿಟ್ಟರು’ ಎಂದು ಮೋದಿ ಹೇಳಿದರು.

ಕೃಷಿ ಕಾರ್ಮಿಕರ ಮಕ್ಕಳಿಗೂ ‘ವಿದ್ಯಾನಿಧಿ’: ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂರಹಿತರಾಗಿರುವ 16 ಲಕ್ಷ ಕೃಷಿ ಕಾರ್ಮಿಕರ ಕುಟುಂಬದ ಮಕ್ಕಳಿಗೆ ‘ರೈತ ವಿದ್ಯಾನಿಧಿ’ ಯೋಜನೆಯ ಸೌಲಭ್ಯಗಳನ್ನು ವಿಸ್ತರಿಸಲಾಗುವುದು. ಪೌಷ್ಟಿಕ ಆಹಾರ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ 76ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಭೂರಹಿತ ಕೃಷಿ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳನ್ನು ಆದ್ಯತಾ ವಲಯಗಳೆಂದು ಗುರುತಿಸಿ, 4,050 ಅಂಗನವಾಡಿಗಳನ್ನು ತೆರೆಯಲಾಗುವುದು. ಇದರಿಂದ 8,100 ಮಹಿಳೆಯರಿಗೆ ಉದ್ಯೋಗ ದೊರಕಲಿದೆ. ಪೌಷ್ಟಿಕ ಆಹಾರದ ಜತೆಗೆ, ಶಾಲಾಪೂರ್ವ ಶಿಕ್ಷಣಕ್ಕೆ ಆದ್ಯತೆ ನೀಡಲಾಗುವುದು ಎಂದರು. ಕುಂಬಾರ, ಕಮ್ಮಾರ, ಬಡಗಿ, ಶಿಲ್ಪಿಗಳು, ಭಜಂತ್ರಿ, ಬುಟ್ಟಿ ಹೆಣೆಯುವ ಕುಶಲಕರ್ಮಿಗಳಿಗೆ ತಲಾ ₹ 50 ಸಾವಿರ ಸಾಲ–ಸಹಾಯ ಧನ ಯೋಜನೆ ರೂಪಿಸಲಾಗಿದೆ. ರಾಜ್ಯದ ಎಲ್ಲ ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಶೌಚಾಲಯ ಕಡ್ಡಾಯಗೊಳಿಸಲಾಗಿದೆ. ಅದಕ್ಕಾಗಿ ₹ 250 ಕೋಟಿ ಮೀಸಲಿಡಲಾಗಿದೆ ಎಂದು ವಿವರ ನೀಡಿದರು.

4ನೇ ಪುಟ ನೋಡಿ

ನಾರಿಶಕ್ತಿಗೆ ಬಲ, ಲಿಂಗ ಸಮಾನತೆಗೆ ಒತ್ತು

‘ನಮ್ಮ ನಡತೆಯೊಳಗೆ ವಿಕೃತಿಯೊಂದು ನುಸುಳಿದೆ. ಕೆಲವೊಮ್ಮೆ ನಾವು ಮಹಿಳೆಯರನ್ನು ಅವಮಾನಿಸುತ್ತೇವೆ. ಇಂತಹ ವರ್ತನೆಯನ್ನು ಬಿಟ್ಟುಬಿಡುತ್ತೇವೆ ಎಂಬ ಪ್ರತಿಜ್ಞೆ ಮಾಡಬಹುದೇ’ ಎಂದು ಮೋದಿ ಪ್ರಶ್ನಿಸಿದ್ದಾರೆ. ಮಹಿಳೆಯ ಘನತೆಯನ್ನು ಕುಗ್ಗಿಸುವ ಏನನ್ನೂ ಮಾಡಬಾರದು. ‘ನಾರಿ ಶಕ್ತಿ’ಯನ್ನು ಬೆಂಬಲಿಸಬೇಕಾದ ಅಗತ್ಯ ಇದೆ ಎಂದೂ ಅವರು ಹೇಳಿದ್ದಾರೆ.

ಲಿಂಗ ಸಮಾನತೆಯು ಭಾರತದ ಒಗ್ಗಟ್ಟಿಗೆ ಬಹಳ ಮುಖ್ಯ. ಭಾರತದ ವೈವಿಧ್ಯವನ್ನು ನಾವು ಕುಟುಂಬದೊಳಗೂ ಸಂಭ್ರಮಿಸಬೇಕು. ಮಗ ಮತ್ತು ಮಗಳನ್ನು ಸಮಾನ ಎಂದು ನೋಡಿದರೆ ಒಗ್ಗಟ್ಟಿನ ಬೀಜ ಬಿತ್ತಿದಂತಾಗುತ್ತದೆ. ಅದು ಸಾಧ್ಯವಾಗದಿದ್ದರೆ ಒಗ್ಗಟ್ಟಿನ ಮಂತ್ರವು ಅನುರಣಿಸದು ಎಂದು ಪ್ರಧಾನಿ ಹೇಳಿದ್ದಾರೆ.

ಕುಟುಂಬವು ಹಲವು ತಲೆಮಾರುಗಳ ಕಾಲ ಲಿಂಗ ತಾರತಮ್ಯದ ಬೀಜ ಬಿತ್ತಿದರೆ ಸಮಾಜದಲ್ಲಿ ಒಗ್ಗಟ್ಟಿನ ಸ್ಫೂರ್ತಿಯು ಕಾಣ ಸಿಗದು. ಲಿಂಗ ಸಮಾನತೆಯು ನಮ್ಮ ಮೊದಲ ಭರವಸೆ. ಒಗ್ಗಟ್ಟಿನ ಮಹತ್ವದ ಮಾನದಂಡವೇ ಲಿಂಗ ಸಮಾನತೆ ಎಂದು ಅವರು ವಿವರಿಸಿದರು.

ಚೂರಿ ಇರಿತ, ಕಲ್ಲೇಟು: ಇಬ್ಬರಿಗೆ ಗಾಯ

ಫ್ಲೆಕ್ಸ್ ವಿವಾದ: ಶಿವಮೊಗ್ಗ ಉದ್ವಿಗ್ನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ವೀರ ಸಾವರ್ಕರ್ ಹಾಗೂ ಟಿಪ್ಪು ಸುಲ್ತಾನ್ ಅವರ ಫ್ಲೆಕ್ಸ್ ಅಳವಡಿಸುವ ಕುರಿತು ಸೋಮವಾರ ಇಲ್ಲಿ ಎರಡು ಗುಂಪುಗಳ ನಡುವೆ ವಾಗ್ವಾದ ನಡೆದಿದ್ದು, ಕೆಲಹೊತ್ತು ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು. ಘಟನೆ ಬೆನ್ನಲ್ಲೇ ಪ್ರೇಮ್‌ಸಿಂಗ್ ಎಂಬುವವರಿಗೆ ಚೂರಿಯಿಂದ ಇರಿದಿದ್ದು, ಸದ್ದಾಂ ಎಂಬುವವರಿಗೆ ಕಲ್ಲೇಟಿನಿಂದ ಗಾಯವಾಗಿದೆ.

ಇಲ್ಲಿನ ಅಮೀರ್ ಅಹಮದ್ ವೃತ್ತದಲ್ಲಿ ಗುಂಪೊಂದು ವೀರ ಸಾವರ್ಕರ್ ಫ್ಲೆಕ್ಸ್ ಅಳವಡಿಕೆಗೆ ಮುಂದಾದಾಗ ಮತ್ತೊಂದು ಗುಂಪು ಆಕ್ಷೇಪಿಸಿತು. ನಾವು ಟಿಪ್ಪು ಸುಲ್ತಾನ್ ಫ್ಲೆಕ್ಸ್ ಹಾಕುತ್ತೇವೆ ಎಂದು ಪಟ್ಟುಹಿಡಿಯಿತು. ಉಭಯ ಗುಂಪುಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದು, ಬಿಗುವಿನ ಸ್ಥಿತಿ ನಿರ್ಮಾಣವಾಯಿತು.

ಆಗ ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಇದೇ ವೇಳೆ ತರಕಾರಿ ಮಾರುಕಟ್ಟೆ ಬಳಿ ಪ್ರೇಮ್‌ಸಿಂಗ್ ಎಂಬುವವರಿಗೆ ದುಷ್ಕರ್ಮಿಗಳು ಚೂರಿಯಿಂದ ಇರಿದರು. ಈ ಸುದ್ದಿ ಹರಡುತ್ತಿದ್ದಂತೆ ಪ್ರತಿಭಟನೆಯು ತೀವ್ರಗೊಂಡಿತು. ಪ್ರತಿಭಟನಕಾರರು ಹಾಗೂ ಪೊಲೀಸರ ನಡುವೆ ನೂಕಾಟವೂ ನಡೆಯಿತು.

ಚೂರಿ ಇರಿತಕ್ಕೆ ಒಳಗಾಗಿರುವ ಪ್ರೇಮ್‌ಸಿಂಗ್ ಅವರನ್ನು ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ‘ಅವರು ಅಪಾಯದಿಂದ ಪಾರಾಗಿದ್ದಾರೆ’ ಎಂದು ಆಸ್ಪತ್ರೆಯ ಅಧೀಕ್ಷಕ ಡಾ.ಶ್ರೀಧರ್ ತಿಳಿಸಿದ್ದಾರೆ.

ಅಮಿರ್ ಅಹಮ್ಮದ್ ವೃತ್ತದಲ್ಲಿ ಎರಡೂ ಗುಂಪಿನವರು ಗಣನೀಯ ಸಂಖ್ಯೆಯಲ್ಲಿ ಸೇರಿದ್ದರಿಂದ, ಪರಸ್ಪರ ಕೈ, ಕೈ ಮಿಲಾಯಿಸುವ ಹಂತವನ್ನು ತಲುಪಿತು. ಗುಂಪುಗಳ ನಡುವೆ ಘರ್ಷಣೆಯನ್ನು ತಪ್ಪಿಸಲು ಪೊಲೀಸರು ಅಲ್ಲಿದ್ದ ಫ್ಲೆಕ್ಸ್ ತೆಗೆದು, ರಾಷ್ಟ್ರಧ್ವಜ ಹಾರಿಸಿದರು.

8ನೇ ಪುಟ ನೋಡಿ

ಶಿವಮೊಗ್ಗದ ಶಿವಪ್ಪ ನಾಯಕ ವೃತ್ತದಲ್ಲಿ ಸೋಮವಾರ ವಿಎಚ್‌ಪಿ, ಬಜರಂಗದಳ ಸದಸ್ಯರು, ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಇಬ್ಬರ ಬಂಧನ, ನಿಷೇಧಾಜ್ಞೆ ಜಾರಿ

ಪ್ರೇಮ್ ಸಿಂಗ್ ಅವರಿಗೆ ಚೂರಿ ಇರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದೊಡ್ಡಪೇಟೆ ಠಾಣೆ ಪೊಲೀಸರು ಇಬ್ಬರನ್ನು ಸೋಮವಾರ ತಡರಾತ್ರಿ ಬಂಧಿಸಿದ್ದಾರೆ. ಇಲ್ಲಿನ ಜೆ.ಸಿ.ನಗರ ಎರಡನೇ ಕ್ರಾಸ್ ನಿವಾಸಿ ನದೀಮ್ ಅಲಿಯಾಸ್ ನೌಶಾದ್ ಅಲಿ (25) ಹಾಗೂ ಬುದ್ಧ ನಗರ ಎರಡನೇ ಕ್ರಾಸ್ ನಿವಾಸಿ ಅಬ್ದುಲ್ ರೆಹಮಾನ್ (25) ಬಂಧಿತರು.

ನಿಷೇಧಾಜ್ಞೆ: ಮುಂಜಾಗ್ರತೆಯಾಗಿ ಶಿವಮೊಗ್ಗ, ಭದ್ರಾವತಿ ನಗರಗಳಲ್ಲಿ ಮಂಗಳವಾರ ಮಧ್ಯರಾತ್ರಿವರೆಗೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಎರಡೂ ನಗರಗಳಲ್ಲಿ ಶಾಲಾ, ಕಾಲೇಜುಗಳಿಗೆ ಮಂಗಳವಾರ ರಜೆ ಘೋಷಿಸಲಾಗಿದೆ ಹಾಗೂ ದ್ವಿಚಕ್ರ ವಾಹನಗಳಲ್ಲಿ ಹಿಂಬದಿ ಸವಾರರ ಪ್ರಯಾಣವನ್ನು ನಿರ್ಬಂಧಿಸಲಾಗಿದೆ.

ಸಾಲದ ಬಡ್ಡಿದರ ಹೆಚ್ಚಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ವಿವಿಧ ಸಾಲಗಳ ಮೇಲಿನ ಬಡ್ಡಿದರವನ್ನು ಶೇ 0.5ರವರೆಗೆ ಹೆಚ್ಚಿಸಿದೆ. ಪರಿಷ್ಕೃತ ಬಡ್ಡಿದರಗಳು ಸೋಮವಾರದಿಂದಲೇ ಅನ್ವಯ ಆಗಲಿವೆ.

ಎಸ್‌ಬಿಐ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ಆಧಾರಿತ ಸಾಲದ ದರ (ಇಬಿಎಲ್‌ಆರ್) ಶೇ 7.55 ರಿಂದ ಶೇ 8.05ಕ್ಕೆ ಏರಿಕೆ ಆಗಿದೆ. ರೆಪೊ ಆಧಾರಿತ ಸಾಲದ ದರ (ಆರ್‌ಎಲ್‌ಎಲ್‌ಆರ್) ಶೇ 7.15 ರಿಂದ 7.65ಕ್ಕೆ ಏರಿಕೆ ಆಗಿದೆ.

ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ ದರವನ್ನು (ಎಂಸಿಎಲ್‌ಆರ್) ಶೇ 0.20ರಷ್ಟು ಏರಿಕೆ ಮಾಡಲಾಗಿದೆ. ಇದರಿಂದಾಗಿ ಒಂದು ವರ್ಷದ ಅವಧಿಯ ಎಂಸಿಎಲ್‌ಆರ್ ಶೇ 7.50 ರಿಂದ ಶೇ 7.70ಕ್ಕೆ ಏರಿಕೆ ಆಗಿದೆ.

ಸುದರ್ಶನ್ ಜ್ಯುವೆಲರ್ಸ್
ಚಿನ್ನ ✦ ಬೆಳ್ಳಿ ✦ ಚಿನ್ನದ ಆಭರಣಗಳು
ಗೌರಿ ಗಣೇಶ ಹಬ್ಬದ ಕೊಡುಗೆ ವೆಸ್ಟೇಜ್ 4% ಮಾತ್ರ
₹4995/-gm
ಬೆಳ್ಳಿ ₹ 56,000/-
ಚಿಕ್ಕಪೇಟೆ: 41300355
Gangothri *CA

ರಾಜೀನಾಮೆ ಕೊಟ್ಟು ಮಾತನಾಡಲಿ: ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ನಡಿತಾ ಇಲ್ಲ. ಮ್ಯಾನೇಜ್ ಮಾಡ್ತಾ ಇದ್ದೀವಷ್ಟೇ’ ಎಂಬ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರ ಹೇಳಿಕೆಗೆ ತೋಟಗಾರಿಕಾ ಸಚಿವ ಮುನಿರತ್ನ ಕಿಡಿಕಾರಿದ್ದು, ‘ಸರ್ಕಾರದ ವಿರುದ್ಧ ಮಾಧುಸ್ವಾಮಿ ಏನಾದರೂ ಮಾತನಾಡುವುದಿದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ಆ ಬಳಿಕ ಮಾತನಾಡಲಿ’ ಎಂದಿದ್ದಾರೆ.

ಕೋಲಾರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮಾಧುಸ್ವಾಮಿ ಸರ್ಕಾರದ ಭಾಗ. ಸಚಿವ ಸಂಪುಟದ ಎಲ್ಲ ನಿರ್ಧಾರಗಳಲ್ಲೂ ಅವರು ಭಾಗಿಯಾಗಿರುತ್ತಾರೆ. ಪ್ರತಿ ವಿಷಯದ ಕುರಿತೂ ಚರ್ಚಿಸುತ್ತಾರೆ. ಸರ್ಕಾರ ನಡೆಯುತ್ತಿಲ್ಲ ಎಂಬ ಹೇಳಿಕೆ ಕೊಟ್ಟಿದ್ದರೆ ಅದರಲ್ಲಿ ಅವರೂ ಪಾಲುದಾರರಾಗುತ್ತಾರೆ. ಆ ಹೇಳಿಕೆ ಅವರಿಗೂ ಅನ್ವಯಿಸುತ್ತದೆ. ಸಚಿವರಾಗಿ, ಜವಾಬ್ದಾರಿಯುತ ಸ್ಥಾನದಲ್ಲಿದ್ದು ಇಂಥ ಹೇಳಿಕೆ ನೀಡುವುದು ಅವರಿಗೆ ಶೋಭೆ ತರುವುದಿಲ್ಲ’ ಎಂದರು.

ವೈಯಕ್ತಿಕ ಹೇಳಿಕೆ: ‘ಸರ್ಕಾರ ಸರಿಯಾಗಿ ನಡೆಯುತ್ತಿಲ್ಲ ಎಂಬ ಮಾಧುಸ್ವಾಮಿ ಅವರ ಹೇಳಿಕೆ ವೈಯಕ್ತಿಕವಾದುದು. ಆದರೂ ಅವರು ಆ ರೀತಿ ಹೇಳಿಕೆ ಕೊಡಬಾರದಿತ್ತು’ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದ್ದಾರೆ.

> **ಸಚಿವ ಮಾಧುಸ್ವಾಮಿ ಸರ್ಕಾರದ ಬಗ್ಗೆ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಅವರದ್ದೇ ಅಲ್ಲ. ಇದೆಲ್ಲ ವಿರೋಧ ಪಕ್ಷಗಳ ಕುತಂತ್ರ.ಇದೆಲ್ಲ ಶಕುನಿಗಳ ಕೆಲಸ**
> **ಡಾ.ಸಿ.ಎನ್.ಅಶ್ವತ್ಥನಾರಾಯಣ,** ಉನ್ನತ ಶಿಕ್ಷಣ ಸಚಿವ

ಹಾಸನದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಬೊಮ್ಮಾಯಿ ಪ್ರಾಮಾಣಿಕವಾಗಿ ಈ ರಾಜ್ಯಕ್ಕೆ ಏನೇನು ಮಾಡಬಹುದು, ಅದಕ್ಕಾಗಿ ಹಗಲಿರುಳು ಶ್ರಮಪಡುತ್ತಿದ್ದಾರೆ. ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಕೆಲಸ ಮಾಡುತ್ತಿದ್ದಾರೆ. ಸಂಪುಟದಲ್ಲಿರುವ ನಾವೆಲ್ಲ ಒಂದೇ. ಏನಾದರೂ ಇದ್ದರೆ ಮುಖ್ಯಮಂತ್ರಿ ಅವರಿಗೆ ಹೇಳಬಹುದಿತ್ತು. ಬಹಿರಂಗವಾಗಿ ಹೇಳುವುದು ಸರಿಯಲ್ಲ’ ಎಂದೂ ಅಭಿಪ್ರಾಯ ವ್ಯಕ್ತಪಡಿಸಿದರು.

‘ಸಚಿವ ಸಂಪುಟದ ಎಲ್ಲ ಸಹೋದ್ಯೋಗಿಗಳು ಮುಖ್ಯಮಂತ್ರಿಯವರ ಜತೆಗೆ ಇದ್ದೇವೆ. ನಮಗೆ ವಹಿಸಿರುವ ಜವಾಬ್ದಾರಿಗಳನ್ನು ಅರಿತು ಆಯಾ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ಮುಂದೆ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ’ ಎಂದೂ ಗೋಪಾಲಯ್ಯ ಹೇಳಿದರು.

ತ್ರಿ–ಡಿ ಮುದ್ರಿತ ಕೃತಕ ಕಾರ್ನಿಯಾ

ಹೈದರಾಬಾದ್ (ಪಿಟಿಐ): ನಗರದ ವಿಜ್ಞಾನಿಗಳು ಹಾಗೂ ಸಂಶೋಧಕರು ತ್ರಿ–ಡಿ ಮುದ್ರಿತ ಕೃತಕ ಕಾರ್ನಿಯಾ ಅಭಿವೃದ್ಧಿಪಡಿಸಿ ಅದನ್ನು ಮೊಲವೊಂದರ ಕಣ್ಣಿಗೆ ಕಸಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಭಾರತದ ಮಟ್ಟಿಗೆ ಇದು ಮೊದಲ ಪ್ರಯೋಗವಾಗಿದೆ.

‘ಎಲ್.ವಿ.ಪ್ರಸಾದ್ ನೇತ್ರ ಸಂಸ್ಥೆ (ಎಲ್‌ವಿಪಿಇಐ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಹೈದರಾಬಾದ್ (ಐಐಟಿಎಚ್) ಹಾಗೂ ಸೆಂಟರ್ ಫಾರ್ ಸೆಲ್ಯೂಲರ್ ಆ್ಯಂಡ್ ಮೊಲಿಕ್ಯುಲರ್ ಬಯಾಲಜಿ (ಸಿಸಿಎಂಬಿ) ಸಂಸ್ಥೆಯ ಸಂಶೋಧಕರು ವ್ಯಕ್ತಿಯೊಬ್ಬರು ದಾನ ಮಾಡಿದ್ದ ಕಾರ್ನಿಯಾ ಅಂಗಾಂಶದಿಂದ ಇದನ್ನು ಅಭಿವೃದ್ಧಿಪಡಿಸಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

3ನೇ ಪುಟ ನೋಡಿ

ಪ್ರಧಾನಿ ಮೋದಿಗೆ ‘ನಾರಿಶಕ್ತಿ’ ತರಾಟೆ 4

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೃಷ್ಣಾ, ಕಾವೇರಿ ನದಿಗಳ ಪುನರುಜ್ಜೀವನಕ್ಕೆ ಡಿಪಿಆರ್

● ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ಕೃಷ್ಣಾ, ಕಾವೇರಿ ನದಿಗಳ ಪುನರುಜ್ಜೀವನಕ್ಕೆ ಕೇಂದ್ರ ಸರ್ಕಾರ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದೆ. ಈ ನದಿಗಳ ಪುನರುಜ್ಜೀವನಕ್ಕೆ ₹5,396 ಕೋಟಿ ವೆಚ್ಚ ಮಾಡಲಾಗುತ್ತದೆ.

ಭಾರತೀಯ ಅರಣ್ಯ, ಸಂಶೋಧನೆ ಮತ್ತು ಶಿಕ್ಷಣ ಸಂಸ್ಥೆಯು (ಐಸಿಎಫ್‌ಆರ್‌ಇ) ದೇಶದ 13 ನದಿಗಳ ಪುನರುಜ್ಜೀವನಕ್ಕಾಗಿ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಡಿಪಿಆರ್ ಸಿದ್ಧಪಡಿಸಿ ಕೊಟ್ಟಿದೆ. ಈ ನದಿಗಳು 18,90,110 ಚದರ ಕಿ.ಮೀ. ಜಲಾನಯನ ಪ್ರದೇಶವನ್ನು ಒಳಗೊಂಡಿವೆ.

ನದಿಗಳ ಜಲಾನಯನ ಪ್ರದೇಶಗಳಲ್ಲಿ ಅರಣ್ಯೀಕರಣ, ಕೊಳಚೆ ನೀರಿನ ಸಂಸ್ಕರಣಾ ಘಟಕಗಳ ಸ್ಥಾಪನೆ ಹಾಗೂ ಇನ್ನಿತರ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಈ ನದಿಗಳ ಪುನರುಜ್ಜೀವನಕ್ಕೆ ಮುಂದಿನ ಐದು ವರ್ಷಗಳಲ್ಲಿ ₹19,342 ಕೋಟಿ ಖರ್ಚು ಮಾಡಲು ಉದ್ದೇಶಿಸಲಾಗಿದೆ. ರಾಷ್ಟ್ರೀಯ ಅರಣ್ಯೀಕರಣ, ಪರಿಸರ– ಅಭಿವೃದ್ಧಿ ಮಂಡಳಿಯ ಅನುದಾನದ ನೆರವಿನಿಂದ ಈ ಯೋಜನೆ ಅನುಷ್ಠಾನಗೊಂಡ ಬಳಿಕ ದೇಶದಲ್ಲಿ ಅರಣ್ಯ ಪ್ರದೇಶವು 7,417 ಚದರ ಕಿ.ಮೀ. ಹೆಚ್ಚಾಗಲಿದೆ ಎಂದು ಇಲಾಖೆಯು ಅಂದಾಜಿಸಿದೆ.

ಕೃಷ್ಣಾ ಹಾಗೂ ಕಾವೇರಿ ನದಿಗಳ ಜಲಾನಯನ ಪ್ರದೇಶಗಳಲ್ಲಿ ಗಿಡಗಳನ್ನು ನೆಡುವುದು, ಹಸಿರು ಹೊದಿಕೆಯನ್ನು ಹೆಚ್ಚಿಸುವುದು, ಮಣ್ಣಿನ ಸವಕಳಿ ಹಾಗೂ ಪ್ರವಾಹವನ್ನು ತಡೆಗಟ್ಟುವುದು, ಮರುಪೂರಣದ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು, ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಸ್ಥಾಪನೆ ಮಾಡುವುದು ಈ ಯೋಜನೆಯಲ್ಲಿ ಸೇರಿದೆ. ಮರದ ಜಾತಿ, ಔಷಧೀಯ ಸಸ್ಯಗಳು, ಹುಲ್ಲು ನಾಟಿ, ಪೊದೆ, ಹಣ್ಣಿನ ಸಸಿಗಳನ್ನು ನೆಡಲು ಯೋಜಿಸಲಾಗಿದೆ. ಬಹು ಇಲಾಖೆಗಳ ಸಹಯೋಗದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಅರಣ್ಯ ಸಚಿವಾಲಯವು ಕರ್ನಾಟಕ ಸರ್ಕಾರಕ್ಕೆ ಡಿಪಿಆರ್ ಕಳುಹಿಸಿ ಯೋಜನೆಗೆ ಸಹಭಾಗಿತ್ವ ವಹಿಸುವಂತೆ ಕೇಳಿಕೊಂಡಿದೆ.

ಅರಣ್ಯ ಇಲಾಖೆ, ಕೃಷಿ, ತೋಟಗಾರಿಕೆ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಅನುದಾನಗಳನ್ನು ಬಳಸಿಕೊಂಡು ಈ ನದಿಗಳ ಪುನರುಜ್ಜೀವನ ಕಾರ್ಯ ಕೈಗೆತ್ತಿಕೊಳ್ಳಲಿವೆ ಎಂದು ಕೇಂದ್ರ ಪರಿಸರ ಸಚಿವಾಲಯದ ಮೂಲಗಳು ತಿಳಿಸಿವೆ.

ಯಾವ ನದಿ ಪುನರುಜ್ಜೀವನಕ್ಕೆ ಎಷ್ಟು ಮೊತ್ತ	(₹ಕೋಟಿಗಳಲ್ಲಿ)
ಯಮುನಾ	3,868
ಕಾವೇರಿ	3,069
ಕೃಷ್ಣಾ	2,037
ನರ್ಮದಾ	2,127
ಗೋದಾವರಿ	1,700
ಮಹಾನದಿ	1,370

ಯೋಜನಾ ವ್ಯಾಪ್ತಿಯ ಪ್ರದೇಶಗಳು (ಚದರ ಕಿ.ಮೀ.ಗಳಲ್ಲಿ)

ನದಿ	ಪ್ರದೇಶಗಳು
ಯಮುನಾ	5,229
ಕೃಷ್ಣಾ	2,315
ಕಾವೇರಿ	1,867
ಗೋದಾವರಿ	849
ನರ್ಮದಾ	800

ಪ್ರಜಾವಾಣಿ ವಿಶೇಷ

ಏಳೂವರೆ ಕಿಲೋಮೀಟರ್ ನಡೆದ ನಾಯಕರು, ಕಾರ್ಯಕರ್ತರು

ಸ್ವಾತಂತ್ರ್ಯ ನಡಿಗೆ: ಕಾಂಗ್ರೆಸ್ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ಪಕ್ಷ ನಗರದಲ್ಲಿ ‘ಸ್ವಾತಂತ್ರ್ಯ ನಡಿಗೆ’ಯ ದರ್ಶನ ಮಾಡಿಸಿತು. ರಾಷ್ಟ್ರಧ್ವಜ ಹಿಡಿದು ಒಂದು ಲಕ್ಷಕ್ಕೂ ಹೆಚ್ಚು ಮಂದಿ ಸುಮಾರು ಏಳೂವರೆ ಕಿಲೋಮೀಟರ್ ಹೆಜ್ಜೆ ಹಾಕುವ ಮೂಲಕ ರಾಜಧಾನಿಯಲ್ಲಿ ಸ್ವಾತಂತ್ರ್ಯದ ಕಹಳೆ ಮೊಳಗಿಸಿದರು.

ಮೆಜೆಸ್ಟಿಕ್‌ನ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಪಾದಯಾತ್ರೆ ಆರಂಭವಾಯಿತು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಡಾ.ಜಿ.ಪರಮೇಶ್ವರ ಸೇರಿ ಕಾಂಗ್ರೆಸ್ ನಾಯಕರ ದಂಡು ಪಾದಯಾತ್ರೆಯಲ್ಲಿ ಭಾಗವಹಿಸಿತ್ತು. ಆ ಮೂಲಕ ಕಾಂಗ್ರೆಸ್ ಮತ್ತೊಮ್ಮೆ ಒಗ್ಗಟ್ಟು ಪ್ರದರ್ಶಿಸಿತು.

ರಾಜ್ಯದ ಹಲವೆಡೆಯಿಂದ ಬಂದಿದ್ದ ಪಕ್ಷದ ಕಾರ್ಯಕರ್ತರು ಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಪಕ್ಷದಿಂದ ವಿತರಿಸಿದ್ದ ಟೀ–ಶರ್ಟ್ ಮತ್ತು ಟೋಪಿಗಳನ್ನು ಧರಿಸಿದ್ದ ವಿದ್ಯಾರ್ಥಿಗಳು ಮತ್ತು ಮಹಿಳೆಯರು ಪಾದಯಾತ್ರೆಯಲ್ಲಿ ನಡೆಯುವ ಜತೆಗೆ ಕಲಾ ತಂಡಗಳೊಂದಿಗೆ ಕುಣಿದು ಕುಪ್ಪಳಿಸಿದರು. ಕಾರ್ಯಕರ್ತರ ಕೇಕೆ, ಹರ್ಷೋದ್ಗಾರ, ’ವಂದೇ ಮಾತರಂ‘ ಘೋಷಣೆ ಮುಗಿಲು ಮುಟ್ಟಿತ್ತು. ಜನಸ್ತೋಮ ಕಂಡು ಸಂಭ್ರಮದಲ್ಲಿದ್ದ ಡಿ.ಕೆ. ಶಿವಕುಮಾರ್ ಕೂಡ ಕಲಾ ತಂಡಗಳ ಮಧ್ಯ ತಾಳಕ್ಕೆ ಹೆಜ್ಜೆ ಹಾಕಿದರು.

8ನೇ ಪುಟ ನೋಡಿ

ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಕಾಂಗ್ರೆಸ್ ಬೆಂಗಳೂರಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ‘ಸ್ವಾತಂತ್ರ್ಯ ನಡಿಗೆ’ಯು ಶೇಷಾದ್ರಿ ರಸ್ತೆಯ ಮೇಲ್ಸೇತುವೆಯಲ್ಲಿ ಸಾಗಿದಾಗ ಕಂಡುಬಂದ ದೃಶ್ಯ –ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ

2011ನೇ ಸಾಲಿನ ಆಯ್ಕೆ: ಮನಬಂದಂತೆ ಕೆಎಎಸ್ ಹಂಚಿಕೆ ಅವಕಾಶ ಇಲ್ಲ– ಸಿಎಸ್

‘ಎ.ಸಿ’ ಹುದ್ದೆಗಾಗಿ ಸಿಎಂಗೆ ಮೈತ್ರಿ ಮನವಿ!

● ರಾಜೇಶ್ ರೈ ಚಟ್ಲ

ಬೆಂಗಳೂರು: ‘ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಎಸ್‌ಟಿ–ಮಹಿಳೆ ಮೀಸಲಾತಿಯಡಿ ಸಹಾಯಕ ಆಯುಕ್ತ (ಎ.ಸಿ) ಹುದ್ದೆಯನ್ನು ನೀಡಬೇಕೆಂಬ ಡಾ. ಮೈತ್ರಿ ಎಚ್‌ಪಿಎಸ್ ಅವರ ಮನವಿ ಪರಿಗಣಿಸಲು ಸಾಧ್ಯವೇ ಇಲ್ಲ’ ಎಂದು ಮುಖ್ಯ ಕಾರ್ಯದರ್ಶಿ (ಸಿಎಸ್) ಸ್ಪಷ್ಟವಾಗಿ ಅಭಿಪ್ರಾಯ ನೀಡಿದ್ದರೂ, ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ಸಚಿವ ಸಂಪುಟ ಸಭೆಗೆ ವಿಷಯ ಮಂಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ!

‘ಈ ಸಾಲಿನ ಆಯ್ಕೆ ಪಟ್ಟಿಯಲ್ಲಿ 161 ಅಭ್ಯರ್ಥಿಗಳು ಮೈತ್ರಿ ಅವರಿಗಿಂತ ಮೇಲಿನ ಸ್ಥಾನಗಳಲ್ಲಿದ್ದಾರೆ. ಅವರೆಲ್ಲರಿಗೂ ಕೆಎಎಸ್ ಅಲ್ಲದೆ, ಬೇರೆ ಬೇರೆ ಹುದ್ದೆಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಆಯ್ಕೆ ಪಟ್ಟಿಯಲ್ಲಿ ತುಂಬಾ ಕೆಳಗಿರುವ ಅಭ್ಯರ್ಥಿಯೊಬ್ಬರಿಗೆ (ಮೈತ್ರಿ) ಮನಬಂದಂತೆ ಕೆಎಎಸ್ ಹುದ್ದೆ ಹಂಚಿಕೆಗೆ ಅವಕಾಶವಿಲ್ಲ’ ಎಂದು ಸಿಎಸ್ ಅಭಿಪ್ರಾಯ ನೀಡಿದ್ದಾರೆ. ಈ ಕುರಿತ ಟಿಪ್ಪಣಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಈ ಸಾಲಿನ ಆಯ್ಕೆ ಪಟ್ಟಿ ಪ್ರಕಾರ, ಎಸ್‌ಟಿ– ಮಹಿಳೆ ಮೀಸಲಾತಿಯಲ್ಲಿ ಎ.ಸಿ ಹುದ್ದೆಗೆ ಸುಪ್ರಿಯಾ ಬನಗರ್ ಎಂಬವರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ (ಆರ್‌ಡಿಪಿಆರ್) ಕಾರ್ಯನಿರ್ವಾಹಕ ಅಧಿಕಾರಿ (ಗ್ರೂಪ್ ‘ಎ’) ಹುದ್ದೆಗೆ ಮೈತ್ರಿ ಆಯ್ಕೆಯಾಗಿ ಕರ್ತವ್ಯಕ್ಕೆ ಸೇರಿದ್ದಾರೆ.

ಈ ಸಾಲಿನ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿದ್ದ ಮೈತ್ರಿ, ಇಡೀ ಪ್ರಕರಣ ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಕಾರಣರಾಗಿದ್ದರು. ಆದರೆ, ರಾಜ್ಯ ಸರ್ಕಾರ ಕೋರ್ಟ್ ತೀರ್ಪುಗಳನ್ನು ಬದಿಗಿಟ್ಟು, ಆಯ್ಕೆಯಾದವರಿಗಾಗಿ ‘ಕರ್ನಾಟಕ ಸಿವಿಲ್ ಸೇವಾ (2011ನೇ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಹಾಗೂ ನೇಮಕಾತಿಯ ಸಿಂಧುಗೊಳಿಸುವಿಕೆ) ಕಾಯ್ದೆ– 2022’ ರೂಪಿಸಿ ಇತ್ತೀಚೆಗೆ ನೇಮಕಾತಿ ಆದೇಶ ನೀಡಿದೆ.

ಆ ಬೆನ್ನಲ್ಲೆ (ಜೂನ್ 29ರಂದು) ಮುಖ್ಯಮಂತ್ರಿಗೆ ಮೈತ್ರಿ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪರಿಗಣಿಸಿ ಕ್ರಮವಹಿಸುವಂತೆ ಸಿಎಸ್‌ಗೆ ಮುಖ್ಯಮಂತ್ರಿ ಸೂಚಿಸಿದ್ದರು. ಮನವಿಗೆ ಸಂಬಂಧಿಸಿದಂತೆ ಅಭಿಪ್ರಾಯ ನೀಡಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕಾರ್ಯದರ್ಶಿ ಪಿ. ಹೇಮಲತಾ, ‘ಕೆಪಿಎಸ್‌ಸಿ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಅಂಥ ಸಂಸ್ಥೆ ಪ್ರಕಟಿಸಿದ ಆಯ್ಕೆ ಪಟ್ಟಿಯನ್ನು ಕೋರ್ಟ್ ಆದೇಶದ ಹೊರತಾಗಿ ಮಾರ್ಪಡಿಸಲು ಅವಕಾಶ ಇಲ್ಲ. ಒಂದೊಮ್ಮೆ ಬದಲಿಸಿದರೆ ಕಾನೂನುಬಾಹಿರವಾಗುತ್ತದೆ. ಈ ಸಾಲಿನ ನೇಮಕಾತಿಗೆ ಸರ್ಕಾರ ರೂಪಿಸಿದ ವಿಶೇಷ ಕಾಯ್ದೆಯಲ್ಲೂ ಅದಕ್ಕೆ ಅವಕಾಶ ಇಲ್ಲ. ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ನಿಯಮಗಳಲ್ಲೂ ಅಸ್ಪದವಿಲ್ಲ. ‘ಅರ್ಜಿದಾರಳನ್ನು (ಮೈತ್ರಿ) ಎ.ಸಿ ಹುದ್ದೆಗೆ ಪರಿಗಣಿಸಲು ಕಾನೂನು ಅವಕಾಶಗಳು ಇಲ್ಲದಿರುವುದರಿಂದ ಮತ್ತು ಒಂದೊಮ್ಮೆ ಹುದ್ದೆ ನೀಡಿದರೆ ಆಯ್ಕೆ ಪಟ್ಟಿಯಲ್ಲಿ ಆಕೆಗಿಂತ ಮೇಲಿರುವ ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ’ ಎಂದು ಉಲ್ಲೇಖಿಸಿದ್ದರು.

ಆದರೆ, ಈ ಅಭಿಪ್ರಾಯದ ಬಗ್ಗೆ ಮತ್ತೊಮ್ಮೆ ಚರ್ಚಿಸುವಂತೆ ಮುಖ್ಯ ಕಾರ್ಯದರ್ಶಿಯವರು ಹೇಮಲತಾ ಅವರಿಗೆ ಸೂಚಿಸಿದ್ದರು. ಆದರೆ, ಈ ಬಗ್ಗೆ ಚರ್ಚಿಸಲಾಗಿದ್ದು, ಮೊದಲಿನ ಅಭಿಪ್ರಾಯದಂತೆ ಆದೇಶ ಹೊರಡಿಸಬಹುದು ಎಂದು ಮತ್ತೆ ಹೇಮಲತಾ ಮತ್ತೆ ತಿಳಿಸಿದ್ದರು. ಅದರಂತೆ, ಮುಖ್ಯಮಂತ್ರಿಗೆ ಮುಖ್ಯ ಕಾರ್ಯದರ್ಶಿ ಕಡತ ಮಂಡಿಸಿದ್ದರು.

‘ಮೌಖಿಕ ಸಂದರ್ಶನದಲ್ಲಿ ಮೋಸ’

ಮುಖ್ಯಮಂತ್ರಿಗೆ ಸಲ್ಲಿಸಿದ ಮನವಿಯಲ್ಲಿ, ‘ಮುಖ್ಯ ಪರೀಕ್ಷೆಯಲ್ಲಿ 1,009 ಅಂಕ ಗಳಿಸಿದರೂ ಕೆಪಿಎಸ್‌ಸಿ ಸದಸ್ಯರು ದುರುದ್ದೇಶದಿಂದ ಮೌಖಿಕ ಸಂದರ್ಶನದಲ್ಲಿ 75 ಅಂಕ ನೀಡಿದ್ದರು. ನನ್ನದೇ ವರ್ಗಕ್ಕೆ ಸೇರಿದ ಮತ್ತೊಬ್ಬ ಮಹಿಳಾ ಅಭ್ಯರ್ಥಿ ಮುಖ್ಯ ಪರೀಕ್ಷೆಯಲ್ಲಿ 937.5 ಅಂಕ ಗಳಿಸಿದ್ದು, ಅವರಿಗೆ ಮೌಖಿಕ ಸಂದರ್ಶನದಲ್ಲಿ 150 ಅಂಕ ನೀಡಲಾಗಿದೆ. ಇದರಿಂದಾಗಿ ನಾನು ಎ.ಸಿ ಹುದ್ದೆ ವಂಚಿತಳಾಗಿದ್ದೇನೆ. ಮುಖ್ಯ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿರುವುದರಿಂದ ನನಗೆ ಎ.ಸಿ. ಹುದ್ದೆ ನೀಡಬೇಕು’ ಎಂದು ಕೋರಿದ್ದಾರೆ.

ಬಿಎಂಟಿಸಿ ನಿಲ್ದಾಣಗಳಲ್ಲಿ ಕಾದು ನಿಂತಿದ್ದ ಪ್ರಯಾಣಿಕರು

ಬಸ್‌ಗಳಲ್ಲೂ ನೂಕುನುಗ್ಗಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ರಜತ ಮಹೋತ್ಸವದ ಅಂಗವಾಗಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಪ್ರಯಾಣಿಕರು ಎಲ್ಲೆಡೆ ಬಸ್‌ಗಾಗಿ ಕಾದು ನಿಲ್ಲುವಂತಾಗಿತ್ತು.

ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವ ಮತ್ತು ಬಿಎಂಟಿಸಿ ರಜತ ಮಹೋತ್ಸವ ಒಂದೇ ದಿನ ಇದ್ದಿದ್ದರಿಂದ ಉಚಿತ ಪ್ರಯಾಣಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಹಣ ಪಡೆದು ಟಿಕೆಟ್ ಕೊಡುವ ಕೆಲಸ ಇಲ್ಲದಿದ್ದರೂ ನಿರ್ವಾಹಕರು, ಜನರನ್ನು ಹತ್ತಿಸಿಕೊಂಡು ಎಷ್ಟು ಜನ ಪ್ರಯಾಣ ಮಾಡಿದರು, ಯಾವ ನಿಲ್ದಾಣದಲ್ಲಿ ಹತ್ತಿದರು, ಯಾವ ನಿಲ್ದಾಣದಲ್ಲಿ ಇಳಿದರು, ಮಹಿಳೆಯರು ಮತ್ತು ಮಕ್ಕಳ ಸಂಖ್ಯೆ ಎಷ್ಟು ಎಂಬುದನ್ನು ನಮೂದಿಸಿಕೊಂಡರು.

ಉಚಿತ ಪ್ರಯಾಣದ ಅರಿವಿಲ್ಲದೆ ಕೆಲವರು ಟಿಕೆಟ್ ಪಡೆಯಲು ಹಣ ನೀಡಲೂ ಮುಂದಾದರು. ಆದರೆ, ನಿರ್ವಾಹಕರು ರಜತ ಮಹೋತ್ಸವದ ಬಗ್ಗೆ ವಿವರಿಸಿ ಉಚಿತವಾಗಿ ಪ್ರಯಾಣಿಸಲು ತಿಳಿಸಿದರು.

ಬೆಳಿಗ್ಗೆ ಸಾಮಾನ್ಯವಾಗಿದ್ದ ಬಸ್ ಸಂಚಾರ ಮಧ್ಯಾಹ್ನದ ಬಳಿಕ ಕೊಂಚ ಕಡಿಮೆ ಆದಂತೆ ಕಾಣಿಸಿತು. ಮೆಜೆಸ್ಟಿಕ್ ಸೇರಿ ಎಲ್ಲಾ ನಿಲ್ದಾಣಗಳಲ್ಲೂ ಬಸ್‌ಗಾಗಿ ಜನರು ಕಾದು ನಿಂತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮೆಜೆಸ್ಟಿಕ್ ನಿಲ್ದಾಣದಲ್ಲಂತೂ ಬಸ್ ಬಂದರೆ ಅದರ ಹಿಂದೆ ಮುಗಿಬಿದ್ದು, ಓಡಿ ಹತ್ತಿಕೊಳ್ಳುತ್ತಿದ್ದರು. ಅದರಲ್ಲೂ ವೋಲ್ವೊ ಬಸ್‌ಗಳನ್ನು ಹತ್ತಲು ಪೈಪೋಟಿ ಇತ್ತು. ಬಹುತೇಕ ಬಸ್‌ಗಳಲ್ಲಿ ಭರ್ತಿಯಾಗಿ ಜನ ಪ್ರಯಾಣಿಸಿದರು.

'ಬಿಎಂಟಿಸಿ ಬಸ್ ಪ್ರಯಾಣ ಉಚಿತ, ರಸ್ತೆಯಲ್ಲಿ ಬಸ್‌ಗಳೇ ಇಲ್ಲ' ಎಂಬ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

ಈ ಆರೋಪವನ್ನು ಅಲ್ಲಗಳೆದಿರುವ ಬಿಎಂಟಿಸಿ ಅಧಿಕಾರಿಗಳು, 'ಫಲಪುಷ್ಪ ಪ್ರದರ್ಶನ ಮತ್ತು ಕಾಂಗ್ರೆಸ್‌ನಿಂದ 'ಸ್ವಾತಂತ್ರ್ಯ ನಡಿಗೆ' ಕಾರ್ಯಕ್ರಮ ಇದ್ದುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿತ್ತು. ಸಾಮಾನ್ಯವಾಗಿ 27 ಲಕ್ಷ ಜನ ಪ್ರಯಾಣಿಸುತ್ತಾರೆ, ಸೋಮವಾರ ಪ್ರಯಾಣಿಕರ ಸಂಖ್ಯೆ 35 ಲಕ್ಷಕ್ಕೆ ಏರಿಕೆಯಾಗಿತ್ತು. ಬಸ್‌ಗಳ ಸಂಖ್ಯೆ ಕಡಿಮೆ ಮಾಡಿಲ್ಲ. ಎಂದಿನಂತೆ 5,260 ಬಸ್‌ಗಳು ಕಾರ್ಯಾಚರಣೆ ಮಾಡಿವೆ' ಎಂದು ಸ್ಪಷ್ಟಪಡಿಸಿದರು.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬಸ್ ಹತ್ತಲು ಪರದಾಡಿದ ಪ್ರಯಾಣಿಕರು – ಪ್ರಜಾವಾಣಿ ಚಿತ್ರ

ಇಂದಿನಿಂದ ಬಿಸಿಯೂಟ ನೌಕರರ ಹೋರಾಟ

ಬೆಂಗಳೂರು: ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಬಿಸಿಯೂಟ ನೌಕರರಿಗೆ ಗ್ರಾಚ್ಯುಟಿ ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸಿ ಮಂಗಳವಾರದಿಂದ (ಆ.16) ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಹೋರಾಟ ಮಾಡಲಾಗುವುದು ಎಂದು ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ ತಿಳಿಸಿದೆ.

ರಾಜ್ಯದಲ್ಲಿ 6,500 ನೌಕರರಿಗೆ 60 ವರ್ಷ ವಯಸ್ಸಾಗಿದೆ ಎಂದು ನಿವೃತ್ತಿ ಸೌಲಭ್ಯ ಒದಗಿಸದೇ ವಜಾ ಮಾಡಿರುವುದು ಖಂಡನೀಯ. ಈ ಕೆಲಸವನ್ನೇ ಜೀವನಾಧಾರ ಎಂದು ನಂಬಿ ಬದುಕುತ್ತಿರುವ ಲಕ್ಷಾಂತರ ಕುಟುಂಬಗಳ ಮೇಲೆ ಬರೆ ಎಳೆದಂತಾಗಿದೆ.

ಬೇಡಿಕೆ ಈಡೇರಿಸುವವರಗೂ ಪ್ರತಿಭಟನೆ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.


ಮಹಾತ್ಮ ಗಾಂಧಿ ರಸ್ತೆಯಲ್ಲಿ ಸೋಮವಾರ ರಾತ್ರಿ ವಾಹನ ದಟ್ಟಣೆ ಉಂಟಾಗಿತ್ತು. ಪ್ರಜಾವಾಣಿ ಚಿತ್ರ/ರಂಜು ಪಿ

ಬಿಜೆಪಿ ಜಾತ್ರೆ, ಕಾಂಗ್ರೆಸ್ ನಡಿಗೆ: ಭಾರಿ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಆಚರಣೆ, ಬಿಜೆಪಿಯ ಅಮೃತ ಭಾರತಿಗೆ ಕರುನಾಡು ಜಾತ್ರೆ, ಕಾಂಗ್ರೆಸ್ ನಡಿಗೆ ಸೇರಿ ಸಾಲು ಸಾಲು ಕಾರ್ಯಕ್ರಮಗಳಿಂದಾಗಿ ನಗರದಲ್ಲಿ ಸೋಮವಾರ ವಿಪರೀತ ವಾಹನ ದಟ್ಟಣೆ ಉಂಟಾಯಿತು.

ಧ್ವಜಾರೋಹಣಕ್ಕೆಂದು ಶಾಲೆ, ಕಾಲೇಜು, ಕಚೇರಿ, ಮೈದಾನಕ್ಕೆ ಹೊರಟಿದ್ದವರು ತಮ್ಮ ವಾಹನಗಳನ್ನು ನಸುಕಿನಲ್ಲೇ ರಸ್ತೆಗೆ ಇಳಿಸಿದ್ದರು. ಇದರಿಂದಾಗಿ ಪ್ರಮುಖ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತು, ನಿಧಾನವಾಗಿ ಚಲಿಸಿದವು.

ವಿಧಾನಸೌಧ, ರಾಜಭವನ ರಸ್ತೆ, ಚಾಲುಕ್ಯ ವೃತ್ತ, ಅರಮನೆ ರಸ್ತೆ, ಕೆ.ಆರ್. ವೃತ್ತ, ಕಾರ್ಪೊರೇಷನ್ ವೃತ್ತ, ಎಂ.ಜಿ.ರಸ್ತೆ, ಕಂಠೀರವ ಕ್ರೀಡಾಂಗಣ ಸುತ್ತಮುತ್ತ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ದಟ್ಟಣೆ ಇತ್ತು.

ಕೆಲ ಚಾಲಕರು ವಾಹನಗಳನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿದ್ದರಿಂದ ದಟ್ಟಣೆ ಮತ್ತಷ್ಟು ಬಿಗಡಾಯಿಸಿತು. ಸ್ಥಳದಲ್ಲಿದ್ದ ಪೊಲೀಸರು ದಟ್ಟಣೆ ನಿಯಂತ್ರಿಸಲು ಪರದಾಡಿದರು. ಇಂಥ ರಸ್ತೆಗಳಲ್ಲಿ ಆಂಬುಲೆನ್ಸ್ ಸಂಚಾರಕ್ಕೂ ತೊಂದರೆ ಉಂಟಾಯಿತು. ಕೆ.ಆರ್. ವೃತ್ತದಲ್ಲಿ ಪೊಲೀಸರು ಹಾಗೂ ಸಾರ್ವಜನಿಕರು, ಆಂಬುಲೆನ್ಸ್‌ಗೆ ದಾರಿ ಮಾಡಿಕೊಟ್ಟು ಮುಂದೆ ಕಳುಹಿಸಿದ ದೃಶ್ಯ ಕಂಡುಬಂತು.

ಅಮೃತ ಭಾರತಿಗೆ ಕರುನಾಡು ಜಾತ್ರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಓಡಾಟ ಹೆಚ್ಚಿದ್ದರಿಂದ ಸುತ್ತಮುತ್ತ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.

ನಿಂತಲ್ಲೇ ನಿಂತ ವಾಹನಗಳು: ಮೆಜೆಸ್ಟಿಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದವರೆಗೂ ಕಾಂಗ್ರೆಸ್ ಪಕ್ಷದಿಂದ ಸ್ವಾತಂತ್ರ್ಯ ನಡಿಗೆ ಆಯೋಜಿಸಲಾಗಿತ್ತು.

ನಡಿಗೆ ಸಾಗಿದ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಕೆಲವೆಡೆ ಒಂದು ಬದಿಯಲ್ಲಿ ವಾಹನ ಓಡಾಟಕ್ಕೂ ಅವಕಾಶ ನೀಡಿದರೂ ದಟ್ಟಣೆ ಕಡಿಮೆ ಆಗಲಿಲ್ಲ. ರಸ್ತೆಯಲ್ಲಿ ಜನರು ಹೆಚ್ಚಿದ್ದರಿಂದ ಮಾರ್ಗಮಧ್ಯೆಯೇ ವಾಹನಗಳು ನಿಂತಲ್ಲೇ ನಿಲ್ಲಬೇಕಾಯಿತು.

ಓಕಳಿಪುರ, ಮೆಜೆಸ್ಟಿಕ್, ಗಾಂಧಿನಗರ, ಶೇಷಾದ್ರಿರಸ್ತೆ, ಅರಮನೆ ರಸ್ತೆ, ಕೆ.ಆರ್. ವೃತ್ತ, ಕಾರ್ಪೊರೇಷನ್ ವೃತ್ತ, ಲಾಲ್‌ಬಾಗ್, ಬಸವನಗುಡಿ, ಜೆ.ಸಿ.ರಸ್ತೆಯಲ್ಲಿ ದಟ್ಟಣೆ ಅಧಿಕವಾಗಿತ್ತು.

ಬಳ್ಳಾರಿ ರಸ್ತೆ, ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಯಶವಂತಪುರ, ಮಲ್ಲೇಶ್ವರ, ರಾಜಾಜಿನಗರ, ಶೇಷಾದ್ರಿಪುರ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಬಿಸಿ ತಟ್ಟಿತು. ನಗರದ ಪ್ರಮುಖ ರಸ್ತೆಗಳಲ್ಲಿ ರಾತ್ರಿಯೂ ದಟ್ಟಣೆ ಅಧಿಕವಾಗಿತ್ತು.

'ಸ್ವಾತಂತ್ರ್ಯ ನಡಿಗೆ'ಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೆವಾಲಾ ಹೆಜ್ಜೆ ಹಾಕಿದರು. ಪ್ರಜಾವಾಣಿ ಚಿತ್ರ

ಮೆಟ್ರೊ ರೈಲಿನಲ್ಲಿ ಜನಜಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ಕಾಂಗ್ರೆಸ್ ನಡಿಗೆ, ಮತ್ತೊಂದೆಡೆ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ, ಮೆಟ್ರೊ ರೈಲುಗಳಲ್ಲಿ ಕಾಲಿಡಲು ಜಾಗವಿಲ್ಲದೆ ಪರದಾಡಿದ ಜನ...

ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದ್ದ ಜನ ಫಲಪುಷ್ಪ ಪ್ರದರ್ಶನ, ಶಾಪಿಂಗ್ ಕಾಂಪ್ಲೆಕ್ಸ್‌ಗಳಿಗೆ ಸುತ್ತಾಡಲು ಮೆಟ್ರೊ ರೈಲು ಹತ್ತಿದರು. ದಟ್ಟಣೆಯಲ್ಲಿ ಸಿಲುಕಿ ಒದ್ದಾಡಿದರು. ಮಧ್ಯಾಹ್ನದ ತನಕ ಸಾಮಾನ್ಯ ಸ್ಥಿತಿಯಲ್ಲಿಯೇ ಇದ್ದ ಮೆಟ್ರೊ ಪ್ರಯಾಣ, ಮಧ್ಯಾಹ್ನದ ಬಳಿಕ ಕಷ್ಟಕರವೆನಿಸಿತು. ತುಮಕೂರು ರಸ್ತೆ ನಾಗಸಂದ್ರ, ಕೆಂಗೇರಿ, ಯಶವಂತಪುರ, ನಾಡಪ್ರಭು ಕೆಂಪೇಗೌಡ ಮೆಟ್ರೊ ರೈಲು ನಿಲ್ದಾಣಗಳಲ್ಲಿ ಜನಜಂಗುಳಿ ತೀವ್ರಗೊಂಡಿತ್ತು.

ಸ್ವಾತಂತ್ರ್ಯ ನಡಿಗೆಯಲ್ಲಿ ಭಾಗವಹಿಸಲು ಬಂದಿದ್ದ ಜನರಿಗಾಗಿಯೇ ಕಾಂಗ್ರೆಸ್ 80 ಸಾವಿರ ಟಿಕೆಟ್‌ಗಳನ್ನು ಖರೀದಿಸಿತ್ತು. ತ್ರಿವರ್ಣ ಧ್ವಜ ಹಿಡಿದು ಘೋಷಣೆಗಳನ್ನು ಕೂಗುತ್ತ ಮೆಟ್ರೊ ನಿಲ್ದಾಣಗಳನ್ನು ಜನ ಪ್ರವೇಶಿಸಿದರು. ರೈಲಿನಲ್ಲಿ ನೂಕುನುಗ್ಗಲಿನ ನಡುವೆಯೂ ಘೋಷಣೆಗಳನ್ನು ಮೊಳಗಿಸಿದರು.

ಗುಂಪು-ಗುಂಪಾಗಿ ಬಂದ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಿ ರೈಲು ಹತ್ತಿಸಲು ಮೆಟ್ರೊ ನಿಲ್ದಾಣದ ಸಿಬ್ಬಂದಿ ಹರಸಾಹಸಪಟ್ಟರು. ಕಾಂಗ್ರೆಸ್ ಕಾರ್ಯಕ್ರಮಕ್ಕೆ ಬಂದಿದ್ದ ಜನರನ್ನು ಲೆಕ್ಕ ಹಾಕಿ, ಪ್ರತ್ಯೇಕ ಸಾಲಿನಲ್ಲಿ ಒಳಕ್ಕೆ ಕಳುಹಿಸಲಾಗುತ್ತಿತ್ತು. ಸಾಮಾನ್ಯ ಪ್ರಯಾಣಿಕರು ಸಾಮಾನ್ಯ ಪ್ರವೇಶ ದ್ವಾರದಲ್ಲಿ ಪ್ರವೇಶ ಪಡೆದರು. ಎಲ್ಲಾ ಪ್ರಯಾಣಿಕರನ್ನು ರೈಲು ಬೋಗಿಯೊಳಕ್ಕೆ ತಳ್ಳಿ ಹತ್ತಿಸಲು ಭದ್ರತಾ ಸಿಬ್ಬಂದಿ ಪರದಾಡಿದರು.

ಕೆಂಪೇಗೌಡ ನಿಲ್ದಾಣದ ಎಲ್ಲಾ ಮಹಡಿಗಳಲ್ಲೂ ಕಾಲಿಡಲು ಜಾಗವಿಲ್ಲದಷ್ಟು ಜನದಟ್ಟಣೆ ಉಂಟಾಗಿತ್ತು. ಮೆಟ್ರೊ ರೈಲು ಹತ್ತಿದ್ದ ಕಾರ್ಯಕರ್ತರು ನ್ಯಾಷನಲ್ ಕಾಲೇಜು ನಿಲ್ದಾಣದಲ್ಲಿ ಇಳಿಯಬೇಕಾಗಿತ್ತು. ಸರಿಯಾದ ಮಾರ್ಗದರ್ಶನ ಇಲ್ಲದೆ ಕೆಲವರು ಎಂ.ಜಿ. ರಸ್ತೆ ಕಡೆಗೆ ಪ್ರಯಾಣಿಸಿದರೆ, ಕೆಲವರು ಮತ್ತೆ ನಾಗಸಂದ್ರ ಕಡೆಗೆ ಹೋಗುವ ರೈಲುಗಳನ್ನೇ ಹತ್ತಿದರು. ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ತೆರಳಬೇಕಾದ ಜನರೂ ದಟ್ಟಣೆ ನಡುವೆ ಸಿಲುಕಿ ಪರಿತಪಿಸಿದರು.



ನಾಡಪ್ರಭು ಕೆಂಪೇಗೌಡ ಮೆಟ್ರೊ ರೈಲು ನಿಲ್ದಾಣದಲ್ಲಿ ಸೋಮವಾರ ಉಂಟಾಗಿದ್ದ ಜನದಟ್ಟಣೆ –ಪ್ರಜಾವಾಣಿ ಚಿತ್ರ

ಯಾರೇ ತಪ್ಪು ಮಾಡಿದ್ದರೂ ಕಠಿಣ ಕ್ರಮ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವಮೊಗ್ಗದಲ್ಲಿ ನಡೆದ ಚಾಕು ಇರಿತದ ಘಟನೆಯಲ್ಲಿ ಯಾರೇ ತಪ್ಪು ಮಾಡಿದ್ದರೂ ಕಠಿಣ ಕ್ರಮ ತೆಗೆದುಕೊಳ್ಳಲು ಆದೇಶ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶಿವಮೊಗ್ಗದಲ್ಲಿ ಅಧಿಕಾರಿಗಳು ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಶಾಂತಿ ನೆಲೆಸಲು ಕ್ರಮಕೈಗೊಳ್ಳಲಾಗಿದ್ದು, ಹೆಚ್ಚು ವರಿ ಪಡೆ ಕಳುಹಿಸಿದ್ದೇವೆ' ಎಂದು ಹೇಳಿದರು.

ಖಂಡನೆ: ಶಿವಮೊಗ್ಗ ದಲ್ಲಿ ಸಾವರ್ಕರ್ ಭಾವಚಿತ್ರದ ಫ್ಲೆಕ್ಸ್ ತೆರವು ಮಾಡಿದ ಬಳಿಕ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ ಎಸ್‌ಡಿಪಿಐ ಕೃತ್ಯ ಮತ್ತು ಯುವಕನ ಮೇಲೆ ಚೂರಿ ಇರಿತ ಖಂಡನೀಯ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ-ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ವೀರಮ್ಮ ಮತ್ತು ಬಸವರಾಜಪ್ಪ, ಸ್ಥಳ: ನಂ.367, 8ನೇ ಅಡ್ಡರಸ್ತೆ, ರಾಜರಾಜೇಶ್ವರಿನಗರ, ಲಗ್ಗೇರಿ

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಎಚ್.ಡಿ. ಸಿದ್ದಲಕ್ಷ್ಮಮ್ಮ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಿಗಳರಪಾಳ್ಯ, ಅಂದ್ರಹಳ್ಳಿ ಮುಖ್ಯರಸ್ತೆ, ಬೆಳಿಗ್ಗೆ 9.30

ಕ್ಲೌಡ್ ಕಂಪ್ಯೂಟಿಂಗ್: ಅತಿಥಿಗಳು: ರಾಜೇಶ ಕೃಷ್ಣನ್, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಮಧ್ಯಾಹ್ನ 3

ಎ. ಸುಬ್ಬಯ್ಯ ಹೆಗಡೆ ಶಾಸ್ತ್ರಿ, ಎಂ.ಕೆ. ವಿಜಯಲಕ್ಷ್ಮಿ, ಎನ್. ಅನಂತರಂಗಾಚಾರ್, ಅನಂತರಂಗ ಪ್ರತಿಷ್ಠಾನ ದತ್ತಿ ಕಾರ್ಯಕ್ರಮ: ವಿಷಯ: ದಲಿತ, ಬಂಡಾಯ ಸಾಹಿತ್ಯ-ಹೊಸನೋಟ, ಉಪನ್ಯಾಸ: ಸುಬ್ರಹ್ಮಣ್ಯ ಸ್ವಾಮಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸಿ., ಸಭಾಂಗಣ, ಬಿ.ಎಂ.ಶ್ರೀ., ಕಲಾಭವನ,

'ನಮ್ಮೂರ ಭೂಮಿ ನಮಗಿರಲಿ; ಅನ್ಯರಿಗಲ್ಲ' ಭೂಸ್ವಾಧೀನ ವಿರೋಧಿ ಹೋರಾಟದ ಕಾರ್ಯಕರ್ತರಿಗೆ ಕಾರ್ಯಾಗಾರ: ಅತಿಥಿಗಳು: ಎಚ್. ಎನ್. ನಾಗಮೋಹನ ದಾಸ್, ಸ್ಥಳ: ಆಶೀರ್ವಾದ್, ಸೇಂಟ್ ಮಾರ್ಕ್ಸ್ ರಸ್ತೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು ರಸ್ತೆ, ಎಂಟಿಆರ್ ಪಕ್ಕ, ಬೆಳಿಗ್ಗೆ 10.30

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಿರ್ವಹಣೆ ಕಾರ್ಯದಿಂದಾಗಿ ಆ. 17ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ಕೆಲ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ವೀವರ್ಸ್ ಕಾಲೊನಿ 1ರಿಂದ 9ನೇ ಕ್ರಾಸ್, ಮಾರುತಿ ನಗರ, ಪಿಲ್ಲಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್‌ಎ ಲೇಔಟ್, ಭೋರಾ ಲೇಔಟ್, ಆಶ್ರಮ ರಸ್ತೆ, ಹಿಮಗಿರಿ ಮೆಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವನಪುರ, ನೊಬೆಲ್ ರೆಸಿಡೆನ್ಸಿ, ನಂದಿ ವುಡ್ ಅಪಾರ್ಟ್‌ಮೆಂಟ್, ಎಸ್‌ಎನ್‌ಎನ್ ರಾಜ್‌ನಗರ ಲೇಕ್, ರಾಜ್‌ನಗರ ಲೇಕ್ 2, ಮೈಲಸಂದ್ರ, ಹೊಮ್ಮದೇವನಹಳ್ಳಿ, ವಡ್ಡರಪಾಳ್ಯ, ಪ್ರಭಾಕರ ರೆಡ್ಡಿ ಲೇಔಟ್, ಬೇಟದಾಸಪುರ, ಹುಲ್ಲಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ನವ ಭಾರತಕ್ಕಾಗಿ ನವ ಕರ್ನಾಟಕ

ಮನೆ ಮನೆಯ ಮೇಲೆ ತ್ರಿವರ್ಣಧ್ವಜ
13 ರಿಂದ 15 ಆಗಸ್ಟ್ 2022


ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಹೃದಯದಾಳದ ಧನ್ಯವಾದಗಳು

ಪ್ರಧಾನಿ ಶ್ರೀ ನರೇಂದ್ರ ಮೋದಿಯವರ **'ಮನೆಮನೆಯಲ್ಲಿ ತ್ರಿವರ್ಣಧ್ವಜ** ಯೋಜನೆಯ ಅಭೂತಪೂರ್ವ ಯಶಸ್ವಿಗೆ ಕಾರಣರಾದ ರಾಜ್ಯದ ಜನತೆಗೆ ಮನದಾಳದ ಧನ್ಯವಾದಗಳು. ರಾಜ್ಯದಲ್ಲಿ **ಆಗಸ್ಟ್ 13ರಿಂದ 15ರವರೆಗೆ** ಸುಮಾರು **1 ಕೋಟಿ 25 ಲಕ್ಷ** ಮನೆಮನೆಗಳ ಮೇಲೆ, ಅಂಗಡಿ ಮುಂಗಟ್ಟುಗಳ ಮೇಲೆ, ಸರ್ಕಾರಿ ಕಛೇರಿಗಳ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಲಾಗಿದ್ದು ಮನೆಮನೆಯಲ್ಲಿ ತ್ರಿವರ್ಣಧ್ವಜ ಚಳುವಳಿ ಇನ್ನಿಲ್ಲದಷ್ಟು ಯಶಸ್ವಿಯಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷಾಚರಣೆಯನ್ನು ಸಹ ರಾಜ್ಯಾದ್ಯಂತ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿದ್ದೇವೆ. ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ, ಹೋರಾಟಗಾರರ ತ್ಯಾಗ ಬಲಿದಾನದ ನೆನಪು, ಚಿಂತನ ಮಂಥನ, ಅಭಿವೃದ್ಧಿ ಕಾರ್ಯಕ್ರಮಗಳು.. ಹೀಗೆ ಅಮೃತ ಮಹೋತ್ಸವ ಇಡೀ ರಾಜ್ಯದಲ್ಲಿ ಅದ್ಭುತ ಸಂಚಲನ ಮೂಡಿಸಿದೆ. ಜನಸಾಮಾನ್ಯರ ಇನ್ನಿಲ್ಲದ ಪ್ರತಿಕ್ರಿಯೆ ಎಲ್ಲಾ ಪಕ್ಷ-ಸಂಘಟನೆಗಳನ್ನು ಬೀದಿಗೆ ಬರಲು ಪ್ರೇರೇಪಿಸಿದೆ. ಎಲ್ಲರಿಂದ ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಕಾರಣೀಭೂತವಾಗಿದೆ.

ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಸ್ಮರಣೆಯ ಈ ಅವಧಿಯಲ್ಲಿ ಹಗಲು ರಾತ್ರಿ ಎನ್ನದೆ ಮೂರು ದಿನಗಳ ಕಾಲ ಮನೆಮನೆಯಲ್ಲಿ ತ್ರಿವರ್ಣಧ್ವಜ ಅಭಿಯಾನ ಕರ್ನಾಟಕದಲ್ಲಿ ಪೂರ್ಣ ಪ್ರಮಾಣದ ಯಶಸ್ಸು ಕಂಡಿದ್ದು ಕನ್ನಡಿಗರ ರಾಷ್ಟ್ರ ಪ್ರೇಮ ಮತ್ತು ರಾಷ್ಟ್ರ ಭಕ್ತಿಗೆ ಹಿಡಿದ ಕನ್ನಡಿಯಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸುಸಂದರ್ಭದಲ್ಲಿ ಹಮ್ಮಿಕೊಂಡ ಹಾಗೂ ಜನರ ಹೃದಯದಲ್ಲಿ ಶಾಶ್ವತವಾಗಿ ಸದಾಕಾಲವೂ ನೆನಪಿನಲ್ಲಿ ಉಳಿಯುವಂತೆ ಆಚರಿಸಲಾದ ಮನೆಮನೆಯಲ್ಲಿ ತ್ರಿವರ್ಣಧ್ವಜ ಕಾರ್ಯಕ್ರಮ ನಮ್ಮ ದೇಶದ ಪ್ರಧಾನ ಮಂತ್ರಿಯವರ ಪ್ರೀತಿಯ ಕನಸು. ಈ ಕನಸನ್ನು ನನಸು ಮಾಡಿದ ನಿಮ್ಮೆಲ್ಲರಿಗೂ ಹೃದಯಸ್ಪರ್ಶಿ ಧನ್ಯವಾದಗಳು. ಇದೀಗ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮ ಸಂಪನ್ನಗೊಂಡಿದೆ. ಅಮೃತ ಕಾಲ ಪ್ರಾರಂಭಗೊಂಡಿದೆ.

ಮನೆಮನೆಯಲ್ಲಿ ತ್ರಿವರ್ಣಧ್ವಜ ರಾಜ್ಯದ ಯುವಕ-ಯುವತಿಯರಲ್ಲಿ ಹೊಸ ಸಂಚಲನ ಮೂಡಿಸಿದೆ. ಅವರ ಹೃದಯದಲ್ಲಿ ದೇಶ ಪ್ರೇಮವನ್ನು ಇಮ್ಮಡಿಗೊಳಿಸಿದೆ. ಮನೆಮನೆಯಲ್ಲಿ ತ್ರಿವರ್ಣಧ್ವಜ ಅಭಿಯಾನಕ್ಕೆ ನಾಡಿನ ಎಲ್ಲಾ ಸ್ತರದ ನಾಗರಿಕರು ಪಕ್ಷ-ಸಂಘಟನೆ, ಜಾತಿ ಮತ ಭೇದಗಳನ್ನು ಬದಿಗೊತ್ತಿ ನೀಡಿರುವ ಅಭೂತಪೂರ್ವ ಪ್ರತಿಕ್ರಿಯೆಯಿಂದ ನಾನು ಗದ್ಗದಿತನಾಗಿದ್ದೇನೆ. ನಾಡಿನ ಜನತೆಗೆ ಮತ್ತೊಮ್ಮೆ ನನ್ನ ಹೃದಯದಾಳದಿಂದ ಕೃತಜ್ಞತೆ ವ್ಯಕ್ತಪಡಿಸುತ್ತೇನೆ. ನಿಮ್ಮ ಅಭೂತಪೂರ್ವ ಒಳಗೊಳ್ಳುವಿಕೆಯಿಂದ ಪ್ರೇರೇಪಿತವಾದ ರಾಷ್ಟ್ರ ಪ್ರೇಮ ಹಾಗೂ ದೇಶಭಕ್ತಿ ನಮ್ಮ ನಾಡನ್ನು ಮುಂದಿನ ವರ್ಷಗಳಲ್ಲಿ ಇನ್ನಷ್ಟು ಉನ್ನತಿಗೆ ಕೊಂಡೊಯ್ಯಲಿ.

ನಿಮಗೆ ಮತ್ತೊಮ್ಮೆ ಧನ್ಯವಾದಗಳು,

ನಿಮ್ಮವ,

ಬಸವರಾಜ ಎಸ್. ಬೊಮ್ಮಾಯಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

10 ವರ್ಷದ ನಂತರ ನೀರು ಪೂರೈಕೆ; ವಿಶ್ವೇಶ್ವರಯ್ಯ ಬಡಾವಣೆಯ 6, 8ನೇ ಬ್ಲಾಕ್, ಲಿಂಗಧೀರನಹಳ್ಳಿಗೆ ಕುಡಿಯುವ ನೀರು

ನಗರಕ್ಕೆ ಮತ್ತೆ ತಿಪ್ಪಗೊಂಡನಹಳ್ಳಿ ನೀರು

ತಿಪ್ಪಗೊಂಡನಹಳ್ಳಿ ಜಲಾಶಯ

ಚಿತ್ರಗಳು: ಆರ್. ಮಂಜುನಾಥ್

• ಆರ್. ಮಂಜುನಾಥ್

ಬೆಂಗಳೂರು: ರಾಜಧಾನಿ ಬೆಂಗಳೂರಿಗೆ 10 ವರ್ಷದ ನಂತರ ಕುಡಿಯುವ ನೀರು ಸರಬರಾಜು ಮಾಡಲು ತಿಪ್ಪಗೊಂಡನಹಳ್ಳಿ ಜಲಾಶಯ ಸಜ್ಜಾಗುತ್ತಿದೆ. ಮಾರ್ಚ್ ವೇಳೆಗೆ ಪ್ರತಿನಿತ್ಯ 110 ದಶಲಕ್ಷ ಲೀಟರ್ ನೀರು ಪೂರೈಕೆಯಾಗಲಿದೆ.

2015–16ರಲ್ಲಿ ತಿಪ್ಪಗೊಂಡನಹಳ್ಳಿಯಿಂದ ಸಂಸ್ಕರಣ ಘಟಕ ಪುನಶ್ಚೇತನ ಕಾಮಗಾರಿಗೆ ಸರ್ಕಾರ ಅನುಮತಿ ನೀಡಿದೆ. 2019ರಲ್ಲಿ ಕಾಮಗಾರಿ ಆರಂಭವಾಗಿದೆ. ತಿಪ್ಪಗೊಂಡನಹಳ್ಳಿಯಲ್ಲಿದ್ದ ನೀರು ಸಂಸ್ಕರಣೆ ಘಟಕ ಹಳೆಯದಾಗಿದ್ದು, ಅದು ಪೂರ್ಣವಾಗಿ ಬದಲಾಗುತ್ತಿದೆ. ವಿದೇಶಗಳಿಂದ ಆಮದು ಮಾಡಿಕೊಂಡ ಯಂತ್ರಗಳನ್ನು ಬಳಸಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಏಳು ಹಂತಗಳಲ್ಲಿ ನೀರನ್ನು ಸಂಸ್ಕರಿಸಿ ಪೂರೈಸುವ ವ್ಯವಸ್ಥೆ ಇಲ್ಲಿ ಅನುಷ್ಠಾನವಾಗುತ್ತಿದೆ.

ಅರ್ಕಾವತಿ ಮತ್ತು ಕುಮುದ್ವತಿ ನದಿಯಿಂದ ಜಲಾಶಯಕ್ಕೆ ನೀರು ಬರುತ್ತದೆ. ಇದಲ್ಲದೆ, ಎತ್ತಿನಹೊಳೆ ಯೋಜನೆಯಿಂದ ಬರುವ ನೀರಿನಲ್ಲಿ ನೆಲಮಂಗಲದ ಸಮೀಪ 1.7 ಟಿಎಂಸಿ ನೀರನ್ನು ತಿಪ್ಪಗೊಂಡನಹಳ್ಳಿಗೆ ಹರಿಸಲಾಗುತ್ತದೆ. ಈ ನೀರನ್ನು ಜಲಾಶಯದಲ್ಲಿ ಶೇಖರಿಸಿಟ್ಟುಕೊಂಡು, ಚಾನೆಲ್ ಮೂಲಕ ಅದನ್ನು ಸಂಸ್ಕರಣೆ ಘಟಕಕ್ಕೆ ಹರಿಸಲಾಗುತ್ತದೆ. ಶುದ್ಧೀಕರಣಗೊಂಡ ನೀರನ್ನು ಅಲ್ಲಿಂದ ಅಳವಡಿಸಲಾಗಿರುವ ಸುಮಾರು 22 ಕಿ.ಮೀ. ಪೈಪ್‌ಲೈನ್ ಮೂಲಕ ಹರಿಸಲಾಗುತ್ತದೆ. ಈ ಮಧ್ಯೆ ತಾವರೆಕೆರೆ ಪಂಪಿಂಗ್ ಸ್ಟೇಷನ್ ಮೂಲಕ ಪೂರೈಸಲಾಗುತ್ತದೆ.

ಬಿಡಿಎ ನಿರ್ಮಿಸಿರುವ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 6 ಮತ್ತು 8ನೇ ಬ್ಲಾಕ್‌ಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯುವ ನೀರು ಪೂರೈಕೆಯಾಗಿದೆ. ಜೊತೆಗೆ ಲಿಂಗಧೀರನಹಳ್ಳಿ ಪ್ರದೇಶಕ್ಕೂ ನೀರು ಸರಬರಾಜು ಆಗಲಿದೆ. ಈ ಯೋಜನೆಯ ವೆಚ್ಚ ಸುಮಾರು ₹300 ಕೋಟಿ.

‘ಕೊಳವೆ ಮಾರ್ಗ ಸಿದ್ಧವಾಗಿದೆ. ಅದರ ಪ್ರಾಯೋಗಿಕ ಪರೀಕ್ಷೆಯನ್ನು ಮುಂದಿನ ತಿಂಗಳಲ್ಲಿ ಮಾಡಲಾಗುತ್ತದೆ. ಈ ಬಾರಿ ಜಲಾಶಯದಲ್ಲಿ 50 ಅಡಿಗೂ ಹೆಚ್ಚು ನೀರಿದೆ. ಇಷ್ಟು ನೀರಿದ್ದರೂ ನಾವು ಸುಮಾರು 8 ತಿಂಗಳು ನಗರಕ್ಕೆ ಪ್ರತಿನಿತ್ಯ 110 ದಶಲಕ್ಷ ಲೀಟರ್ ನೀರು ನೀಡಬಹುದಾಗಿದೆ’ ಎಂದು ಜಲಮಂಡಳಿಯ ಕಾವೇರಿ ನಿರ್ವಹಣೆ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಕೃಷ್ಣ ಗೌಡ ಎಸ್. ತಿಳಿಸಿದರು.

ಕಲ್ಮಶ ಹರಿಯದಂತೆ ಎಸ್‌ಟಿಪಿ ತಡೆ

ಬೆಂಗಳೂರು ನಗರದಿಂದ ಕೈಗಾರಿಕೆ ಪ್ರದೇಶಗಳ ಮೂಲಕ ತಿಪ್ಪಗೊಂಡನಹಳ್ಳಿಗೆ ಈಗಲೂ ಪ್ರತಿನಿತ್ಯ ಸುಮಾರು 2 ಎಂಎಲ್‌ಡಿ ಕಲ್ಮಶ ನೀರು ಅರ್ಕಾವತಿ ನದಿ ನೀರಿನೊಂದಿಗೆ ಹರಿಯುತ್ತಿದೆ. ಇದನ್ನು ಜಲಾಶಯಕ್ಕೆ ಹರಿಯದಂತೆ ತಡೆಯಲು ಜಲಮಂಡಳಿಗೆ ಸೇರಿದ ಜಾಗದಲ್ಲಿ ಅತ್ಯಾಧುನಿಕ ತ್ಯಾಜ್ಯ ಸಂಸ್ಕರಣೆ ಘಟಕವನ್ನು ನಿರ್ಮಿಸಲಾಗುತ್ತಿದೆ. ಮೂರು ಹಂತಗಳಲ್ಲಿ ಈ ಭಾಗದಿಂದ ಹರಿಯುವ ನೀರನ್ನು ಸಂಸ್ಕರಿಸುವ ತಂತ್ರಜ್ಞಾನ ಈ ಘಟಕದ್ದಾಗಿದೆ. ಇಲ್ಲಿ ಸಂಸ್ಕರಣೆಯಾದ ನೀರು ಮಾತ್ರ ಜಲಾಶಯ ತಲುಪುವಂತೆ ಮಾಡುವ ವ್ಯವಸ್ಥೆ ಇದಾಗಿದೆ. ನಿತ್ಯ 20 ದಶಲಕ್ಷ ಲೀಟರ್ ನೀರನ್ನು ಸಂಸ್ಕರಿಸುವ ಸಾಮರ್ಥ್ಯ ಈ ಘಟಕದ್ದು. ಜಲಮಂಡಳಿ ಅಧಿಕಾರಿಗಳ ಪ್ರಕಾರ, ಇನ್ನೊಂದು ತಿಂಗಳಲ್ಲಿ ಈ ಘಟಕ ಕಾರ್ಯಾರಂಭ ಮಾಡಲಿದೆ.

ಜಲಾಶಯಕ್ಕೆ ಕಲ್ಮಶ ನೀರು ಹರಿಯದಂತೆ ನಿರ್ಮಿಸಲಾಗುತ್ತಿರುವ ತ್ಯಾಜ್ಯ ಸಂಸ್ಕರಣೆ ಘಟಕ

ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ. ತಿಪ್ಪಗೊಂಡನಹಳ್ಳಿಯಿಂದ ಮಾರ್ಚ್ ವೇಳೆಗೆ ನಗರಕ್ಕೆ ನೀರು ಪೂರೈಸಲಾಗುತ್ತದೆ.

ಎ. ರಾಜಶೇಖರ್, ಮುಖ್ಯ ಎಂಜಿನಿಯರ್, ಕಾವೇರಿ ನಿರ್ವಹಣೆ, ಜಲಮಂಡಳಿ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಿರ್ಮಾಣ ಹಂತದಲ್ಲಿರುವ ನೀರು ಸಂಸ್ಕರಣೆ ಘಟಕ

ಹೂಳು ತೆಗೆಯಲು ‘ಹೈ’ ತಂತ್ರಜ್ಞಾನ

ಜಲಾಶಯದಲ್ಲಿ ಸುಮಾರು 25 ಅಡಿ ನೀರು ಇರುವ ಸಂದರ್ಭದಲ್ಲಿಯೇ ‘ಹೈಡ್ರಾಲಿಕ್ ಡ್ರೆಡ್ಜಿಂಗ್’ ವಿಧಾನದಿಂದ ಹೂಳು ತೆಗೆಯಲಾಗಿದೆ. ಯಂತ್ರಗಳ ಸಹಾಯದಿಂದ ಹೂಳು, ಕೊಳಕನ್ನು ಪೈಪ್‌ಗಳ ಮೂಲಕ ಹೊರಭಾಗಕ್ಕೆ ಸಾಗಿಸಲಾಗಿದೆ. ಅಲ್ಲಿ ಅದನ್ನು ಪೂರ್ಣವಾಗಿ ಒಣಗಿಸಿ, ನಂತರ ಅಲ್ಲಿಂದ ಲಾರಿಗಳ ಮೂಲಕ ಸಾಗಿಸಲಾಗಿದೆ. ಸುಮಾರು 1.25 ಲಕ್ಷ ಕ್ಯೂಬಿಕ್ ಮೀಟರ್ ಹೂಳನ್ನು ತೆಗೆಯಲಾಗಿದ್ದು, ಇದನ್ನು ಜಿಲ್ಲಾಡಳಿತದ ಅನುಮತಿ ಮೇರೆಗೆ ಅನುಪಯುಕ್ತ ಕ್ವಾರಿಯಲ್ಲಿ ತುಂಬಲಾಗಿದೆ.

ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಹೂಳು ತೆಗೆಯಲು ಬಳಸಿದ ‘ಹೈಡ್ರಾಲಿಕ್ ಡ್ರೆಡ್ಜಿಂಗ್’ ವಿಧಾನ

ಕೋವಿಡ್‌ನಿಂದ ವಿಳಂಬ

ತಿಪ್ಪಗೊಂಡನಹಳ್ಳಿ ಜಲಾನಯನ ಪುನಶ್ಚೇತನ ಯೋಜನೆ ಈಗಾಗಲೇ ಪೂರ್ಣಗೊಂಡು, ನೀರನ್ನು ಸರಬರಾಜು ಮಾಡಬೇಕಾಗಿತ್ತು. ಆದರೆ, ಕೋವಿಡ್ ಲಾಕ್‌ಡೌನ್‌ನಿಂದಾಗಿ ಸಾಕಷ್ಟು ಸಮಸ್ಯೆಯಾಗಿ ಯೋಜನೆ ವಿಳಂಬವಾಗಿದೆ. ಇದೀಗ ತ್ವರಿತಗತಿಯಲ್ಲಿ ಕಾಮಗಾರಿಯನ್ನು ’ಮೆಘ‘ ಸಂಸ್ಥೆ ನಡೆಸುತ್ತಿದೆ. ಆದಷ್ಟು ಬೇಗ ಎಲ್ಲ ರೀತಿಯ ಕಾಮಗಾರಿಗಳನ್ನು ಪೂರ್ಣಗೊಳಿಸಿ, ನೀರು ಸರಬರಾಜು ಮಾಡಲಾಗುತ್ತದೆ ಎಂದು ಜಲಮಂಡಳಿಯ ಕಾವೇರಿ ನಿರ್ವಹಣೆ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಕೃಷ್ಣ ಗೌಡ ಎಸ್. ತಿಳಿಸಿದರು.

ಬೆಂಗಳೂರಿನಿಂದ ಮಾಗಡಿ ರಸ್ತೆಯಲ್ಲಿ ಸಾಗಿದರೆ ತಾವರೆಕೆರೆಯಿಂದ ಸುಮಾರು 8 ಕಿ.ಮೀ. ದೂರದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯವಿದೆ. ಕಾವೇರಿಗೆ ಮುನ್ನ ಅದರ ಉಪನದಿ ಅರ್ಕಾವತಿಗೆ ಅಡ್ಡಲಾಗಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಮೇಲುಸ್ತುವಾರಿಯಲ್ಲಿ ನಿರ್ಮಿಸಲಾಗಿರುವ ಚಾಮರಾಜಸಾಗರ ಜಲಾಶಯದಿಂದ ನಗರಕ್ಕೆ 1933ರ ಏಪ್ರಿಲ್‌ನಲ್ಲಿ ನೀರು ಪೂರೈಸಲಾಗುತ್ತಿತ್ತು. ಮೊದಲು 27 ಎಂಎಲ್‌ಡಿ ನೀರು ಬರುತ್ತಿತ್ತು. 1946ರಲ್ಲಿ 45 ಎಂಎಲ್‌ಡಿಗೆ ವೃದ್ಧಿಯಾಯಿತು. 1954–58ರಲ್ಲಿ ಶೇಖರಣಾ ಸಾಮರ್ಥ್ಯವನ್ನು ವೃದ್ಧಿಸಿ 54 ಎಂಎಲ್‌ಡಿ ನೀರು ತರಲಾಯಿತು. ಮೂರನೇ ಹಂತದಲ್ಲಿ 20 ಎಂಎಲ್‌ಡಿ ನೀರನ್ನು ಸಂಸ್ಕರಿಸುವ ಘಟಕಗಳನ್ನು ಸ್ಥಾಪಿಸಲಾಯಿತು. 1974ರ ವೇಳೆಗೆ 135 ಎಂಎಲ್‌ಡಿ ನೀರು ನಗರಕ್ಕೆ ಸರಬರಾಜಾಗುತ್ತಿತ್ತು. 1998ರ ನಂತರ ನೀರು ಸರಬರಾಜು ಕಡಿಮೆಯಾಗುತ್ತಾ ಬಂದಿತು. 2012ರ ಡಿಸೆಂಬರ್‌ನಲ್ಲಿ ನೀರಿನ ಗುಣಮಟ್ಟ ಕಳಪೆಯಾದ್ದರಿಂದ ಸರಬರಾಜು ಪೂರ್ಣ ಸ್ಥಗಿತಗೊಂಡಿತು.

- **1980**ರ ನಂತರ ನೀರಿನ ಹರಿವು ಕಡಿಮೆಯಾಗಿ ಈವರೆಗೆ 1988, 1994 ಮತ್ತು 1998ರಲ್ಲಿ ಮಾತ್ರ ಜಲಾಶಯ ಪೂರ್ಣ ಭರ್ತಿಯಾಗಿತ್ತು.
- **1998** ರ ನಂತರ ಪೀಣ್ಯ, ದಾಸರಹಳ್ಳಿಯಲ್ಲಿ ಕೈಗಾರಿಕೆ ಪ್ರದೇಶ ಹಾಗೂ ನಗರ ಪ್ರದೇಶಗಳಿಂದ ತ್ಯಾಜ್ಯ ಹರಿದುಬರಲಾರಂಭಿಸಿತು.
- **1998**ರಲ್ಲಿ ಜಲಾಗಾರದಲ್ಲಿ ಮೊದಲ ಬಾರಿಗೆ ಕೆಂಪು ಹುಳುಗಳು ಕಂಡುಬಂದವು. ಇವು ನೀರು ಮಲಿನಗೊಳ್ಳುತ್ತಿರುವುದನ್ನು ದೃಢೀಕರಿಸಿದವು.
- **2001**ರಲ್ಲಿ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಕಾರ್ಖಾನೆಗಳಿಂದ ಅರ್ಕಾವತಿ ನದಿ ನೀರು ಮಲಿನವಾಗುತ್ತಿದೆ ಎಂದು ವರದಿ ನೀಡಿತು.
- **2003**ರಲ್ಲಿ ಇಸ್ರೊ ಹಾಗೂ ತಜ್ಞರ ಸಲಹೆ ಮೇರೆಗೆ ಸರ್ಕಾರ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ ರಕ್ಷಣೆಗೆ ನಿಯಮ ರೂಪಿಸಿ ಅಧಿಸೂಚನೆ ಹೊರಡಿಸಿತು. ನಂತರದ ದಿನಗಳಲ್ಲೂ ಅನಧಿಕೃತ ಬಡಾವಣೆ, ಕೈಗಾರಿಕೆಗಳು ನಿರ್ಮಾಣವಾಗಿ ಅರ್ಕಾವತಿ ನದಿ ಸೇತುವೆ ಇರುವ ಮಾಕಳಿ ಬಳಿ ಬೃಹತ್ ಚಟುವಟಿಕೆಗಳು ಶುರುವಾದವು.
- **2007-08** ರಲ್ಲಿ ಒಳಹರಿವು ಮತ್ತಷ್ಟು ಕಡಿಮೆಯಾಯಿತು. ಮಾಲಿನ್ಯ ಪ್ರಮಾಣವೂ ಹೆಚ್ಚಾಯಿತು. ₹22 ಕೋಟಿ ವೆಚ್ಚದಲ್ಲಿ ನದಿಯ ಕಾಲುವೆ ಪುನಶ್ಚೇತನ ಮಾಡಲಾಯಿತು.
- **2012**ರಲ್ಲಿ ಜಲಾಶಯ ದಲ್ಲಿರುವ ನೀರಿನ ಗುಣಮಟ್ಟ ಕಳಪೆ ಎಂಬುದು ಸಾಬೀತಾಗಿ, ನಗರಕ್ಕೆ ನೀರು ಸರಬರಾಜನ್ನು ಡಿಸೆಂಬರ್‌ನಿಂದ ಸ್ಥಗಿತಗೊಳಿಸಲಾಯಿತು.

ದಶಪಥ ಕಾಮಗಾರಿ ಉದ್ಘಾಟನೆ ಮುಂದಕ್ಕೆ

ರಾಮನಗರ: ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಕಾಮಗಾರಿಯ ಭಾಗಶಃ ಉದ್ಘಾಟನೆ ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ಮಂಡ್ಯ ಜಿಲ್ಲೆಯ ನಿಡಘಟ್ಟದಿಂದ ಬೆಂಗಳೂರಿನ ಕ್ರೈಸ್ಟ್ ಕಾಲೇಜುವರೆಗೆ ಸುಮಾರು 51 ಕಿ.ಮೀ. ಉದ್ದದ ಹೆದ್ದಾರಿ ಕಾಮಗಾರಿ ಬಹುತೇಕ ಮುಕ್ತಾಯ ಹಂತದಲ್ಲಿದೆ. ಇದನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸೋಮವಾರದಿಂದ ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಯೋಜಿಸಿತ್ತು. ಆದರೆ, ದೆಹಲಿಯಿಂದ ರಸ್ತೆ ಸುರಕ್ಷತೆ ವಿಭಾಗದ ಅಧಿಕಾರಿಗಳ ತಂಡವು ಪರಿಶೀಲನೆ ನಡೆಸಿ ಹಸಿರು ನಿಶಾನೆ ತೋರಿಲ್ಲ. ಈ ಹಿನ್ನೆಲೆಯಲ್ಲಿ ವಿಳಂಬ ಆಗಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ ಹೊಸ ದಾರಿಯಲ್ಲಿ ನಿಡಘಟ್ಟದಿಂದ ಕ್ರೈಸ್ಟ್ ಕಾಲೇಜುವರೆಗೆ ಸಂಚಾರ ಕೈಗೊಂಡು ಕಾಮಗಾರಿ ಪರಿಶೀಲಿಸಿದ್ದರು.

ಜಾಮೀನಿಗೆ ‘ಸುಪ್ರೀಂ’ ಮೊರೆ ಹೋದ ಐಎಎಸ್ ಅಧಿಕಾರಿ ಮಂಜುನಾಥ್

ನವದೆಹಲಿ: ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನದಲ್ಲಿರುವ ಐಎಎಸ್ ಅಧಿಕಾರಿ ಜೆ.ಮಂಜುನಾಥ್ ಅವರು ಜಾಮೀನು ಕೋರಿ ಸೋಮವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು ಇದೇ 17ರಂದು ಅರ್ಜಿಯ ವಿಚಾರಣೆ ನಡೆಸಲು ನ್ಯಾಯಾಲಯ ಸಮ್ಮತಿಸಿದೆ.

ಕರ್ನಾಟಕ ಹೈಕೋರ್ಟ್ ಆ.3ರಂದು ಅವರಿಗೆ ಜಾಮೀನು ನಿರಾಕರಿಸಿತ್ತು.

ಎಸಿಬಿ ವಿರುದ್ಧ ಹೈಕೋರ್ಟ್ ಕಟುವಾದ ಟೀಕೆಗಳ ಮೂಲಕ ಚಾಟಿ ಬೀಸಿತ್ತು. ಈ ಪ್ರಕರಣದಲ್ಲಿ ತಮಗೆ ವರ್ಗಾವಣೆ ಬೆದರಿಕೆ ಬಂದಿರುವುದನ್ನು ನ್ಯಾಯಮೂರ್ತಿ ಬಹಿರಂಗಪಡಿಸಿದ್ದರು.

ತ್ರಿ–ಡಿ ಮುದ್ರಿತ ಕೃತಕ ಕಾರ್ನಿಯಾ

ಒಂದನೇ ಪುಟದಿಂದ

‘ಇದು ಸಂಪೂರ್ಣವಾಗಿ ನೈಸರ್ಗಿಕ ಉತ್ಪನ್ನವಾಗಿದೆ. ಇದರಲ್ಲಿ ಯಾವುದೇ ಬಗೆಯ ಸಿಂಥೆಟಿಕ್ ಅಂಶಗಳನ್ನು ಸೇರ್ಪಡೆ ಮಾಡಿಲ್ಲ. ಇದು ಅತ್ಯಂತ ಸುರಕ್ಷಿತವಾಗಿದ್ದು, ರೋಗಿಗಳ ಬಳಕೆಗೆ ಮುಕ್ತವಾಗಿದೆ’ ಎಂದೂ ಹೇಳಲಾಗಿದೆ.

‘ಈ ಕಾರ್ನಿಯಾ ತಯಾರಿಕೆಗಾಗಿ ‘ಬಯೊ ಇಂಕ್’ ಬಳಸಲಾಗಿದೆ. ಯುದ್ಧದ ಸಂದರ್ಭಗಳಲ್ಲಿ ಯೋಧರ ಕಣ್ಣುಗಳಿಗೆ ಹಾನಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ. ಅವರ ದೃಷ್ಟಿಗೆ ಹಾನಿಯಾಗದಂತೆ ರಕ್ಷಿಸಲು ಹಾಗೂ ಕಣ್ಣಿಗೆ ಯಾವುದೇ ಬಗೆಯ ಸೋಂಕು ತಗುಲದಂತೆ ತಡೆಯಲು ಬಯೊ ಇಂಕ್ ಪ್ರಯೋಜನಕಾರಿ. ಕುಗ್ರಾಮದ ಜನರು ಕಣ್ಣಿನ ಆರೈಕೆ ಸೌಕರ್ಯದಿಂದ ವಂಚಿತರಾಗಿರುತ್ತಾರೆ. ಅಂತಹ ಸ್ಥಳಗಳಲ್ಲಿ ‘ಬಯೊ ಇಂಕ್’ ಬಳಸಬಹುದು’ ಎಂದು ಕಾರ್ನಿಯಾ ಅಭಿವೃದ್ಧಿಪಡಿಸಿರುವ ಸಂಶೋಧಕರ ತಂಡದ ಸದಸ್ಯರಾದ ಡಾ.ಸಯಾನ್ ಬಸು ಹಾಗೂ ಡಾ.ವಿವೇಕ್ ಸಿಂಗ್ ತಿಳಿಸಿದ್ದಾರೆ.

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ
ವಸತಿ ಇಲಾಖೆ

ಕರ್ನಾಟಕ ಗೃಹ ಮಂಡಳಿ ಅರ್ಪಿಸುತ್ತಿದೆ
ಆನೇಕಲ್ ತಾಲ್ಲೂಕು, ಚಂದಾಪುರದ
ಸೂರ್ಯನಗರ 1ನೇ ಹಂತದಲ್ಲಿ ನಿರ್ಮಿಸಲಾಗಿರುವ
“ಸೂರ್ಯ ಎಲಿಗೆನ್ಸ್”
ಬಹುಮಹಡಿ ವಸತಿ ಸಮುಚ್ಚಯ

ಕರ್ನಾಟಕ ಗೃಹ ಮಂಡಳಿ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ವಸತಿ ಕ್ಷೇತ್ರದ ಹರಿಕಾರ
ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ ಶ್ರೀ ವಿ. ಸೋಮಣ್ಣ ರವರಿಂದ ವಸತಿ ಯೋಜನೆ ಕಾಮಗಾರಿಯ ಪರಿವೀಕ್ಷಣೆಗೆ ಆಗಮಿಸುತ್ತಿರುವ ಸಂದರ್ಭ

ಸಮುಚ್ಚಯದ ನೈಜ ಚಿತ್ರ
G+7 Floors

ರೇರಾ (RERA) ಸಂಖ್ಯೆ: PRM/KA/RERA/1251/308/PR/180208/001786, Dt: 31.08.2017 ಅಡಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ.

ಫ್ಲಾಟ್‌ಗಳು ಲಭ್ಯವಿದೆ

ಲಭ್ಯವಿರುವ ಆಧುನಿಕ ನಾಗರೀಕ ಸೌಲಭ್ಯಗಳು
- ಕ್ಲಬ್ ಹೌಸ್, ಪಾರ್ಟಿ ಹಾಲ್, ಫುಡ್ ಕೋರ್ಟ್, ಜಿಮ್, ಲೈಬ್ರರಿ
- ಒಳಾಂಗಣ ಕ್ರೀಡಾಂಗಣ / ಬ್ಯಾಡ್ಮಿಂಟನ್ / ಬಾಸ್ಕೆಟ್ ಬಾಲ್ ಕೋರ್ಟ್ / ಸಂದರ್ಶಕರ ಕಾರ್ ಪಾರ್ಕಿಂಗ್
- ಈಜು ಕೊಳ
- ಕಾರ್ ಪಾರ್ಕಿಂಗ್
- ಮಕ್ಕಳ ಆಟದ ಮೈದಾನ / ಉದ್ಯಾನವನ
- BWSSB ಕಾವೇರಿ ನೀರಿನ ಸೌಲಭ್ಯ
- ಮಳೆ ನೀರು ಕೊಯ್ಲು ಅಳವಡಿಕೆ

ರಾಜ್ಯದಲ್ಲಿ ವಸತಿ ರಹಿತರ ಬದುಕಿನ ಬವಣೆ ನೀಗಿಸಲು ಕ್ರಿಯಾಶೀಲ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್ ಬೊಮ್ಮಾಯಿ ರವರ ನೇತೃತ್ವದಲ್ಲಿ, ಸನ್ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ವಿ.ಸೋಮಣ್ಣರವರ ಅವಿರತ ಪರಿಶ್ರಮ ಹಾಗೂ ದೃಢ ಸಂಕಲ್ಪದಿಂದ ವಸತಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಸಾಧನೆ - ಕರ್ನಾಟಕ ಸರ್ಕಾರದ ಹೆಗ್ಗಳಿಕೆ.

ವರ್ಗ	ಫ್ಲಾಟ್ ವಿಸ್ತೀರ್ಣ (ಅಂದಾಜು)	ಪ್ರತಿ ಫ್ಲಾಟ್‌ನ ಬೆಲೆ
2 BHK	78.80 – 80.80 ಚ.ಮೀ. (848.00 – 870.00 ಚ.ಅಡಿ)	(ಪ್ರತಿ ಚ.ಮೀ.ಗೆ – ರೂ.35,521/– ರಿಂದ 36,329/–) (ಪ್ರತಿ ಚ.ಅಡಿ ರೂ.3,300/– ರಿಂದ ರೂ.3,375/–) (ಕಾರ್ ಪಾರ್ಕಿಂಗ್ ಒಳಗೊಂಡಿದೆ)
3 BHK	121.60–126.90 ಚ.ಮೀ. (1309.00–1366.00 ಚ.ಅಡಿ)	

ಫ್ಲಾಟ್‌ಗಳಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು
ಅರ್ಜಿ ಮತ್ತು e-payment ವಿವರಗಳಿಗಾಗಿ ಹಾಗೂ ಹಂಚಿಕೆ ನಿಯಮ ಮತ್ತು ಷರತ್ತುಗಳಿಗೆ ಮಂಡಳಿಯ ವೆಬ್‌ಸೈಟ್:
https://www.khb.karnataka.gov.in ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಮೊಬೈಲ್ ಸಂಖ್ಯೆ: 8722925429 / 7892908417 / 9448579426
ಕಾರ್ಯಪಾಲಕ ಅಭಿಯಂತರರು (ಹಂಚಿಕೆ)
ಮೊಬೈಲ್ ಸಂಖ್ಯೆ: 9886344619
https://www.khb.karnataka.gov.in

ನಾಡಿನ ಸಮಸ್ತ ಜನತೆಗೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಾರ್ದಿಕ ಶುಭಾಶಯಗಳು

ಡಾ. ಜೆ. ರವಿಶಂಕರ್, ಭಾಆಸೇ
ಸರ್ಕಾರದ ಕಾರ್ಯದರ್ಶಿಗಳು
ವಸತಿ ಇಲಾಖೆ, ಕರ್ನಾಟಕ ಸರ್ಕಾರ

ಡಿ.ಎಸ್. ರಮೇಶ್, ಭಾಆಸೇ
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ

ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು. - ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಮಾಸ್ಕ್ ಧರಿಸಿ
ದೈಹಿಕ ಅಂತರ ಪಾಲಿಸಿ
ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ
ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಕರ್ನಾಟಕ ಗೃಹ ಮಂಡಳಿ
3 ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ದಾಸ್ತಿಕೊಪ್ಪ ಬಳಿ ಸಂತೋಷ ಲಾಡ್ ಪ್ರತಿಷ್ಠಾನ ಆಯೋಜಿಸಿದ್ದ ಬೃಹತ್ ರಾಷ್ಟ್ರಧ್ವಜ ಮೆರವಣಿಗೆಯಲ್ಲಿ ಸಾವಿರಾರು ಜನರು ಪಾಲ್ಗೊಂಡರು

1. ಹೊಸಪೇಟೆಯ ಮುನ್ಸಿಪಲ್ ಮೈದಾನದಲ್ಲಿ ಸೋಮವಾರ 405 ಅಡಿ ಎತ್ತರದ ಧ್ವಜಸ್ತಂಭದಲ್ಲಿ 120X80 ಅಡಿ ಅಳತೆಯ ತ್ರಿವರ್ಣ ಧ್ವಜ ಹಾರಿಸಲಾಯಿತು. ದೇಶದಲ್ಲೇ ಅತಿ ಎತ್ತರದ ಧ್ವಜಸ್ತಂಭ ಹೊಂದಿದ ಹೆಗ್ಗಳಿಕೆ ವಿಜಯನಗರ ಜಿಲ್ಲೆಯದ್ದಾಗಿದೆ. 2. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಭಾಷಣದ ನಂತರ ವಿವಿಧ ರಾಜ್ಯಗಳ ಸಾಂಪ್ರದಾಯಿಕ ದಿರಿಸು ತೊಟ್ಟು ಬಂದಿದ್ದ ಎನ್‌ಸಿಸಿ ಕೆಡೆಟ್‌ಗಳ ಜೊತೆ ಮಾತನಾಡಿದರು (ಪಿಟಿಐ ಚಿತ್ರ)

3. ತ್ರಿವರ್ಣ ಧ್ವಜವನ್ನು ಆಕಾಶದಲ್ಲಿ 30 ಕಿ.ಮೀ. ಎತ್ತರದಲ್ಲಿ ಹಾರಿಸಿದ ಸ್ಪೇಸ್ ಕಿಡ್ಸ್ ಇಂಡಿಯಾ ಸಂಸ್ಥೆ –ಚಿತ್ರ ಕೃಪೆ/ಸ್ಪೇಸ್ ಕಿಡ್ಸ್ ಇಂಡಿಯಾ 4. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಸೋಮವಾರ ನಡೆದ ಸ್ವಾತಂತ್ರ್ಯಅಮೃತ ಮಹೋತ್ಸವದಲ್ಲಿ 25 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸೋಮವಾರ ನಡೆದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಗೌರವ ವಂದನೆ ಸ್ವೀಕರಿಸಿದರು

ದೇಶದ ಸಮೃದ್ಧಿಗೆ ಪ್ರತೀ ಭಾರತೀಯರು ಕೊಡುಗೆ ನೀಡಲು ಪ್ರಧಾನಿಯವರ ಮಾತುಗಳು ಸ್ಫೂರ್ತಿ ತುಂಬಿವೆ. ಮಹಿಳಾ ಸಬಲೀಕರಣದ ಬಗ್ಗೆ ಪ್ರಧಾನಿ ತಮ್ಮ ಬದ್ಧತೆ ಪುನರುಚ್ಚರಿಸಿದ್ದಾರೆ
ಅಮಿತ್ ಶಾ
ಕೇಂದ್ರ ಗೃಹ ಸಚಿವ

ಕೆಂಪುಕೋಟೆಯ ಮೇಲೆ ಪ್ರಧಾನಿಯವರು ಹೇಳಿದ ಮಾತುಗಳು ಚೈತನ್ಯದಾಯಕ. ಮುಂದಿನ 25 ವರ್ಷಗಳ 'ಅಮೃತಕಾಲ'ಕ್ಕೆ ನಮ್ಮನ್ನು ಅವು ಒಗ್ಗೂಡಿಸಲಿವೆ
ಪೀಯೂಷ್ ಗೋಯಲ್
ಕೇಂದ್ರ ಸಚಿವ

75 ವರ್ಷಗಳ ಹಿಂದೆ ದೇಶವು ಜಗತ್ತಿಗೆ ಸತ್ಯ ಮತ್ತು ಅಹಿಂಸೆಯ ಪಥವನ್ನು ತೋರಿಸಿತ್ತು. ನಿತ್ಯನೂತನ ಭಾರತಮಾತೆಯನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು ಕಾಂಗ್ರೆಸ್ ಗೌರವದಿಂದ ಸ್ಮರಿಸುತ್ತಿದೆ
ರಾಹುಲ್ ಗಾಂಧಿ
ಕಾಂಗ್ರೆಸ್ ಮುಖಂಡ

ಪ್ರಧಾನಿ ಆಶಯದಂತೆ ಸ್ವಾತಂತ್ರ್ಯೋತ್ಸವದ 100ನೇ ವರ್ಷದ ಹೊತ್ತಿಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವುದು ಸಾಧ್ಯವಿದೆ. ಉದ್ಯಮ ವಲಯ ಇದಕ್ಕೆ ಸಿದ್ಧವಾಗಿದೆ
ದೀಪಕ್ ಸೂದ್, ಅಸೋಚಾಮ್ ಮಹಾಕಾರ್ಯದರ್ಶಿ

ಪ್ರಧಾನಿಯವರ ಮಾತುಗಳು 130 ಕೋಟಿ ಭಾರತೀಯರ ಸಂಘಟಿತ ಉತ್ಸಾಹವನ್ನು ತೋರಿಸಿವೆ. ಪ್ರಮುಖ ಕ್ಷೇತ್ರಗಳಲ್ಲಿ ನುರಿತ ಮಾನವ ಸಂಪನ್ಮೂಲದ ಅಗತ್ಯವನ್ನು ದೇಶದ ಯುವಜನಾಂಗ ಪೂರೈಸಲಿದೆ
ಚಂದ್ರಜಿತ್ ಬ್ಯಾನರ್ಜಿ, ಭಾರತೀಯ ಕೈಗಾರಿಕಾ ಒಕ್ಕೂಟದ ಮಹಾನಿರ್ದೇಶಕ

ಆತ್ಮನಿರ್ಭರ ಅಭಿಯಾನದಲ್ಲಿ ಖಾಸಗಿ ವಲಯದ ಪಾತ್ರ ನಿರ್ಣಾಯಕ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಈ ಗುರಿ ಸಾಧಿಸುವಲ್ಲಿ ಭಾರತೀಯ ಉದ್ಯಮ ಕೆಲಸ ಮಾಡಲಿದೆ
ಸಂಜಯ್ ಮೆಹ್ತಾ
ಫಿಕ್ಕಿ ಅಧ್ಯಕ್ಷ

5 ಕೋಟಿ ಸೆಲ್ಫಿ!

'ಹರ್ ಘರ್ ತಿರಂಗಾ' ಅಭಿಯಾನ ವೆಬ್‌ಸೈಟ್‌ನಲ್ಲಿ 5 ಕೋಟಿಗೂ ಹೆಚ್ಚು ಸೆಲ್ಫಿಗಳು ಅಪ್‌ಲೋಡ್ ಆಗಿವೆ. ಪ್ರಧಾನಿ ಕರೆಯಂತೆ, ತಿರಂಗಾ ಹಿಡಿದು ಸೆಲ್ಫಿ ತೆಗೆದುಕೊಂಡ ಜನರು, ಅದನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದಾರೆ. ಸೋಮವಾರ ಸಂಜೆ 4 ಗಂಟೆಯ ಹೊತ್ತಿಗೆ 5 ಕೋಟಿ ಸೆಲ್ಫಿ ಗುರಿ ಮುಟ್ಟಲಾಯಿತು ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯ ತಿಳಿಸಿದ್ದು, ಅದ್ಭುತ ಸ್ಪಂದನೆ ಸಿಕ್ಕಿದೆ ಎಂದಿದೆ.

'ಮಕ್ಕಳಿಗೆ ನಮಿಸುವೆ'

ವಿದೇಶಿ ಆಟಿಕೆಗಳು ಬೇಡ ಎನ್ನುವ ಮಕ್ಕಳಿಗೆ ನಮಿಸುವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಂತಹ ಮಕ್ಕಳಲ್ಲಿ 'ಆತ್ಮನಿರ್ಭರ ಭಾರತ'ದ ರಕ್ತ ಹರಿಯುತ್ತಿರುತ್ತದೆ ಎಂದರು.

'5ರಿಂದ 7ರೊಳಗಿನ ಪುಟ್ಟ ಮಕ್ಕಳಿಗೆ ನಮಿಸಲು ಬಯಸುವೆ. ದೇಶದ ಆತ್ಮವು ಎಚ್ಚೆತ್ತಿದೆ. 5–7ರೊಳಗಿನ ಅಸಂಖ್ಯ ಮಕ್ಕಳು ವಿದೇಶಿ ಆಟಿಕೆಗಳು ತಮಗೆ ಬೇಡ ಎಂದು ಹೇಳಿದ್ದಾರೆ ಎಂಬುದು ತಿಳಿದಿದೆ. ಐದು ವರ್ಷದ ಮಗುವು ಅಂತಹ ನಿರ್ಧಾರಕ್ಕೆ ಬಂದಾಗ ಆ ಮಗುವಿನಲ್ಲಿ ಸ್ವಾವಲಂಬಿ ಭಾರತದ ಸ್ಫೂರ್ತಿ ಇರುತ್ತದೆ' ಎಂದರು.

ಭ್ರಷ್ಟಾಚಾರ, ಸ್ವಜನಪಕ್ಷಪಾತ ದೇಶದ ಮುಂದಿರುವ ಸವಾಲು

ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತವು ಈ ದೇಶದ ಮುಂದಿರುವ ಎರಡು ದೊಡ್ಡ ಸವಾಲುಗಳು ಎಂದು ಪ್ರಧಾನಿ ಹೇಳಿದ್ದಾರೆ. ಈ ಕೆಡುಕುಗಳನ್ನು ಜನರು ದ್ವೇಷಿಸಬೇಕು ಎಂದು ಹೇಳಿದ್ದಾರೆ.

ವಂಶಾಡಳಿತದ ಸವಾಲುಗಳ ಬಗ್ಗೆ ಅವರು ಮಾತನಾಡಿದರು. ಭ್ರಷ್ಟಾಚಾರವು ದೇಶವನ್ನು ಗೆದ್ದಲಿನಂತೆ ತಿನ್ನುತ್ತಿದೆ ಎಂದ ಅವರು ಭ್ರಷ್ಟಾಚಾರದ ವಿರುದ್ಧದ ಯುದ್ಧದಲ್ಲಿ ದೇಶವು ಮಹತ್ವದ ಘಟ್ಟ ತಲುಪಿದೆ ಎಂದರು.

'ಅಮೃತ'ದ ಶತಮಾನ ಧ್ಯಾನ

ಒಂದನೇ ಪುಟದಿಂದ...

ಸಂಶೋಧನೆ ಮತ್ತು ನಾವೀನ್ಯಕ್ಕೆ ಒತ್ತು ನೀಡುವುದಕ್ಕಾಗಿ 'ಜೈ ಅನುಸಂಧಾನ್' (ಜೈ ನಾವೀನ್ಯ) ಎಂಬ ಹೊಸ ಘೋಷಣೆಯನ್ನು ಪ್ರಧಾನಿ ಕೊಟ್ಟರು.

ಪ್ರಧಾನಿಯವರು ಯಾವುದೇ ಹೊಸ ಯೋಜನೆಯನ್ನು ಪ್ರಕಟಿಸಲಿಲ್ಲ. ಹಿಂದಿನ ವರ್ಷಗಳ ಭಾಷಣಗಳಲ್ಲಿ ಅವರು ವಿವಿಧ ಯೋಜನೆಗಳನ್ನು ಘೋಷಿಸಿದ್ದರು. ಅವರಿಗಿಂತ ಹಿಂದೆ ಪ್ರಧಾನಿ ಹುದ್ದೆಯಲ್ಲಿದ್ದವರು ಕೂಡ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಹೊಸ ಯೋಜನೆಗಳನ್ನು ಪ್ರಕಟಿಸಿದ್ದರು.

ಭಾಷಾ ವೈವಿಧ್ಯಕ್ಕೆ ಹೆಮ್ಮೆ: 'ಭಾಷಾ ತೊಡಕು ನಮ್ಮ ಪ್ರತಿಭೆಗೆ ಅಡ್ಡಿಯಾಗಿದ್ದರೂ ದೇಶದಲ್ಲಿ ಇರುವ ಭಾಷಾ ವೈವಿಧ್ಯದ ಬಗ್ಗೆ ಹೆಮ್ಮೆಪಡಬೇಕು' ಎಂದು ಪ್ರಧಾನಿ ಹೇಳಿದ್ದಾರೆ.

ಪ್ರಧಾನಿ ಭಾಷಣವು ಹಲವು ಬುದ್ಧಿಮಾತುಗಳಿಂದ ಕೂಡಿತ್ತು. 82 ನಿಮಿಷಗಳಷ್ಟು ದೀರ್ಘವಾಗಿತ್ತು.

ಪ್ರಧಾನಿ ಯಾವುದೇ ಹೊಸ ಯೋಜನೆ ಪ್ರಕಟಿಸಲಿಲ್ಲ. ಹಿಂದಿನ ವರ್ಷಗಳ ಭಾಷಣಗಳಲ್ಲಿ ಅವರು ವಿವಿಧ ಯೋಜನೆಗಳನ್ನು ಘೋಷಿಸಿದ್ದರು. ಅವರಿಗಿಂತ ಹಿಂದೆ ಪ್ರಧಾನಿ ಹುದ್ದೆಯಲ್ಲಿದ್ದವರು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಹೊಸ ಯೋಜನೆಗಳನ್ನು ಪ್ರಕಟಿಸಿದ್ದರು.

ಮಹಿಳಾ ಕಲ್ಯಾಣ ಕಾರ್ಯಕ್ರಮಗಳು: ಆತ್ಮಾವಲೋಕನಕ್ಕೆ ಪ್ರತಿಪಕ್ಷಗಳ ಆಗ್ರಹ

ಪ್ರಧಾನಿ ಮೋದಿಗೆ 'ನಾರಿಶಕ್ತಿ' ತರಾಟೆ

ನವದೆಹಲಿ (ಪಿಟಿಐ): ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ 'ನಾರಿಶಕ್ತಿ'ಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಹೊಗಳಿದ್ದಾರೆ. ಮಹಿಳೆಯರಿಗೆ ಅವಮಾನ ಮಾಡಬಾರದು ಎಂದಿದ್ದಾರೆ. ಆದರೆ, ವಾಸ್ತವ ಬೇರೆಯೇ ಇದೆ ಎಂದು ಪ್ರತಿಪಕ್ಷಗಳ ಮುಖಂಡರು ಹಾಗೂ ಮಹಿಳಾ ಕಾರ್ಯಕರ್ತರು ಪ್ರಧಾನಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಮಹಿಳೆಯರನ್ನು ಬಿಜೆಪಿ ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವಂತೆ ಪ್ರತಿಪಕ್ಷಗಳು ಸಲಹೆ ನೀಡಿವೆ. ಸರ್ಕಾರ ಜಾರಿ ಮಾಡಿರುವ ಮಹಿಳಾಪರ ಯೋಜನೆಗಳ ಅನುಷ್ಠಾನದ ಸ್ಥಿತಿಗತಿಯನ್ನು ಮಹಿಳಾ ಕಾರ್ಯಕರ್ತರು ಪ್ರಶ್ನಿಸಿದ್ದಾರೆ.

ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು 'ದೀದಿ ಓ ದೀದಿ' ಎಂದು ಗೇಲಿ ಮಾಡಿದ್ದ ಪ್ರಧಾನಿ ಅವರ ಮಾತುಗಳನ್ನು ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಅವರು ಟ್ವಿಟರ್‌ನಲ್ಲಿ ನೆನಪಿಸಿದ್ದಾರೆ. 'ಸ್ತ್ರೀದ್ವೇಷ ತೊಡೆದುಹಾಕಲು ಪ್ರತಿಜ್ಞೆ ಮಾಡೋಣ' ಎಂದು ಪ್ರಧಾನಿ ಕರೆ ನೀಡಿದ್ದಾರೆ. ಇದಕ್ಕೆ ನನ್ನ ಪೂರ್ಣ ಸಹಮತವಿದೆ. ಮೋದಿ ಅವರೇ, ಇದನ್ನು ನಿಮ್ಮಿಂದಲೇ ಆರಂಭಿಸೋಣವೇ?' ಎಂದು ಉಲ್ಲೇಖಿಸಿರುವ ಒಬ್ರಿಯಾನ್, ಪ್ರಧಾನಿ ಅವರು ಮಮತಾ ಅವರನ್ನು ಕುರಿತು ಮಾತನಾಡಿದ್ದ ವಿಡಿಯೊವನ್ನು ತಮ್ಮ ಟ್ವೀಟ್ ಜತೆಗೆ ಹಂಚಿಕೊಂಡಿದ್ದಾರೆ.

ಸರ್ಕಾರಕ್ಕೆ ಮಹಿಳೆಯರು ಅಥವಾ ಸಾಮಾಜಿಕವಾಗಿ ಹಿಂದುಳಿದವರ ಬಗ್ಗೆ ಸ್ಪಷ್ಟ ಹಾಗೂ ಗಂಭೀರ ಬದ್ಧತೆ ಇಲ್ಲ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಅವರು ಟೀಕಿಸಿದ್ದಾರೆ. 'ಇದು ಕೇವಲ ಮಹಿಳೆಯರ ವಿಷಯವಲ್ಲ. ಸಮಾಜದಲ್ಲಿ ಎಲ್ಲರನ್ನೂ ಗೌರವದಿಂದ ಕಾಣಬೇಕು. ಆದರೆ, ಮನುಸ್ಮೃತಿ, ಪಿತೃಪ್ರಭುತ್ವ ಹಾಗೂ ಜಾತಿ ಪದ್ಧತಿಯಲ್ಲಿ ನಂಬಿಕೆ ಇರಿಸಿರುವ ನಿಮ್ಮ ಪಕ್ಷದ ನಿಯಂತ್ರಿತ ಮನಸ್ಥಿತಿಯಿಂದ ಇದು ಸಾಧ್ಯವಾಗುತ್ತಿಲ್ಲ. ಸಂಸತ್ತಿನ ಎರಡೂ ಸದನಗಳಲ್ಲಿ ಬಹುಮತವಿದ್ದರೂ ಮಹಿಳಾ ಮೀಸಲಾತಿ ಮಸೂದೆ ಇನ್ನೂ ಅಂಗೀಕಾರವಾಗಿಲ್ಲ' ಎಂದು ರಾಜಾ ಹೇಳಿದ್ದಾರೆ.

'ಮಹಿಳೆಯರ ಬಗ್ಗೆ ಮಾತನಾಡಿದ್ದಕ್ಕೆ ಖುಷಿಯಿದೆ. ಆದರೆ ಸುರಕ್ಷೆಯೂ ಇಲ್ಲ, ಶಿಕ್ಷಣವೂ ಇಲ್ಲ. ಶಕ್ತಿಯಂತೂ ಇಲ್ಲವೇ ಇಲ್ಲ' ಎಂದು ಸಾಮಾಜಿಕ ಕಾರ್ಯಕರ್ತೆ ಅಕಂಚಾ ಶ್ರೀವಾಸ್ತವ ಹೇಳಿದ್ದಾರೆ. 'ಮಹಿಳಾ ಶಿಕ್ಷಣದ ಬಗ್ಗೆ ದೇಶದಲ್ಲಿ ಇರುವ ಅಸಡ್ಡೆಯಿಂದ, ಹೆಣ್ಣುಮಕ್ಕಳಿಗೆ ಶಾಲೆಗಳಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆಯನ್ನೂ ಕಲ್ಪಿಸಲು ಆಗಿಲ್ಲ. ನಿರ್ಭಯಾ ನಿಧಿಯಡಿ ಕೈಗೊಳ್ಳಲು ಉದ್ದೇಶಿಸಿದ್ದ ಸುರಕ್ಷತಾ ಕ್ರಮಗಳು ಎಲ್ಲಿವೆ' ಎಂದು ಅವರು ಕೇಳಿದ್ದಾರೆ.

'ಹಿಜಾಬ್: ಏಕೆ ಮೌನವಾಗಿದ್ದಿರಿ?'

ಬಿಜೆಪಿ ಆಡಳಿತ ಇರುವ ರಾಜ್ಯಗಳು ಹಿಜಾಬ್ ಧರಿಸಿದ ಹೆಣ್ಣುಮಕ್ಕಳು ಶಾಲೆ, ಕಾಲೇಜಿಗೆ ಹೋಗುವುದನ್ನು ನಿರ್ಬಂಧಿಸಿದಾಗ, ಪ್ರಧಾನಿ ಏಕೆ ಮೌನವಾಗಿದ್ದರು ಎಂದು ಆಲ್ ಇಂಡಿಯಾ ಪ್ರೊಗ್ರೆಸಿವ್ ವಿಮೆನ್ ಅಸೋಸಿಯೇಷನ್ ಸದಸ್ಯೆ ಕವಿತಾ ಕೃಷ್ಣನ್ ಪ್ರಶ್ನಿಸಿದ್ದಾರೆ.

ಮಹಿಳೆಯರ ಬಗೆಗಿನ ಮನಸ್ಥಿತಿ ಬದಲಾಗಬೇಕು ಎಂದು ಒಬ್ಬ ಜನಪ್ರತಿನಿಧಿಯಾಗಿ ಹೇಳುವುದನ್ನು ಸ್ವಾಗತಿಸುತ್ತೇನೆ. ಆದರೆ, ಈ ಸಲಹೆಗಳು ನಿರ್ದಿಷ್ಟವಾಗಿಲ್ಲದಿದ್ದರೆ ಟೊಳ್ಳು ಎನಿಸಿಕೊಳ್ಳುತ್ತವೆ. ಆನ್‌ಲೈನ್‌ನಲ್ಲಿ ಮುಸ್ಲಿಂ ಹೆಣ್ಣುಮಕ್ಕಳನ್ನು ಹರಾಜು ಹಾಕುತ್ತಿದ್ದಾಗ ಎಲ್ಲಿ ಹೋಗಿದ್ದಿರಿ? ಹಿಂದುತ್ವವಾದಿ ಯತಿ ನರಸಿಂಹಾನಂದ ಅವರು ಮುಸ್ಲಿಂ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಕ್ಕೆ ಕರೆ ಕೊಟ್ಟಾಗ ನೀವು ಏಕೆ ಮೌನವಾಗಿದ್ದಿರಿ?' ಎಂದು ಕವಿತಾ ಪ್ರಶ್ನಿಸಿದ್ದಾರೆ. ವಿವಿಧ ಮಹಿಳಾ ಯೋಜನೆಗಳಿಗೆ ಬಜೆಟ್‌ನಲ್ಲಿ ಕೇವಲ ಶೇ 1ಕ್ಕಿಂತ ಕಡಿಮೆ ಅನುದಾನ ತೆಗೆದಿರಿಸಿರುವುದು ಸರಿಯೇ ಎಂದು ಅವರು ಕೇಳಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯಕ್ಕೆ ದೂರದೃಷ್ಟಿಯೇ ಇಲ್ಲ. ಸೆಕ್ಷನ್ 498ಎ ನಂತಹ ಕಾನೂನುಗಳನ್ನು ದುರ್ಬಲಗೊಳಿಸಿದರೆ, ಮಹಿಳಾ ಸಬಲೀಕರಣ ಹೇಗೆ ಸಾಧ್ಯ?
ಯೋಗಿತಾ ಭಯಾನಾ,
'ಪೀಪಲ್ ಅಗೇನ್ಸ್ಟ್ ರೇಪ್ ಇನ್ ಇಂಡಿಯಾ' ಮುಖ್ಯಸ್ಥೆ

ಮಹಿಳೆಯರ ಕುರಿತು ಮೋದಿ ಅವರ ಮಾತುಗಳಿಗೂ, ಕ್ರಮಗಳಿಗೂ ಹೊಂದಾಣಿಕೆಯಾಗುತ್ತಿಲ್ಲ. ಮಹಾರಾಷ್ಟ್ರ ಸಂಪುಟದಲ್ಲಿ ಒಬ್ಬ ಮಹಿಳೆಯೂ ಇಲ್ಲ. ಸಂಸತ್ತಿನಲ್ಲಿ ಬಹುಮತವಿದ್ದರೂ, ಮಹಿಳಾ ಮೀಸಲಾತಿ ಜಾರಿಯಾಗಿಲ್ಲ
ಪ್ರಿಯಾಂಕಾ ಚತುರ್ವೇದಿ, ಶಿವಸೇನಾ ಸಂಸದೆ

ಕೃಷಿ ಕಾರ್ಮಿಕರ ಮಕ್ಕಳಿಗೂ 'ವಿದ್ಯಾನಿಧಿ': ಬೊಮ್ಮಾಯಿ ಘೋಷಣೆ

ಒಂದನೇ ಪುಟದಿಂದ...

75ನೇ ಸ್ವಾತಂತ್ರ್ಯ ಮಹೋತ್ಸವದ ಸಮಯದಲ್ಲಿ ಸರ್ಕಾರ ಘೋಷಿಸಿದ್ದ ಶಿಕ್ಷಣ, ಆರೋಗ್ಯ, ಕೌಶಲ, ಸ್ವಚ್ಛತೆ, ನಗರ, ಗ್ರಾಮೀಣ, ಅಂಗನವಾಡಿ, ಮಹಿಳಾ ಸ್ವಸಹಾಯ ಸಂಘಗಳು, ರೈತ ಅಭಿವೃದ್ಧಿ ಯೋಜನೆಗಳ ಸೌಲಭ್ಯಗಳನ್ನು ಒಂದು ವರ್ಷದ ಅವಧಿಯಲ್ಲಿ ಸಾಕಾರಗೊಳಿಸಲಾಗಿದೆ ಎಂದರು.

ಕರ್ನಾಟಕ ಸೌಹಾರ್ದ, ಸಾಮರಸ್ಯಕ್ಕೆ ಹೆಸರಾದ ರಾಜ್ಯ. ಸಾಮರಸ್ಯ ಕದಡುವ ಪ್ರಯತ್ನಗಳನ್ನು ನಮ್ಮ ಪೊಲೀಸ್ ವ್ಯವಸ್ಥೆ ನಿರ್ದಾಕ್ಷಿಣ್ಯವಾಗಿ ಮಟ್ಟ ಹಾಕಿದೆ. ವಿಚ್ಛಿದ್ರಕಾರಕ ಶಕ್ತಿಗಳು ತಲೆ ಎತ್ತಲು ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಸಿದರು.

ನೆಹರೂ ಸ್ಮರಿಸಿದ ಬೊಮ್ಮಾಯಿ

ರಾಜ್ಯ ಸರ್ಕಾರ ಆ.14ರಂದು ಮಾಧ್ಯಮಗಳಿಗೆ ನೀಡಿದ್ದ ಸ್ವತಂತ್ರ್ಯದ ಅಮೃತ ಮಹೋತ್ಸವ ಜಾಹೀರಾತಿನಲ್ಲಿ ಭಾರತದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂ ಅವರ ಹೆಸರು ಕೈಬಿಡಲಾಗಿತ್ತು. ಸರ್ಕಾರದ ಈ ನಡೆಗೆ ಕಾಂಗ್ರೆಸ್ ಸೇರಿದಂತೆ ಸಾರ್ವಜನಿಕ ವಲಯದಿಂದಲೂ ವಿರೋಧ ವ್ಯಕ್ತವಾಗಿತ್ತು. ಸೋಮವಾರ ಧ್ವಜಾರೋಹಣ ನಂತರ ರಾಜ್ಯವನ್ನು ಉದ್ದೇಶಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಡಿದ ಭಾಷಣದಲ್ಲಿ ನೆಹರೂ ಅವರನ್ನು ಸ್ಮರಿಸಿದರು.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಸಂಖ್ಯಾತರು ತ್ಯಾಗ, ಬಲಿದಾನ ಮಾಡಿದ್ದಾರೆ. ಮಹಾತ್ಮ ಗಾಂಧೀಜಿ, ಸುಭಾಷ್‌ಚಂದ್ರ ಬೋಸ್, ವಲ್ಲಭಭಾಯಿ ಪಟೇಲ್, ಮೌಲಾನಾ ಅಬುಲ್ ಕಲಾಂ ಆಜಾದ್, ಜವಾಹರ್‌ಲಾಲ್ ನೆಹರೂ ಮೊದಲಾದ ಮಹನೀಯರ ಹೋರಾಟ ಚರಿತ್ರಾರ್ಹವಾದುದು ಎಂದರು.

ಟಿಪ್ಪು, ಧರ್ಮ ಉಲ್ಲೇಖಿಸದ ಸಿಎಂ

ಭಾಷಣದಲ್ಲಿ ಕನ್ನಡ ನಾಡಿನ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಪ್ರಸ್ತಾಪಿಸಿದ ಮುಖ್ಯಮಂತ್ರಿ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮೊದಲಾದ ಮಹನೀಯರು ಬ್ರಿಟಿಷರ ವಿರುದ್ಧ ನಡೆಸಿದ್ದ ಹೋರಾಟ ಸ್ಮರಿಸಿದರು. ಆದರೆ, ಟಿಪ್ಪು ಹೆಸರು ಉಲ್ಲೇಖಿಸಲಿಲ್ಲ.

ವಿವಿಧ ಭಾಷೆ, ಸಂಸ್ಕೃತಿ, ಜೀವನ ಶೈಲಿ ಇದ್ದರೂ ಭಾರತೀಯತೆ ನಮ್ಮೆಲ್ಲರನ್ನೂ ಬೆಸೆಯುವ ಬಂಧ ಎಂದು ಉಲ್ಲೇಖಿಸಿದರೂ, 'ವಿವಿಧ ಧರ್ಮ' ಪದವನ್ನು ಬಳಸಲಿಲ್ಲ.

ಬಾಗಲಕೋಟೆಯಲ್ಲಿ ಹಾರದ ಧ್ವಜ • ಧ್ವಜ ವಿರೂಪ –ಮೂವರ ವಶ

ರಾಜ್ಯದ ಉದ್ದಗಲಕ್ಕೂ ಸ್ವಾತಂತ್ರ್ಯ ಸಡಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉದ್ದಗಲಕ್ಕೂ ಸೋಮವಾರ ಅಮೃತ ಸ್ವಾತಂತ್ರ್ಯೋತ್ಸವದ ಸಂಭ್ರಮ ಮೇಳೈಸಿದ್ದು, ದೇಶಭಕ್ತಿ ಗೀತೆಗಳ ಗಾಯನ, ಪಥ ಸಂಚಲನ, ಬೃಹತ್ ತ್ರಿವರ್ಣ ಧ್ವಜಗಳ ಪ್ರಸ್ತುತಿ ಗಮನಸೆಳೆಯಿತು.

ಕೋಲಾರದಲ್ಲಿ ಹೆಲಿಕಾಪ್ಟರ್ ಬಳಸಿ ಧ್ವಜಕ್ಕೆ ಪುಷ್ಪವೃಷ್ಟಿ ಮಾಡಿದರೆ, ಹೆಚ್ಚಿನ ಜಿಲ್ಲೆಗಳಲ್ಲಿ ಸಾಂಪ್ರದಾಯಿಕ ಕಲಾ ತಂಡಗಳು ಮೆರುಗು ಹೆಚ್ಚಿಸಿದವು. ವಿದ್ಯಾರ್ಥಿಗಳು ರಾಷ್ಟ್ರಧ್ವಜ ಹಿಡಿದು ಸಂಭ್ರಮಿಸಿದರು.

ಹಾರದ ರಾಷ್ಟ್ರಧ್ವಜ (ಬಾಗಲಕೋಟೆ ವರದಿ): ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ.ಪಾಟೀಲ ರಾಷ್ಟ್ರಧ್ವಜ ಹಾರಿಸಲು ಮುಂದಾದಾಗ ಧ್ವಜಕ್ಕೆ ಕಟ್ಟಿದ್ದ ಹಗ್ಗದ ಗಂಟು ಬಿಚ್ಚದೆ ಧ್ವಜ ಹಾರಲಿಲ್ಲ.

ಹಲವಾರು ಬಾರಿ ಹಗ್ಗ ಎಳೆದರೂ ಧ್ವಜ ಬಿಚ್ಚಲಿಲ್ಲ. ಕೊನೆಗೆ ರಾಷ್ಟ್ರಧ್ವಜವನ್ನು ಕೆಳಗಿಳಿಸಿ, ಧ್ವಜಕ್ಕೆ ಕಟ್ಟಿದ್ದ ಹಗ್ಗ ಸರಿಪಡಿಸಿ ಮತ್ತೆ ಧ್ವಜ ಏರಿಸಲಾಯಿತು. ಸಚಿವರು ತಮ್ಮ ಭಾಷಣದಲ್ಲಿ ನೆಹರೂ ಸೇವೆ ಸ್ಮರಿಸಿದರು.

ಪಥಸಂಚಲನ ಮೊಟಕು– ವಿದ್ಯಾರ್ಥಿಗಳ ಆಕ್ರೋಶ: (ಮಂಡ್ಯ ವರದಿ): ಸಚಿವ ಅಶೋಕ ಅವರ ಸೂಚನೆ ಮೇರೆಗೆ ಜಿಲ್ಲಾಡಳಿತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪಥಸಂಚಲನ ಮೊಟಕುಗೊಳಿಸಲು ಸೂಚಿಸಿದ್ದು, ವಿದ್ಯಾರ್ಥಿಗಳ ಆಕ್ರೋಶಕ್ಕೆ ಗುರಿಯಾಯಿತು.

ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತೆರಳಬೇಕು ಎಂದು ಸಚಿವರು ಕಾರಣ ನೀಡಿದ್ದರು. '15 ದಿನದಿಂದ ತಾಲೀಮು ನಡೆಸಿದ್ದೇವೆ. ನಮ್ಮ ಶ್ರಮಕ್ಕೆ ಬೆಲೆ ಇಲ್ಲವೇ?' ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದರು.

ಕೆರೆಯಲ್ಲಿ ರಾಷ್ಟ್ರ ಧ್ವಜಾರೋಹಣ (ಮಂಡ್ಯ ವರದಿ): ಕೆ.ಆರ್.ಪೇಟೆಯ ದೇವೀರಮ್ಮಣಿ ಕೆರೆ ಮಧ್ಯೆ ಗಂಗಾಪರಮೇಶ್ವರಿ ಮೀನುಗಾರಿಕೆ ಸಂಘದಿಂದ ಧ್ವಜಾರೋಹಣ ಮಾಡಲಾಯಿತು. ತಹಶೀಲ್ದಾರ್ ರೂಪಾ ತೆಪ್ಪದಲ್ಲಿ ತೆರಳಿ ವಂದನೆ ಸಲ್ಲಿಸಿದರು.

ತ್ರಿವರ್ಣಧ್ವಜ ವಿರೂಪ: ಮೂವರು ವಶಕ್ಕೆ **ಮಲೇಬೆನ್ನೂರು (ದಾವಣಗೆರೆ ಜಿಲ್ಲೆ):** ಪಟ್ಟಣದ ಜಿಗಳಿ ವೃತ್ತದಲ್ಲಿ ಸೋಮವಾರ ತ್ರಿವರ್ಣ ಧ್ವಜವನ್ನು ವಿರೂಪಗೊಳಿಸಿ ಬೈಕ್‌ನಲ್ಲಿ ಮೆರವಣಿಗೆ ನಡೆಸಿದ್ದು, ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದಾರೆ. ಜಾಲತಾಣಗಳಲ್ಲಿ ಈ ಚಿತ್ರ ಹರಿದಾಡುತ್ತಿದ್ದಂತೆಯೇ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿದರು.

ಕೋಲಾರ: ಬೃಹತ್ ಧ್ವಜ ಪ್ರದರ್ಶನ: (ಕೋಲಾರ ವರದಿ): ದೇಶದಲ್ಲೇ ಅತಿ ದೊಡ್ಡದು ಎನ್ನಲಾದ 205x630 ಅಡಿ ವಿಸ್ತೀರ್ಣದ ತ್ರಿವರ್ಣಧ್ವಜವನ್ನು ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರದರ್ಶಿಸಲಾಯಿತು. ಧ್ವಜಕ್ಕೆ ರಕ್ಷಣಾ ಪಡೆಯು ಹೆಲಿಕಾಪ್ಟರ್ ಮೂಲಕ ಎರಡು ಸುತ್ತು ಪುಷ್ಪವೃಷ್ಟಿಗರೆಯಿತು.

ಧ್ವಜಕ್ಕೆ 12,800 ಮೀಟರ್ ಬಟ್ಟೆ ಬಳಸಿದ್ದು, 3,300 ಕೆ.ಜಿ ತೂಕ ಇದೆ. 1.29 ಲಕ್ಷ ಚದರ ಅಡಿ ವಿಸ್ತೀರ್ಣದ ಧ್ವಜದಲ್ಲಿನ ಅಶೋಕ ಚಕ್ರವೇ 3,600 ಚದರ ಅಡಿ ಇದೆ. ಏಳು ಮಂದಿ ಟೈಲರ್‌ಗಳು, 15 ಸಹಾಯಕರು ಇಬ್ಬರು ಕಲಾವಿದರ ನೆರವಿನಿಂದ ರೂಪಿಸಿದ್ದಾರೆ.

ಕ್ಲಾಕ್ ಟವರ್‌ನಲ್ಲಿ ಧ್ವಜಾರೋಹಣ: ಇನ್ನೊಂದೆಡೆ, ಕೆಲ ದಿನಗಳ ಹಿಂದೆ ಧ್ವಜಾರೋಹಣ ಸಂಬಂಧ ವಿವಾದಕ್ಕೆ ಕಾರಣವಾಗಿದ್ದ ಇಲ್ಲಿ ಬಿಗಿ ಭದ್ರತೆಯಲ್ಲಿ ಧ್ವಜಾರೋಹಣ ಮಾಡಲಾಯಿತು.

ಎತ್ತರದ ಸ್ತಂಭದಲ್ಲಿ ಹಾರಿದ ಧ್ವಜ

ಹೊಸಪೇಟೆ (ವಿಜಯನಗರ): ದೇಶದಲ್ಲೇ ಅತಿ ಎತ್ತರದ ಧ್ವಜಸ್ತಂಭ ನಿರ್ಮಿಸಿ, ತ್ರಿವರ್ಣ ಧ್ವಜಾರೋಹಣ ಮಾಡಿದ್ದು, ಈ ಮೂಲಕ ವಿಜಯನಗರ ಜಿಲ್ಲೆ ಹೊಸ ದಾಖಲೆ ಬರೆಯಿತು.

ಪ್ರವಾಸೋದ್ಯಮ ಇಲಾಖೆಯ ₹6 ಕೋಟಿ ಅನುದಾನದಲ್ಲಿ ಮುನ್ಸಿಪಲ್ ಮೈದಾನದಲ್ಲಿ ನಿರ್ಮಿಸಿದ್ದ 405 ಅಡಿ ಎತ್ತರದ ಸ್ತಂಭದಲ್ಲಿ 120X80 ಅಳತೆ ರಾಷ್ಟ್ರಧ್ವಜ ಹಾರಿತು.

ಬೆಳಿಗ್ಗೆ 5ಕ್ಕೆ ಪ್ರಾಯೋಗಿಕವಾಗಿ ಹಾರಿಸಿದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿತು. ಚಿತ್ರದುರ್ಗದ ಜ್ಯೋತಿರಾಜ್ ಧ್ವಜಸ್ತಂಭದ ಒಳಗೆ 150 ಅಡಿ ಎತ್ತರ ಹೋಗಿ, ಗಂಟಿಕ್ಕಿಕೊಂಡಿದ್ದ ಹಗ್ಗ ಸರಿಪಡಿಸಿದ್ದು, ಬಳಿಕ ಧ್ವಜ ಹಾರಾಡಿತು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

9 ಕಿ.ಮೀ. ಉದ್ದದ ಧ್ವಜ

ಕಲಘಟಗಿ (ಧಾರವಾಡ ಜಿಲ್ಲೆ): ಇಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ9 ಕಿ.ಮೀ. ಉದ್ದದ ರಾಷ್ಟ್ರಧ್ವಜದ ಮೆರವಣಿಗೆ ಗಮನಸೆಳೆಯಿತು.

ಸಂತೋಷ ಲಾಡ್ ಪ್ರತಿಷ್ಠಾನ ಕಾರ್ಯಕ್ರಮ ಸಂಘಟಿಸಿದ್ದು, 12 ಸಾವಿರ ಮಹಿಳೆಯರು ಪೂರ್ಣಕುಂಭದೊಂದಿಗೆ ಮೆರವಣಿಗೆಗೆ ಸಾಥ್ ನೀಡಿದರು.

ಈ ಮೆರವಣಿಗೆಯು ಲಂಡನ್‌ನ 'ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್' ದಾಖಲೆ ಸೇರಿದೆ. 9 ಸಾವಿರ ಮೀಟರ್ ಉದ್ದ, 9 ಅಡಿ ಅಗಲದ ತ್ರಿವರ್ಣ ಧ್ವಜವನ್ನು 50 ಸಾವಿರ ಜನ ಹಿಡಿದು ಸಾಗಿದರು ಎಂದು ಪ್ರತಿಷ್ಠಾನಕ್ಕೆ ನೀಡಿರುವ ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ.

ವಿಶ್ವದೆಲ್ಲೆಡೆ ಅದ್ಧೂರಿ ಆಚರಣೆ

ಬೀಜಿಂಗ್ (ಪಿಟಿಐ): ವಿಶ್ವದಾದ್ಯಂತ ನೆಲೆಸಿರುವ ಭಾರತೀಯರು ಸೋಮವಾರ ದೇಶದ 75ನೇ ಸ್ವಾತಂತ್ರ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಿ ಸಂಭ್ರಮಿಸಿದರು.

ಎಲ್ಲೆಡೆ ರಾಷ್ಟ್ರದ ತ್ರಿವರ್ಣ ಧ್ವಜ ಹಾರಿಸಿ, ರಾಷ್ಟ್ರಗೀತೆ, ದೇಶಪ್ರೇಮದ ಗೀತೆಗಳನ್ನು ಹಾಡಿ ದೇಶಭಕ್ತಿ ಮೆರೆದರು.

ಚೀನಾದಲ್ಲಿ ಭಾರತೀಯ ರಾಯಭಾರಿಯಾಗಿರುವ ಪ್ರದೀಪ್ ಕುಮಾರ್ ರಾವತ್ ಅವರು ರಾಯಭಾರ ಕಚೇರಿಯಲ್ಲಿ ತ್ರಿವರ್ಣ ಧ್ವಜ ಹಾರಿಸಿದರು. ಇದೇ ವೇಳೆ ಭಾರತೀಯ ಸಂಸ್ಕೃತಿ ಪಸರಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಲಸಿಗ ಭಾರತೀಯರು ಪ್ರಸ್ತುತಪಡಿಸಿದರು. ಈ ವರ್ಣರಂಜಿತ ಕಾರ್ಯಕ್ರಮದಲ್ಲಿ ಬೀಜಿಂಗ್‌ನಲ್ಲಿ ನೆಲೆಸಿರುವ ಅಪಾರ ಸಂಖ್ಯೆಯ ಭಾರತೀಯ ಸಮುದಾಯದವರು ಪಾಲ್ಗೊಂಡಿದ್ದರು.

ಅಮೆರಿಕದ ಬೋಸ್ಟನ್‌ನಲ್ಲಿ ಇದೇ ಮೊದಲ ಬಾರಿಗೆ ನಡೆದ ಇಂಡಿಯಾ ಡೇ ಪರೇಡ್ ಹಾಗೂ 220 ಅಡಿ ಎತ್ತರದಲ್ಲಿ ಹಾರಿಸಿದ ಭಾರತದ ತ್ರಿವರ್ಣ ಧ್ವಜ ಮತ್ತು ಅಮೆರಿಕದ ಧ್ವಜಗಳು ಎಲ್ಲರ ಗಮನ ಸೆಳೆದವು.

ವಿಶ್ವ ನಾಯಕರ ಶುಭಾಶಯ

ಸತ್ಯ ಮತ್ತು ಅಹಿಂಸೆಯನ್ನು ಸಾರಿದ ಮಹಾತ್ಮ ಗಾಂಧೀಜಿ ಅವರ ಮಾರ್ಗದರ್ಶನದಲ್ಲಿ ಭಾರತವು ಸಾಗಿಬಂದ ಪ್ರಜಾಸತ್ತಾತ್ಮಕ ಪಯಣವನ್ನು ಅಮೆರಿಕ ಗೌರವಿಸುತ್ತದೆ. ಭಾರತೀಯರ ಈ ಸಂಭ್ರಮದಲ್ಲಿ ದೇಶ ಭಾಗಿಯಾಗುತ್ತದೆ
ಜೋ ಬೈಡನ್, ಅಮೆರಿಕ ಅಧ್ಯಕ್ಷ

ದಶಕಗಳ ಸ್ವತಂತ್ರ ಅಭಿವೃದ್ಧಿಯಲ್ಲಿ ಭಾರತವು ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ವಿಭಾಗಗಳಲ್ಲಿ ಜಾಗತಿಕ ಯಶಸ್ಸು ಸಾಧಿಸಿದೆ. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತ ಗೌರವ ಗಳಿಸಿದೆ
ವ್ಲಾಡಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

ದೆಹಲಿ, ಸಾಬರಮತಿ ಆಶ್ರಮಕ್ಕೆ ನಾನು ಭೇಟಿ ನೀಡಿದಾಗ ಭಾರತ–ಬ್ರಿಟನ್ ನಡುವೆ ಸಜೀವ ಸೇತುವೊಂದು ನಿರ್ಮಾಣವಾಗಿದ್ದನ್ನು ಕಂಡೆ. ಮುಂದಿನ 75 ವರ್ಷಗಳಲ್ಲಿ ಈ ಬಂಧ ಇನ್ನಷ್ಟು ಬಲವಾಗಲಿ
ಬೋರಿಸ್ ಜಾನ್ಸನ್, ಬ್ರಿಟನ್ ಪ್ರಧಾನಿ

ಭಾರತ ಸ್ವಾತಂತ್ರ್ಯೋತ್ಸವದ ಶುಭಾಶಯಗಳು. 75 ವರ್ಷಗಳ ಅಭೂತಪೂರ್ವ ಸಾಧನೆಗಳನ್ನು ಭಾರತೀಯರು ಮೆಲುಕು ಹಾಕುತ್ತಿದ್ದಾರೆ. ಭಾರತದ ಜೊತೆ ಫ್ರಾನ್ಸ್ ಯಾವತ್ತೂ ಇರುತ್ತದೆ
ಇಮ್ಯಾನುಯೆಲ್ ಮ್ಯಾಕ್ರನ್, ಫ್ರಾನ್ಸ್ ಅಧ್ಯಕ್ಷ

ಹೊಸ ಸ್ವಾತಂತ್ರ್ಯದ ಸಾಹಸದಲ್ಲಿ ವಿಶ್ವಾಸದಿಂದ ಭಾಗಿಯಾಗುವಂತೆ 1947ರಲ್ಲಿ ನೆಹರೂ ಅವರು ಕರೆ ನೀಡಿದ್ದರು. ಅವರ ಮಾತಿಗೆ ಜನರು ಈ ಮಟ್ಟಿಗೆ ಕಿವಿಗೊಡುತ್ತಾರೆ ಎಂದು ಜಗತ್ತು ಊಹಿಸಿರಲಿಲ್ಲ
ಆ್ಯಂಟನಿ ಅಲ್ಬನೀಸ್, ಆಸ್ಟ್ರೇಲಿಯಾ ಪ್ರಧಾನಿ

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಮಧ್ಯಾಹ್ನದ ನಿದ್ರೆ ರಾತ್ರಿ ತನಕ ಅಲ್ಲ!

ಮಧ್ಯಾಹ್ನದ ಕಿರುನಿದ್ರೆಗಳು ಪ್ರಯೋಜನಕಾರಿ. ಆದರೆ, ನಿದ್ರೆ ದೀರ್ಘವಾದಷ್ಟೂ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ...

ಡಾ. ಕೆ. ಎಸ್. ಪವಿತ್ರ

ತಮ್ಮ ಕಾರ್ಯಗಳ ಒತ್ತಡ, ಮೊದಲಿನಿಂದ ಬಂದ ಅಭ್ಯಾಸಗಳಿಂದ ಬಹಳ ಜನ 7-9 ಗಂಟೆಗಳ ನಿದ್ರೆಯನ್ನು ಒಂದೇ ಬಾರಿಗೆ ಮಾಡುತ್ತಾರೆ. ಇದನ್ನು ನಿದ್ರಾವಿಜ್ಞಾನ 'Monophasic sleep' - 'ಒಂದೇ ಹಂತದ ನಿದ್ರೆ' ಎಂದು ಗುರುತಿಸುತ್ತದೆ. ಆದರೆ ಇದು ಪ್ರಕೃತಿ ಸಹಜವಾದದ್ದಲ್ಲ. ಅಂದರೆ ಸತತವಾಗಿ ಕೆಲಸ ಮಾಡುವಾಗ, ವಿದ್ಯಾರ್ಥಿಗಳು ಓದುವಾಗ, ವಿಶೇಷವಾಗಿ ಮಧ್ಯಾಹ್ನ ಊಟದ ನಂತರ ಏನನ್ನಾದರೂ ಮಾಡುವಾಗ ಕಣ್ಣು ತೂಗುತ್ತದೆ. ಏಕಾಗ್ರತೆ ಮಂಕಾಗುತ್ತದೆ. ಬೇರೆಯವರು ಹೇಳಿದ್ದನ್ನು ಕೇಳುವುದು ಬಲು ಕಷ್ಟ ಎನಿಸುತ್ತದೆ. ದೊಡ್ಡ ಸಭೆಗಳಲ್ಲಿ, ತರಗತಿಗಳಲ್ಲಿ ಇತರರು ಹೀಗೆ ತೂಕಡಿಸುವುದನ್ನೂ ನಾವು ಗಮನಿಸಿಯೇ ಇರುತ್ತೇವೆ.

ಆಗ ನಮಗೆ ಅನ್ನಿಸುವುದೇನು? ಮಧ್ಯಾಹ್ನದ ಭಾರಿ ಊಟವೇ ಇದಕ್ಕೆ ಕಾರಣ! ಆದರೆ ಇದು ಮಿದುಳಿನ ಸಹಜ ಗುಣ. ಪ್ರಾಕೃತಿಕವಾಗಿ ಮಿದುಳು ರೂಪಿಸಲ್ಪಟ್ಟಿರುವುದು ಎರಡು ಹಂತಗಳ - biphasic ನಿದ್ರೆಗೆ. ಒಂದು ಮಧ್ಯಾಹ್ನದ ಕಿರುನಿದ್ರೆ, ಇನ್ನೊಂದು ರಾತ್ರಿಯ ದೀರ್ಘ ನಿದ್ರೆ. ಇಂತಹ ಮಧ್ಯಾಹ್ನದ ಕಿರುನಿದ್ರೆ ನಾವು ಕೆಲಸ ಮಾಡುವ ಕ್ಷಮತೆಯನ್ನೂ ಏಕಾಗ್ರತೆಯನ್ನೂ ಹೆಚ್ಚಿಸುತ್ತದೆ ಎಂಬುದು ಅಧ್ಯಯನಗಳಿಂದ ಕಂಡುಬಂದಿರುವ ವಿಷಯ.



ಹಾಗೆಂದಾಕ್ಷಣ, 'ಓ ಇಂದಿನಿಂದ ಮಧ್ಯಾಹ್ನ ಗಡದ್ದಾಗಿ ಒಂದು ನಿದ್ರೆ ತೆಗೆದರೆ ಆಯಿತು', ಎಂದು ಓಡಬೇಡಿ! ಮಧ್ಯಾಹ್ನದ ಕಿರುನಿದ್ರೆ ಎಷ್ಟು ಕಿರಿದಾಗಿರಬೇಕು, ಯಾವಾಗ ಅದನ್ನು ಮಾಡದಿರುವುದೇ ಲೇಸು - ಎಂಬ ಬಗ್ಗೆಯೂ ಅಧ್ಯಯನಗಳು ನಡೆದಿವೆ.

ಮಧ್ಯಾಹ್ನದ ಕಿರುನಿದ್ರೆಯ ನಿಯಮಗಳು ಹೀಗಿವೆ

- ಕಿರುನಿದ್ರೆ ನಿಜವಾಗಿ ಕಿರಿದಾಗಿಯೇ ಇರಬೇಕು. 10ರಿಂದ 20 ನಿಮಿಷಗಳ ಆಳವಾದ ನಿದ್ರೆ ನಿಮಗೆ ಸಾಕಾಗುವಂತಿದ್ದರೆ, ಮಧ್ಯಾಹ್ನದ ನಿದ್ರೆ ನೀವು ಮಾಡಬಹುದು. ಇದಕ್ಕಿಂತ ಹೆಚ್ಚಾದಷ್ಟೂ, ಅದು ಸಾಯಂಕಾಲ ನಿಮ್ಮನ್ನು ಮಂಕಾಗಿಸುವುದು.
- ಮಧ್ಯಾಹ್ನ 3 ಗಂಟೆಯ ನಂತರ ಕಿರುನಿದ್ರೆ ಬೇಡವೇ ಬೇಡ. 3 ಗಂಟೆಯ ಅನಂತರ ಮಾಡುವ ನಿದ್ರೆ ನಿಮ್ಮ ರಾತ್ರಿ ನಿದ್ರೆಯನ್ನು ಕೆಡಿಸಬಹುದು.
- ನಿಃಶಬ್ದ, ಕತ್ತಲು, ಕಡಿಮೆ ತಾಪಮಾನ - ಇವು ರಾತ್ರಿ ನಿದ್ರೆಗೆ ಅವಶ್ಯಕವಾದಂತೆ ಮಧ್ಯಾಹ್ನದ ನಿದ್ರೆಗೂ ಸೂಕ್ತ.

ಮಧ್ಯಾಹ್ನದ ಕಿರುನಿದ್ರೆಯನ್ನು ದೀರ್ಘನಿದ್ರೆಯಾಗಿಸುವವರೂ ಬಹು ಜನರಿದ್ದಾರೆ. ಮಧ್ಯಾಹ್ನ ನಿದ್ರೆ ಮಾಡದಿದ್ದರೆ ರಾತ್ರಿ ನಿದ್ರೆಯೇ ಬಾರದು ಎನ್ನುವವರೂ ಇದ್ದಾರೆ. ಮಧ್ಯಾಹ್ನದ ನಿದ್ರೆಯಿಂದ ಎಬ್ಬಿಸಿದರೆ ಭಯಂಕರ ಸಿಟ್ಟಿಗೇಳುವವರಿದ್ದಾರೆ. ಆದರೆ ಇತ್ತೀಚಿನ ಅಧ್ಯಯನಗಳು ಮಧ್ಯಾಹ್ನದ ನಿದ್ರೆ ದೀರ್ಘವಾದಷ್ಟೂ, 20 ನಿಮಿಷಗಳನ್ನು ಮೀರಿದಷ್ಟೂ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ ಎಂದು ತೋರಿಸಿವೆ. ಹೃದಯಸಂಬಂಧೀ ಕಾಯಿಲೆಗಳು, ಸಕ್ಕರೆಕಾಯಿಲೆ, ನೆನಪಿನ ಸಾಮರ್ಥ್ಯದ ಕ್ಷೀಣಿಸುವಿಕೆ - ಇವು ಮಧ್ಯಾಹ್ನ ಕಿರುನಿದ್ರೆಯನ್ನು ದೀರ್ಘವಾಗಿಸುವವರನ್ನು ಹೆಚ್ಚು ಕಾಡಬಹುದು. ಇವುಗಳಿಗೆ ಒಂದು ಪ್ರಮುಖ ಕಾರಣ ರಾತ್ರಿಯ ನಿದ್ರೆ ಇಂತಹವರಲ್ಲಿ ಆಳವಾಗಿಲ್ಲದೇ ಇರುವುದೂ ಇರಬಹುದು.

ಉದ್ಯೋಗದ ಸ್ಥಳಗಳಲ್ಲಿ ಮಧ್ಯಾಹ್ನದ ಕಿರುನಿದ್ರೆಗಳು ಬಹು ಪ್ರಯೋಜನಕಾರಿ ಎಂದು ಅಧ್ಯಯನಗಳು ಹೇಳುತ್ತವೆ. 'ನಿದ್ರಾ ಸಮಯ' - 'Napping time' ಎಂಬ 20 ನಿಮಿಷಗಳ ಅವಧಿಯನ್ನೇ ಕಡ್ಡಾಯವಾಗಿ ಇಡಬೇಕೆಂದು ಶಿಫಾರಸು ಮಾಡುತ್ತವೆ. ಹಾಗೆ ಮಾಡುವುದು ಉದ್ಯೋಗಿಗಳಲ್ಲಿ ಏಕಾಗ್ರತೆ, ಚುರುಕುತನ, ಎಚ್ಚರಗಳನ್ನು ಸುಧಾರಿಸುತ್ತವೆ ಎನ್ನಲಾಗಿದೆ. ತಪ್ಪುಗಳು, ಅಪಘಾತಗಳನ್ನು ಇವು ತಡೆಯುತ್ತವೆ, ಗಣನೀಯವಾಗಿ ಕಡಿಮೆ ಮಾಡುತ್ತವೆ.

ಜನರು ಮಾಡುವ ವೃತ್ತಿ, ವಯಸ್ಸುಗಳಿಗನುಗುಣವಾಗಿಯೂ ಕಿರುನಿದ್ರೆಯ ರೀತಿಯನ್ನು ರೂಪಿಸಿಕೊಳ್ಳುವುದು ಸಾಧ್ಯವಿದೆ.

- **ಸಿಇಒ ನ್ಯಾಪ್:** ಮುಖ್ಯಾಧಿಕಾರಿಯ ಕಿರುನಿದ್ರೆ- 20 ನಿಮಿಷಗಳ ಕಿರುನಿದ್ರೆ 'ಪವರ್ ನ್ಯಾಪ್' ಆಗಿ ಕೆಲಸ ಮಾಡಬಲ್ಲದು.
- **ಕಿರುನಿದ್ರೆಯೊಂದಿಗೆ ಕಾಫಿ:** ಯಾವುದೇ ವೃತ್ತಿಯಲ್ಲಿರುವವರಿಗೂ 20 ನಿಮಿಷಗಳ ಕಿರುನಿದ್ರೆ, ನಂತರ ಬಿಸಿಯಾದ ಕಾಫಿ ಏಕಾಗ್ರತೆ ಹೆಚ್ಚಿಸುತ್ತದೆ. ಆದರೆ ಇದು ಪರಿಣಾಮಕಾರಿಯಾಗಲು, ರಾತ್ರಿಯ ದೀರ್ಘನಿದ್ರೆ ಅತ್ಯಗತ್ಯ ಎಂದು ಮರೆಯಬೇಡಿ.
- **ಹೊಸ ಅಮ್ಮನ ನಿದ್ರೆ ಅಥವಾ ಬಾಣಂತಿ ನಿದ್ರೆ:** 'ಮಗು ಮಲಗಿದಾಗ ಬಾಣಂತಿ ಮಲಗಬೇಕು' ಎನ್ನುವುದು ಇಲ್ಲಿನ ನಿಯಮ. ಮಗು ಮಲಗಿದಾಗ ತಾಯಿ ಉಳಿದ ಕೆಲಸ ಮಾಡಿಕೊಳ್ಳುವುದು, ಈ ಹೊತ್ತಿನಲ್ಲಿ ನಿದ್ರೆ ಬರುತ್ತಿಲ್ಲ ಎಂದು ಟಿ.ವಿ./ಮೊಬೈಲ್ ನೋಡುವುದು ಸಲ್ಲದು. ಈ ಸಮಯದಲ್ಲಿ ನಿದ್ರೆ ಸಿಕ್ಕಾಗ ಪಡೆಯದಿದ್ದರೆ ತಾಯಿಯಾಗಿ ಮಗುವನ್ನು ನೋಡಿಕೊಳ್ಳಲು ಸಹನೆಯಾಗಲಿ, ಏಕಾಗ್ರತೆ-ಶಕ್ತಿಗಳಾಗಲಿ ಸುಲಭದ ಮಾತಲ್ಲ.
- **ಆಟದ ಸ್ಪರ್ಧೆಯ ಮುನ್ನ ನಿದ್ರೆ:** ಆಟಗಾರರಲ್ಲಿ ಕ್ರೀಡಾಂಗಣಕ್ಕೆ ಹೋಗುವ ಮುನ್ನ 20 ನಿಮಿಷಗಳ ನಿದ್ರೆ ಅವರ ಪ್ರದರ್ಶನದಲ್ಲಿ ಸುಧಾರಣೆ ತರಲು ಸಾಧ್ಯವಿದೆ.
- **'ಡಿಸ್ಕೋ ನಿದ್ರೆ':** ರಾತ್ರಿ ತಡವಾಗುವ ತನಕ ಎದ್ದಿರಬೇಕು, ಸಂಜೆ ಕಾರ್ಯಕ್ರಮ ನೀಡಬೇಕು. ನೀವು 'ಅಲರ್ಟ್' ಆಗಿರಬೇಕೆಂದರೆ ಮಧ್ಯಾಹ್ನ ಒಂದು ಗಂಟೆ ಮಲಗುವ, ನಿದ್ರೆ ಮಾಡುವ ಪ್ರಯತ್ನ ಸೂಕ್ತ. ಆದರೆ ಇದು ದೈನಂದಿನ ಅಭ್ಯಾಸವಾಗದಿರುವಂತೆ ಎಚ್ಚರ ಅಗತ್ಯ. ರಾತ್ರಿ ತಡವಾಗಿ ಮಲಗಿದ ಮೇಲೂ, ಬೆಳಿಗ್ಗೆ ಎಂದಿನ ಸಮಯಕ್ಕೇ ಏಳುವುದು ಕಡ್ಡಾಯ. ಆಗ ಇಂತಹ 'ಡಿಸ್ಕೋ ನಿದ್ರೆ' ನಿಮ್ಮ ಸಹಜ ನಿದ್ರಾಚಕ್ರವನ್ನು ಮುರಿಯಲಾರದು.
- **ಶಿಫ್ಟ್ ಕೆಲಸಗಾರರಲ್ಲಿ ನಿದ್ರೆಯ ಸಮಸ್ಯೆ** ಆಗಾಗ್ಗೆ ಮಾಡುವ ಕಿರುನಿದ್ರೆಗಳು ಬಲು ಉಪಯುಕ್ತ. ಶಿಫ್ಟ್‌ಗೆ ಮುನ್ನ ನಿದ್ರೆಯ ಒಂದು ಅವಧಿ, ಹೆಚ್ಚಿನ ಕಂಪನಿಗಳಲ್ಲಿ ಈಗಾಗಲೇ ಪಾಲಿಸುತ್ತಿರುವ 'ನ್ಯಾಪ್ ರೂಂಗಳು', ಕೆಲಸದ ಮಧ್ಯೆ ವಿಶ್ರಾಂತಿಯ ಅವಕಾಶ ಕೆಲಸದ ಗುಣಮಟ್ಟ ಹೆಚ್ಚಿಸಬಲ್ಲುದು.
- **ಟೀನ್ ನಿದ್ರೆ:** ಹದಿಹರೆಯದ ಮಕ್ಕಳಲ್ಲಿಯೂ ಮಧ್ಯಾಹ್ನದ ಕಿರು ನಿದ್ರೆ ಭಾವನಾತ್ಮಕ ಸಮಸ್ಯೆಗಳನ್ನು ತಡೆಯಲು ಸಹಾಯಕ. ಆದರೆ ಇದು ದೀರ್ಘ ನಿದ್ರೆಯಾಗದಂತೆ, ನಿದ್ರೆಯ ಚಕ್ರಕ್ಕೆ ಅಡ್ಡಿ ತಾರದಂತೆ ರೂಢಿ ಮಾಡಬೇಕಾದ್ದು. ಮಧ್ಯಾಹ್ನದ ಕಿರುನಿದ್ರೆಯ ರೂಢಿ ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನ ಎಂಬುದು ಗಮನಿಸಬೇಕಾದ ವಿಷಯ, 'ಸಾರ್ವತ್ರಿಕ' ಎನ್ನುವಂತಹ ನಿಯಮ ಇಲ್ಲಿಲ್ಲ. ಆದರೆ ಮಧ್ಯಾಹ್ನದ ನಿದ್ರೆಯನ್ನು 20 ನಿಮಿಷಗಳಿಗೆ ಸೀಮಿತವಾಗಿಸಿ, ಅದರಿಂದ ಪುನಃಶ್ಚೇತನ ಪಡೆದು, ನಂತರ ರಾತ್ರಿಯ ನಿದ್ರೆಯನ್ನೂ ಆರಾಮವಾಗಿ ಮಾಡಿ, ಸಮಯಕ್ಕೆ ಸರಿಯಾಗಿ ಏಳುವವರು ನೀವಾದರೆ, ನೀವು ಅದೃಷ್ಟವಂತರು!

ಗೋಲ್ ಕೀಪರ್ ಅಂಪೈರ್‌ಗಳ ಮೇಲೆ ಕಣ್ಣಿಟ್ಟಿರಿ!

ಡಾ. ಕುಶ್ವಂತ್ ಕೋಳಿಬೈಲು

ನಮ್ಮ ದೇಹದ ಚರ್ಮ, ಶ್ವಾಸಕೋಶ ಅಥವಾ ಜಠರಗಳು ಅನೇಕ ಬಾರಿ ಅವುಗಳ ಸಂಪರ್ಕಕ್ಕೆ ಬರುವ ಎಲ್ಲಾ ಪದಾರ್ಥಗಳನ್ನು ಒಪ್ಪಿಕೊಳ್ಳುವುದಿಲ್ಲ. ದೇಹದ ಈ ಅಂಗಾಂಗಗಳು ಅಗತ್ಯಕ್ಕಿಂತ ಹೆಚ್ಚಿನ ಪ್ರತಿರೋಧವನ್ನು ಒಡ್ಡಿದಾಗ ದೇಹದ ರೋಗನಿರೋಧಕ ಶಕ್ತಿಯು ಈ ಅಲರ್ಜಿ ಉಂಟುಮಾಡುವ ಪದಾರ್ಥಗಳ ವಿರುದ್ಧ ತಿರುಗಿ ಬೀಳುತ್ತದೆ. ಕೆಲವೊಮ್ಮೆ ಈ ಕ್ರಿಯೆಗಳಿಂದ ದೇಹಕ್ಕೆ ಹೆಚ್ಚು ನಷ್ಟವಾಗುವ ಸಂಭವವಿದೆ. ಇಂತಹ ಸಂಕೀರ್ಣ ಕಾಯಿಲೆಗಳ ಗುಣಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿ, ಶೀಘ್ರವಾಗಿ ಪತ್ತೆ ಹಚ್ಚಿ, ಸಮರ್ಪಕವಾದ ಚಿಕಿತ್ಸೆಯನ್ನು ನೀಡಿದ್ದಲ್ಲಿ ರೋಗಿಗಳ ನರಳಾಟವನ್ನು ತಪ್ಪಿಸಬಹುದು. ಇಂತಹ ಕಾಯಿಲೆಗಳು ಮಕ್ಕಳನ್ನು ಕಾಡುತ್ತಿದ್ದರೆ ಅವನ್ನು ಪತ್ತೆ ಹಚ್ಚಿ, ಚಿಕಿತ್ಸೆ ನೀಡುವುದು ತುಂಬ ಸವಾಲಿನದ್ದು. ಏಕೆಂದರೆ ಇವು ಮಕ್ಕಳ ದೇಹದಲ್ಲಿರುವ ಬಗ್ಗೆ ಡಂಗುರ ಹೊಡೆಯುವುದಿಲ್ಲ, ಮೌನವಾಗಿ ಆರೋಗ್ಯವನ್ನು ನಾಶ ಮಾಡುತ್ತಿರುತ್ತವೆ.

ಮಕ್ಕಳ ಜೀವನಕ್ರಮಗಳನ್ನು ಹತ್ತಿರದಿಂದ ಗಮನಿಸಿದರೆ ಮಾತ್ರ ನಿಮಗೆ ಅವರ ಅನಾರೋಗ್ಯದ ಬಗ್ಗೆ ಸುಳಿವು ಸಿಕ್ಕುವುದು. ಹೆಚ್ಚಿನ ಮಕ್ಕಳಿಗೆ ಶಾಲಾ ದಿನಗಳಲ್ಲಿ ವೈರಲ್ ಶೀತಜ್ವರ ಬರುವುದು ಸಾಮಾನ್ಯ ಮತ್ತು ಇಂತಹ ಮಕ್ಕಳು ಶೀಘ್ರದಲ್ಲಿ ಗುಣಮುಖರಾಗುತ್ತಾರೆ ಕೂಡ. ಆದರೆ ಕೆಲವು ಮಕ್ಕಳ ಶ್ವಾಸಕೋಶದಲ್ಲಿ ಈ ಶೀತಜ್ವರದ ವೈರಸ್‌ಗಳು ಅಲರ್ಜಿಯನ್ನು ಉಂಟು ಮಾಡಿ, ಅವರ ಶ್ವಾಸಕೋಶದ ನಾಳಗಳನ್ನು ಸಂಕುಚಿತಗೊಳಿಸಿ ಉಸಿರನ್ನು ಹೊರಹಾಕುವ ಪ್ರಕ್ರಿಯೆಯನ್ನು



ತ್ರಾಸದಾಯಕವಾಗುವಂತೆ ಮಾಡುತ್ತದೆ. ಇಂತಹ ಮಕ್ಕಳು ಉಸಿರು ಬಿಡುವಾಗ ಶ್ವಾಸಕೋಶದೊಳಗೆ ಸಾವಿರ ಕೊಳಲುಗಳ ಸಂಗೀತ ಕಛೇರಿ ನಡೆಯುವ ರೀತಿಯಲ್ಲಿ 'ವೀಝಿಂಗ್' ಧ್ವನಿ ಉತ್ಪಾದನೆಯಾಗುತ್ತದೆ.

ದೇಹದಲ್ಲಿರುವ ಹಾರ್ಮೋನುಗಳ ಪ್ರಮಾಣಗಳಲ್ಲಿ ಹಗಲು-ರಾತ್ರಿಗಳಲ್ಲಿ ಬದಲಾವಣೆಯಿರುವುದರಿಂದ ಈ ವೀಝಿಂಗ್ ಸಮಸ್ಯೆ ರಾತ್ರಿಯ ಸಮಯದಲ್ಲಿ ಉಲ್ಬಣಗೊಂಡು ಮಗು ರಾತ್ರಿಯಿಡೀ ಉಸಿರನ್ನು ಹೊರಹಾಕಲು ಪ್ರಯಾಸ ಪಡುತ್ತದೆ. ಒಣಕೆಮ್ಮು ಮಗುವಿನ ರಾತ್ರಿಯ ನಿದ್ದೆಯನ್ನು ನುಂಗಿಬಿಡುತ್ತದೆ. ರಾತ್ರಿ ನಿದ್ದೆಯಿಲ್ಲದ ಇಂತಹ ಮಕ್ಕಳಲ್ಲಿ ಹಗಲಿನ ವೇಳೆ ತರಗತಿಯಲ್ಲಿ ಪಾಠ ಕೇಳಲು ಏಕಾಗ್ರತೆಯ ಕೊರತೆಯಾಗುತ್ತದೆ. ನಿಃಶಕ್ತಿಯೂ ಕಾಡುವುದರಿಂದ ಮಕ್ಕಳ ವಿದ್ಯಾಭ್ಯಾಸ ಮತ್ತು ಸರ್ವಾಂಗೀಣ ಅಭಿವೃದ್ಧಿಗೂ ತೊಡಕಾಗುತ್ತದೆ. ಮಕ್ಕಳ ಶ್ವಾಸಕೋಶದೊಳಗೆ ಅಲರ್ಜಿಯನ್ನು ಹುಟ್ಟುಹಾಕಿ ಅವರಿಗೆ ಅಸ್ತಮಾ ಮಾದರಿಯ ವೀಝಿಂಗ್ ಉಂಟುಮಾಡುವಲ್ಲಿ ವೈರಸ್‌ಗಳ ಜೊತೆಗೆ ಮನೆಯೊಳಗಿನ ದೂಳು, ಫಂಗಸ್ ಮತ್ತು ಸಾಕುಪ್ರಾಣಿಗಳ ಚರ್ಮದಲ್ಲಿರುವ ಸೂಕ್ಷ್ಮ ಕಣಗಳು ಸೇರಿದಂತೆ ಶ್ವಾಸಕೋಶದ ಒಳಗೆ ಸೇರಬಲ್ಲ ಅನೇಕ ಸೂಕ್ಷ್ಮಪದಾರ್ಥಗಳು ಈ ಸಮಸ್ಯೆಯ ಮುಖ್ಯಪಾತ್ರಧಾರಿಗಳಾಗಿರುತ್ತವೆ. ಕೆಲವು ಮಕ್ಕಳ ಶ್ವಾಸಕೋಶದ ಸಮಸ್ಯೆ ಹಗಲಿನ ವೇಳೆಯಲ್ಲಿ ಕಡಿಮೆ ತ್ರಾಸದಾಯಕವೆನಿಸಬಹುದು. ಆದರೆ ಇಂತಹವರು ಆಟೋಟದಲ್ಲಿ ಇತರ ಮಕ್ಕಳಂತೆ ಉತ್ಸಾಹದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ಕ್ರೀಡೆಯಲ್ಲಿ ತಮ್ಮ ಸ್ನೇಹಿತರ ಜೊತೆಗೆ ಈ ಪುಟಾಣಿಗಳು ಭಾಗವಹಿಸಿದರೂ ಅವರು ಹೆಚ್ಚು ದೈಹಿಕ ಶ್ರಮದ ಅವಶ್ಯಕತೆಯಿಲ್ಲದ ಚಟುವಟಿಕೆಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುತ್ತಾರೆ. ಅಂತಹ ಹೆಚ್ಚಿನ ಮಕ್ಕಳು ಆಟದ ಮೈದಾನದೊಳಗೆ ಫುಟ್ಬಾಲಿನಲ್ಲಿ ಗೋಲ್ ಕೀಪರ್ ಮತ್ತು ಕ್ರಿಕೆಟಿನಲ್ಲಿ ಅಂಪೈರ್ ಅಥವಾ ವಿಕೆಟ್ ಕೀಪರ್ ಪಾತ್ರ ನಿರ್ವಹಿಸುವಲ್ಲಿಗೆ ಸೀಮಿತವಾಗಿರುತ್ತಾರೆ!

ಶ್ವಾಸಕೋಶದ ಅಲರ್ಜಿಯಿಂದ ಬಳಲುವ ಮಕ್ಕಳಲ್ಲಿ ಕಂಡುಬರುವ ದೊಡ್ಡ ಸಮಸ್ಯೆ ಎಂದರೆ ರಾತ್ರಿ ವೇಳೆ ಹೆಚ್ಚಾಗಿ ಕಂಡುಬರುವ ಕೆಮ್ಮು. ಬೇರೆ ಬೇರೆ ವೈದ್ಯರು ನೀಡಿರುವ ಹಲವು ಬಗೆಯ ಬಣ್ಣಬಣ್ಣದ ಕಾಫ್ ಸಿರಪ್ಪುಗಳ ಬಾಟಲಿಗಳಿಂದ ಈ ಮಕ್ಕಳ ಮನೆ ತುಂಬಿದ್ದರೂ, ಅವರ ರಾತ್ರಿಯ ಕೆಮ್ಮು ಕಡಿಮೆಯಾಗುವುದಿಲ್ಲ; ಮಕ್ಕಳು ನಿದ್ದೆಯಿಲ್ಲದೆ ರಾತ್ರಿ ನರಳಾಡುವುದನ್ನೂ ನಿಲ್ಲಿಸಿರುವುದಿಲ್ಲ. ಇಂತಹ ಮಕ್ಕಳ ಕಾಯಿಲೆಯ ಇತಿಹಾಸವನ್ನು ಸೂಕ್ಷ್ಮವಾಗಿ ಕೆದಕಿದಾಗ ಮತ್ತು ಶ್ವಾಸಕೋಶದ ಎಕ್ಸರೆಯಲ್ಲಿರುವ ಸುಳಿವುಗಳನ್ನು ಗಮನಿಸಿದಲ್ಲಿ ಇವರಿಗಿರುವ ಬಾಲ್ಯದ ಕಾಯಿಲೆಯಾದ 'ಹೈಪರ್ ರೆಸ್ಪಾನ್ಸಿವ್ ಏರ್ವೇ ಡಿಸೀಸ್' ಮತ್ತು 'ವೈರಸ್ ಇನ್‌ಡ್ಯೂಸ್ಡ್ ವೀಝ್' (Hyper Responsive Airway Disease / Virus Induced Wheeze) ಬಗ್ಗೆ ಸಾಕ್ಷಿಗಳು ಸಿಗುತ್ತವೆ. ಈ ಸಮಸ್ಯೆ ಹೆಚ್ಚು ಉಲ್ಬಣಗೊಂಡಲ್ಲಿ ಅದು ಮುಂದೆ ಬಾಲ್ಯದ ಅಸ್ತಮಾಕ್ಕೆ ತಿರುಗಬಹುದು. ಶ್ವಾಸಕೋಶದ ಕಾಯಿಲೆಯನ್ನು ದೃಢೀಕರಿಸಲು ರೋಗಿಗಳನ್ನು ಪಲ್ಮನರಿ ಫಂಕ್ಷನ್ ಟೆಸ್ಟಿಗೆ (Pulmonary function test) ಒಳಪಡಿಸಬೇಕಾಗುತ್ತದೆ. ಆಗ ಶ್ವಾಸಕೋಶದಲ್ಲಿರುವ ಎಲ್ಲ ಸಮಸ್ಯೆಗಳನ್ನು ಮತ್ತು ಆ ಸಮಸ್ಯೆಗಳ ತೀವ್ರತೆಯನ್ನು ಪತ್ತೆ ಹಚ್ಚಬಹುದು. ಶ್ವಾಸಕೋಶದ ಕಾಯಿಲೆಗಳು ಚಿಕಿತ್ಸೆಗೆ ಸ್ಪಂದಿಸುತ್ತಿರುವ ಬಗ್ಗೆಯನ್ನೂ ಆ ಪರೀಕ್ಷೆಗಳಿಂದ ತಿಳಿಯಬಹುದು. ಆದರೆ ಅಂತಹ ಸಂಕೀರ್ಣವಾದ ಶ್ವಾಸಕೋಶದ ಪರೀಕ್ಷೆಗೆ ಒಳಪಡುವಾಗ ರೋಗಿಗಳ ಸಹಕಾರ ತುಂಬ ಬೇಕಾಗುತ್ತದೆ. ಹೀಗಾಗಿ ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಪುಟಾಣಿಗಳನ್ನು ಇಂತಹ ಪರೀಕ್ಷೆಗಳಿಗೆ ಒಳಪಡಿಸಿ ರೋಗ ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ. ಹೀಗಾಗಿ ಮಕ್ಕಳ ರಾತ್ರಿಯ ಒಣಕೆಮ್ಮು ಮತ್ತು ವೈರಲ್ ಜ್ವರ, ವೀಝಿಂಗ್ ಸಮಸ್ಯೆಗಳನ್ನು 'ಕಾಫ್ ಸಿರಪ್'ಗಳಿಂದ ಬಗ್ಗಿಸಲೂ ಆಗುವುದಿಲ್ಲ; ಕಾಯಿಲೆಯ ಮೂಲವನ್ನು ಹುಡುಕುವುದರಲ್ಲೂ ವೈದ್ಯರು ವಿಫಲರಾಗುತ್ತಾರೆ. ಹೀಗಾಗಿ ಸೂಕ್ತ ಚಿಕಿತ್ಸೆಯಿಲ್ಲದೆ ಅಂತಹ ಮಕ್ಕಳ ಬಾಲ್ಯವು ಯಾತನಾಮಯವಾಗಿರುತ್ತದೆ. ನಿದ್ದೆಯ ಸಮಸ್ಯೆಗಳ ಜೊತೆ ಜೊತೆಗೆ ವಿದ್ಯಾಭ್ಯಾಸ ಮತ್ತು ಕ್ರೀಡೆಯಲ್ಲಿಯೂ ಹಿಂದುಳಿದವರೆಂಬ ಹಣೆಪಟ್ಟಿಯನ್ನು ಪ್ರಾಥಮಿಕ ಶಾಲೆಯ ಹಂತದಿಂದಲೇ ಅಂಟಿಸಿಕೊಂಡು ಇಂತಹ ಮಕ್ಕಳು ಆತ್ಮವಿಶ್ವಾಸದ ಕೊರತೆಯಿಂದ ನರಳುತ್ತಾರೆ.

ಸದಾ ಕಾಲ ಫುಟ್ಬಾಲಿನಲ್ಲಿ ಗೋಲ್ ಕೀಪರ್ ಮತ್ತು ಕ್ರಿಕೆಟಿನಲ್ಲಿ ಅಂಪೈರ್ ಆಗಲು ಮಾತ್ರವೇ ಬಯಸುತ್ತಿರುವ ಮಕ್ಕಳ ಆರೋಗ್ಯದ ಇತಿಹಾಸವನ್ನು ಜಾಲಾಡಿ ಅವರ ಒಣಕೆಮ್ಮಿನ ಜಾಡು ಹಿಡಿದು ಹೋದಾಗ ಮಾತ್ರ ಆರೋಗ್ಯ ಸಮಸ್ಯೆಗಳ ಮೂಲವನ್ನು ಪತ್ತೆ ಹಚ್ಚಬಹುದು. ಶ್ವಾಸಕೋಶದ ಇಂತಹ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸಿ, ಮಕ್ಕಳ ಬಾಲ್ಯವನ್ನು ಆಹ್ಲಾದಕರವಾಗುವಂತೆ ಮಾಡಬಲ್ಲ ಚಿಕಿತ್ಸಾ ಕ್ರಮಗಳಿವೆ. ಈ ಸಮಸ್ಯೆಗಳು ಮಕ್ಕಳ ತಜ್ಞರು ಕಡಿಮೆಯಿರುವ ಗ್ರಾಮೀಣ ಭಾಗದ ಮಕ್ಕಳಲ್ಲಿಯೂ ಕಂಡು ಬರುತ್ತವೆ. ಹೀಗಾಗಿ ಹೆತ್ತವರು ಮತ್ತು ಶಿಕ್ಷಕರು ಮಕ್ಕಳ ಆರೋಗ್ಯದ ವಿಷಯದಲ್ಲಿ ಹೆಚ್ಚಿನ ಮುತುವರ್ಜಿಯನ್ನು ತೋರಿಸಬೇಕು. ಆಗ ಮಾತ್ರ ಮಕ್ಕಳ ಸಮಸ್ಯೆಗಳಿಗೆ ಸರಿಯಾದ ಪರಿಹಾರವನ್ನು ನೀಡಲು ಸಾಧ್ಯವಾಗುತ್ತದೆ.

ಅಬ್ಬಾ! ಕೆಮ್ಮು, ಶೀತ, ಜ್ವರ...

ಡಾ. ಕಿರಣ್ ವಿ. ಎಸ್.

ಬೇಸಿಗೆ, ಮಳೆ, ಚಳಿಗಾಲಗಳಿಗೆ ತಂತಮ್ಮ ವೈಶಿಷ್ಟ್ಯಗಳು ಇರುತ್ತವೆಯಷ್ಟೆ. ಹೀಗೆಯೇ ಆಯಾ ಕಾಲಗಳ ಜೊತೆಗೆ ಸಾಂಕ್ರಾಮಿಕ ಕಾಯಿಲೆಗಳಿಗೂ ಬಲವಾದ ನಂಟಿವೆ. ಬೇಸಿಗೆಯಲ್ಲಿ ನಿರ್ಜಲೀಕರಣ, ಜ್ವರ, ಅತಿಸಾರಗಳು; ಚಳಿಗಾಲದಲ್ಲಿ ಶ್ವಾಸ ಸಂಬಂಧಿ ಕಾಯಿಲೆಗಳು; ಮಳೆಗಾಲದಲ್ಲಿ ಜ್ವರ, ಗಂಟಲು ಕೆರೆತ ಸಾಮಾನ್ಯ. ಕೋವಿಡ್-19ರ ಅನುಭವದ ನಂತರವಂತೂ ಯಾವುದೇ ಜ್ವರ, ಮೈ-ಕೈ ನೋವು, ನೆಗಡಿ, ಕೆಮ್ಮುಗಳು 'ಕೋವಿಡ್ ಮರುಕಳಿಸಿತೇ' ಎನ್ನುವ ಅನುಮಾನವನ್ನು ಪ್ರತಿಯೊಬ್ಬರಲ್ಲೂ ಹುಟ್ಟು ಹಾಕುತ್ತಿವೆ. ವೈರಸ್ ಶೀತಜ್ವರ ಅಥವಾ ಇನ್‌ಫ್ಲುಎನ್‌ಜಾ (ಸಾಮಾನ್ಯ ಭಾಷೆಯಲ್ಲಿ ಫ್ಲೂ) ಎನ್ನುವ ಸಾಮಾನ್ಯ ಕಾಯಿಲೆಗೆ ಹಲವಾರು ವೈರಸ್ ಮೂಲಗಳಿವೆ. ಇದು ಅಯಾ ಋತುವಿನಲ್ಲಿ ಸರಿಸುಮಾರು ಎಲ್ಲರನ್ನೂ ಕಾಡುತ್ತದೆ. ನೂರು ಡಿಗ್ರಿ ಫ್ಯಾರನ್‌ಹೀಟ್ ಆಸುಪಾಸಿನ ಜ್ವರ, ಆಲಸಿತನ, ಮೈ-ಕೈ ನೋವು, ತಲೆಶೂಲೆ, ರುಚಿಯಲ್ಲಿ ವ್ಯತ್ಯಾಸ, ನೆಗಡಿ, ಮೂಗುಕಟ್ಟುವಿಕೆ, ಒಣಕೆಮ್ಮು, ಗಂಟಲು ಒಣಗುವಿಕೆ, ಘ್ರಾಣ ಸಾಮರ್ಥ್ಯ ಕುಂದುವಿಕೆ, ತಲೆಸುತ್ತು ಮೊದಲಾದ ಲಕ್ಷಣಗಳ ಈ ಕಾಯಿಲೆ ವರ್ಷದಲ್ಲಿ ಒಮ್ಮೆಯಾದರೂ ಪ್ರತಿಯೊಬ್ಬರನ್ನೂ ತಾಕಿ ಹೋಗುತ್ತದೆ.

ಶೀತಜ್ವರ ಬಹುಮಟ್ಟಿಗೆ ತಂತಾನೇ ಗುಣವಾಗುವ ಆರೋಗ್ಯ ಸಮಸ್ಯೆ. ಆದರೆ, ಕೆಲವರಲ್ಲಿ ಇದು ತೀವ್ರ ಕಾಯಿಲೆಗೆ ಕಾರಣವಾಗಬಹುದು. ಹೃದಯ ವೈಫಲ್ಯದ ರೋಗಿಗಳಿಗೆ, ಅಸ್ತಮಾಪೀಡಿತರಿಗೆ, ಮಧುಮೇಹಿಗಳಿಗೆ, ಶ್ವಾಸಕೋಶದ ಸಮಸ್ಯೆಗಳಿಂದ ಬಳಲುವವರಿಗೆ, ಕ್ಯಾನ್ಸರ್ ಚಿಕಿತ್ಸೆ ಪಡೆಯುವವರಿಗೆ, ಯಕೃತ್ತಿನ ಅಥವಾ ಮೂತ್ರಪಿಂಡಗಳ ದೀರ್ಘಕಾಲಿಕ ಸಮಸ್ಯೆ ಉಳ್ಳವರಿಗೆ ಹೀಗೆ ಅನೇಕರಲ್ಲಿ ಶೀತಜ್ವರ ಮಾರಕವಾಗಬಹುದು. ಪ್ರಸ್ತುತ ಇಂತಹ ಶೀತಜ್ವರದ ಲಕ್ಷಣಗಳು ಕೋವಿಡ್-19 ಸೋಂಕಿನ ಲಕ್ಷಣಗಳನ್ನು ಬಹಳ ಮಟ್ಟಿಗೆ ಹೋಲುವುದರಿಂದ ರೋಗಿಗಳ ಆತಂಕ ನೂರ್ಮಡಿಸುತ್ತದೆ.

ಶೀತಜ್ವರ ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಂಕ್ರಾಮಿಕ ಸೋಂಕು. ಫ್ಲೂ ಸೋಂಕಿತ ವ್ಯಕ್ತಿಯು ಸೀನಿದಾಗ ಅಥವಾ ಕೆಮ್ಮಿದಾಗ ಹೊರಬರುವ ಸಣ್ಣ ಹನಿಗಳು ಸುತ್ತಮುತ್ತಲಿನ ಆರು ಅಡಿ ಪರಿಧಿಯಲ್ಲಿ ಕೆಲಕಾಲ ಗಾಳಿಯಲ್ಲಿ ತೇಲುತ್ತವೆ. ಇಂತಹ ಹನಿಗಳಲ್ಲಿ ಶೀತಜ್ವರದ ವೈರಸ್ ಮನೆಮಾಡಿರುತ್ತದೆ. ಸೋಂಕಿತ ವ್ಯಕ್ತಿಯ ಸುತ್ತಮುತ್ತಲಿರುವ ನಿರೋಗಿ ವ್ಯಕ್ತಿಯ ಶ್ವಾಸನಾಳಗಳನ್ನು ಉಸಿರಿನ ಮೂಲಕ ಪ್ರವೇಶಿಸುವ ಈ ಹನಿಗಳಲ್ಲಿನ ಶೀತಜ್ವರದ ವೈರಸ್ ಅವರಲ್ಲೂ ಸೋಂಕಿಗೆ ಕಾರಣವಾಗುತ್ತದೆ. ಅಲ್ಲದೆ, ಸೋಂಕಿತ ವ್ಯಕ್ತಿಯ ಶ್ವಾಸದ್ರವಗಳನ್ನು ಹೊಂದಿದ ಬಟ್ಟೆಗಳು, ವಸ್ತುಗಳನ್ನು ಮುಟ್ಟಿದ ನಿರೋಗಿಗಳು ಹಾಗೆಯೇ ತಮ್ಮ ಮೂಗು, ಬಾಯಿಗಳನ್ನು ಸ್ಪರ್ಶಿಸಿದರೆ, ಅದರ ಮೂಲಕವೂ ಶೀತಜ್ವರ ವೈರಸ್ ಹರಡಬಹುದು. ನಗರ ಪ್ರದೇಶಗಳ ಸಣ್ಣ ಜಾಗಗಳಲ್ಲಿ ಬಹಳ ಮಂದಿ ಸೇರುವ ಸಂದರ್ಭಗಳಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಬಹುಬೇಗನೆ ಸೋಂಕು ಹರಡುವುದು ಸಾಮಾನ್ಯ.

ಶೀತಜ್ವರದ ಬಳಲಿಕೆ ತ್ರಾಸವೆನಿಸಿದರೂ, ದೀರ್ಘಕಾಲಿಕ ಕಾಯಿಲೆಗಳಿಲ್ಲದ ಆರೋಗ್ಯವಂತರಲ್ಲಿ ಇದರ ಚಿಕಿತ್ಸೆ ಸರಳ. ಮುಖ್ಯವಾಗಿ ವಿಶ್ರಾಂತಿ, ಸಾಕಷ್ಟು ದ್ರವಾಹಾರ, ಕುಡಿಯಲು ಬೆಚ್ಚಗಿನ ನೀರಿನ ಬಳಕೆ, ಜ್ವರನಿವಾರಕ ಗುಳಿಗೆಗಳ ಮಿತವಾದ ಸೇವನೆ, ಉಪ್ಪುನೀರಿನಲ್ಲಿ ಗಂಟಲನ್ನು ಮುಕ್ಕಳಿಸುವುದು, ಒಳ್ಳೆಯ ನಿದ್ರೆ ಮೊದಲಾದುವುಗಳು ಸಾಕಾಗುತ್ತವೆ. ಶೀತಜ್ವರ ಸೋಂಕಿತರು ಸಾಧ್ಯವಾದಷ್ಟೂ ಇತರರಿಂದ ಅಂತರ ಕಾಯ್ದುಕೊಳ್ಳಬೇಕು; ಕೆಮ್ಮುವಾಗ ಅಥವಾ ಸೀನುವಾಗ ತಮ್ಮ ಮೂಗು-ಬಾಯಿಗಳನ್ನು ಬಟ್ಟೆ ಅಥವಾ ಟಿಶ್ಯೂ ಕಾಗದದಿಂದ ಮುಚ್ಚಿಕೊಳ್ಳಬೇಕು; ಅನುಮಾನವಿದ್ದರೆ ಕೋವಿಡ್-19 ಪರೀಕ್ಷೆ ಮಾಡಿಸಿಕೊಳ್ಳಬೇಕು; ಶೀತಜ್ವರದ ಲಕ್ಷಣಗಳು ಸಮಯಾನುಸಾರ ಕಡಿಮೆಯಾಗದಿದ್ದರೆ ವೈದ್ಯರನ್ನು ಕಂಡು ಚಿಕಿತ್ಸೆ ಪಡೆಯಬೇಕು.

ಶೀತಜ್ವರದ ಚಿಕಿತ್ಸೆಗೆ ನಿರ್ದಿಷ್ಟ ವೈರಸ್-ನಿರೋಧಕ ಔಷಧಗಳು ಇವೆಯಾದರೂ, ಅವು ಎಲ್ಲರಿಗೂ ಬೇಕಾಗುವುದಿಲ್ಲ. ಶೀತಜ್ವರ ನಿರ್ವಹಣೆಯಲ್ಲಿ ಆ್ಯಂಟಿಬಯಾಟಿಕ್ ಔಷಧಗಳ ಪಾತ್ರವಿಲ್ಲ. ಒಂದು ವೇಳೆ ವೈರಸ್ ಕಾಯಿಲೆಯ ಫಲಿತವಾಗಿ ರೋಗನಿರೋಧಕ ಸಾಮರ್ಥ್ಯ ಕುಂದಿ, ಬ್ಯಾಕ್ಟೀರಿಯಾ ಸೋಂಕು ಉಂಟಾದವರಲ್ಲಿ ಮಾತ್ರ ಆ್ಯಂಟಿಬಯಾಟಿಕ್ ಔಷಧ ಕೆಲಸ ಮಾಡಬಲ್ಲದು. ಇದನ್ನು ವೈದ್ಯರು ನಿರ್ಧರಿಸಬೇಕೆ ಹೊರತು, ಶೀತಜ್ವರದ ರೋಗಿಗಳು ತಾವಾಗಿಯೇ ಅನಗತ್ಯ ಚಿಕಿತ್ಸೆ ಮಾಡಿಕೊಳ್ಳಬಾರದು. ಆ್ಯಂಟಿಬಯಾಟಿಕ್ ಔಷಧಗಳ ಅಡ್ಡಪರಿಣಾಮಗಳು ಹಲವಾರು. ಜೊತೆಗೆ, ಅಗತ್ಯವಿಲ್ಲದೆಡೆ ಆ್ಯಂಟಿಬಯಾಟಿಕ್ ಔಷಧಗಳನ್ನು ಬಳಸಿದರೆ ಅವುಗಳಿಗೆ ಪ್ರತಿರೋಧ ಬೆಳೆಯುತ್ತದೆ. ಮುಂದೊಂದು ದಿನ ಅಗತ್ಯ ಬಿದ್ದಾಗ ಅಂತಹ ಆ್ಯಂಟಿಬಯಾಟಿಕ್ ಔಷಧ ಬಳಸಿದರೂ ಅದರ ಪರಿಣಾಮ ಆಗುವುದಿಲ್ಲ. ಈ ಬಗ್ಗೆ ಕಟ್ಟೆಚ್ಚರ ಅಗತ್ಯ.

ಶೀತಜ್ವರದ ಚಿಕಿತ್ಸೆಗೆ ನಿರ್ದಿಷ್ಟ ವೈರಸ್-ನಿರೋಧಕ ಔಷಧಗಳು ಇವೆಯಾದರೂ, ಅವು ಎಲ್ಲರಿಗೂ ಬೇಕಾಗುವುದಿಲ್ಲ. ಈಗ ಎಲ್ಲೆಲ್ಲೂ ಶೀತಜ್ವರ ಕಾಣಿಸಿಕೊಳ್ಳುತ್ತಿದೆ. ಆದರೆ, ಇದು ಬಹುಮಟ್ಟಿಗೆ ತಂತಾನೇ ಗುಣವಾಗುವ ಆರೋಗ್ಯಸಮಸ್ಯೆ

ಬಹುತೇಕ ಮಂದಿಯ ಆಂತರಿಕ ರೋಗನಿರೋಧಕ ಶಕ್ತಿಯೇ ಶೀತಜ್ವರವನ್ನು ತಹಬಂದಿಯಲ್ಲಿ ಇಡುತ್ತದೆ. ಆದರೆ ಆಂತರಿಕ ರೋಗನಿರೋಧಕ ಶಕ್ತಿ ಕುಂಠಿತವಾದವರಲ್ಲಿ ಶೀತಜ್ವರಕ್ಕೆ ವೈರಸ್-ನಿರೋಧಕ ಔಷಧಗಳ ಚಿಕಿತ್ಸೆ ಅಗತ್ಯ. ಇಂತಹ ಕೆಲವರನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾದ ತುರ್ತು ಬರಬಹುದು. ಅದರಲ್ಲೂ ಶ್ವಾಸಕೋಶ ಸಂಬಂಧಿ ಕಾಯಿಲೆಗಳು ಇರುವವರಲ್ಲಿ ಶೀತಜ್ವರ ಉಂಟಾದರೆ, ಅವರನ್ನು ತೀವ್ರನಿಗಾ ಘಟಕಗಳಲ್ಲಿ ಚಿಕಿತ್ಸೆಗೆ ಒಳಪಡಿಸಬೇಕಾಗುತ್ತದೆ. ಇಂತಹ ಗುಂಪಿನವರು ಶೀತಜ್ವರದ ಬಗ್ಗೆ ಬಹಳ ಜಾಗೃತರಾಗಿರಬೇಕು. ಆರಂಭಿಕ ಲಕ್ಷಣಗಳು ಕಂಡುಬಂದಾಗಲೇ ತಮ್ಮ ವೈದ್ಯರಿಗೆ ತೋರಿಸಿ ಚಿಕಿತ್ಸೆ ಆರಂಭಿಸಬೇಕು.

ಹೆಚ್ಚಿನ ಜನರಲ್ಲಿ ಪ್ರಾಣಾಪಾಯವಾಗದಿದ್ದರೂ, ತನ್ನ ವ್ಯಾಪ್ತಿಯ ಕಾರಣದಿಂದ ಶೀತಜ್ವರ ನಾಗರಿಕ ಸಮಾಜದ ಕೆಲಸಗಳನ್ನು ಏರುಪೇರು ಮಾಡಬಲ್ಲದು. ಶೀತಜ್ವರದ ಕಾರಣದಿಂದ ಕಚೇರಿಗಳಲ್ಲಿ ರಜೆ ಹಾಕುವವರ ಸಂಖ್ಯೆ ಏರುತ್ತದೆ. ಇದರಿಂದ ಕೆಲಸದ ಸರಪಣಿ ಅಲ್ಲಲ್ಲಿ ತುಂಡರಿಸಿದಂತಾಗಿ, ಮುಖ್ಯವಾದ ಕೆಲಸಗಳ ನಿರ್ವಹಣೆ ತಡವಾಗುತ್ತದೆ. ಶಾಲೆಯ ಮಕ್ಕಳು ತರಗತಿಯಲ್ಲಿ ಒಟ್ಟಾಗಿ ಕೂರುವುದರಿಂದ ಅವರಲ್ಲಿ ಶೀತಜ್ವರದ ಪರಸ್ಪರ ವಿನಿಮಯ ಹೆಚ್ಚು. ಮಕ್ಕಳ ಗೈರುಹಾಜರಿ ಪಠ್ಯಗಳ ಹೊಂದಾಣಿಕೆಯನ್ನು ಸಡಿಲವಾಗಿಸುತ್ತದೆ. ಒಟ್ಟಾರೆ, ನಾಗರಿಕ ಸಮಾಜದ ಸಂಕೀರ್ಣ ಕಾರ್ಯವೈಖರಿಗೆ ಶೀತಜ್ವರ ಪೆಟ್ಟನ್ನು ನೀಡುತ್ತದೆ.

ಕೋವಿಡ್-19 ಜಾಗತಿಕ ಸೋಂಕು ನಮಗೆ ಹಲವಾರು ಒಳ್ಳೆಯ ಆರೋಗ್ಯ ಪದ್ಧತಿಗಳ ಪರಿಚಯ ಮಾಡಿಸಿದೆ. ಜನಸಂಪರ್ಕಕ್ಕೆ ಬರುವ ಸಂದರ್ಭಗಳಲ್ಲಿ ಮಾಸ್ಕ್ ಧರಿಸುವುದು, ವ್ಯಕ್ತಿಗಳ ನಡುವೆ ಅಂತರ ಕಾಯ್ದುಕೊಳ್ಳುವುದು, ನೀರು ಮತ್ತು ಸಾಬೂನನ್ನು ಬಳಸಿ ಕೈಗಳನ್ನು ಕನಿಷ್ಠ 20 ಸೆಕೆಂಡುಗಳ ಕಾಲ ಆಗಾಗ್ಗೆ ತೊಳೆದುಕೊಳ್ಳುವುದು, ಅಕಾರಣವಾಗಿ ಮೂಗು-ಬಾಯಿಗಳನ್ನು ತಾಕದಿರುವುದು, ರೋಗಲಕ್ಷಣ ಉಳ್ಳವರ ತೀರಾ ಸಮೀಪ ಸುಳಿಯದಿರುವುದು, ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡುವುದು, ಕೆಮ್ಮು-ನೆಗಡಿ-ಜ್ವರಗಳನ್ನು ಅಲಕ್ಷಿಸದೆ ಚಿಕಿತ್ಸೆ ಪಡೆಯುವುದು, ಲಸಿಕೆಗಳ ಮಹತ್ವ ಮೊದಲಾದ ಆರೋಗ್ಯ ರಕ್ಷಣೆಯ ವಿಧಾನಗಳ ಪ್ರಾಮುಖ್ಯ ನಮಗೆ ಅರಿವಾಗಿದೆ. ಶೀತಜ್ವರದ ನಿಗ್ರಹದಲ್ಲೂ ಈ ಪದ್ಧತಿಗಳು ಉತ್ತಮ ಪಾತ್ರ ವಹಿಸುತ್ತವೆ. ಕೋವಿಡ್-19 ಸೋಂಕಿನ ತಡೆಯುವಿಕೆಯಲ್ಲಿ ನಾವು ನಿರ್ವಹಿಸಿದ ಎಲ್ಲ ಎಚ್ಚರಗಳನ್ನು ಶೀತಜ್ವರದ ಸಂಬಂಧದಲ್ಲೂ ಕಡ್ಡಾಯವಾಗಿ ಪಾಲಿಸುವುದು ಒಳಿತು.

ಲಸಿಕೆ

ಶೀತಜ್ವರವನ್ನು ತಡೆಯಲು ಸಕ್ಷಮವಾದ ಲಸಿಕೆ ಇದೆ. ಅನೇಕ ದೇಶಗಳಲ್ಲಿ ಈ ಲಸಿಕೆಯನ್ನು ಪ್ರತಿವರ್ಷ ಕಡ್ಡಾಯವಾಗಿ ಪಡೆಯಬೇಕು. ನಮ್ಮ ದೇಶದಲ್ಲಿ ಈ ಲಸಿಕೆಯನ್ನು 'ಶೀತಜ್ವರದಿಂದ ಯಾರಿಗೆ ಹೆಚ್ಚು ಅಪಾಯ ಇದೆಯೋ, ಅವರು ಪಡೆಯಬಹುದು' ಎಂದು ಶಿಫಾರಸು ಮಾಡಲಾಗಿದೆ. ವೈದ್ಯಕೀಯ ವೃತ್ತಿಯಲ್ಲಿರುವವರು ಮತ್ತು ಶೀತಜ್ವರದಿಂದ ಪ್ರಾಣಾಪಾಯಕ್ಕೆ ಒಳಗಾಗಬಲ್ಲವರು ಇಂತಹ ವಾರ್ಷಿಕ ಲಸಿಕೆಯನ್ನು ಪಡೆಯುವುದು ಸೂಕ್ತ.

ಶೀತಜ್ವರದ ಲಕ್ಷಣಗಳು ಇತರ ಕಾಯಿಲೆಗಳ ಲಕ್ಷಣವನ್ನು ಬಹುವಾಗಿ ಹೋಲುವುದರಿಂದ ಎಲ್ಲ ಕಾಯಿಲೆಗಳನ್ನೂ ಶೀತಜ್ವರವೆಂದು ನಿರ್ಲಕ್ಷಿಸಲು ಸಾಧ್ಯವಿಲ್ಲ. ಒಂದು ವಾರದ ಸರಳ ಚಿಕಿತ್ಸೆಯಿಂದ ಶೀತಜ್ವರದ ರೋಗಲಕ್ಷಣಗಳು ಗುಣವಾಗದವರಲ್ಲಿ ಇತರ ಕಾಯಿಲೆಗಳ ಸಾಧ್ಯತೆ ಹೆಚ್ಚು. ಜೊತೆಗೆ, ರೋಗನಿರೋಧಕ ಶಕ್ತಿ ಕುಂಠಿತರಾದವರಷ್ಟೇ ಅಲ್ಲದೆ, ಒಂದು ವರ್ಷದೊಳಗಿನ ಮಕ್ಕಳು, 65 ವರ್ಷ ದಾಟಿದವರು, ಗರ್ಭಿಣಿಯರು, ಬಾಣಂತಿಯರು, ನಿಯಮಿತ ಆಸ್ಪಿರಿನ್ ಗುಳಿಗೆ ಸೇವಿಸುವವರು, ಶೀತಜ್ವರ ರೋಗಿಗಳ ಆರೈಕೆ ಮಾಡುವವರು, ಮುಂತಾದವರು ತಮಗೆ ಶೀತಜ್ವರದ ರೋಗಲಕ್ಷಣಗಳು ಕಂಡಾಗ ತಡಮಾಡದೆ ವೈದ್ಯರನ್ನು ಕಾಣಬೇಕು.

❦ ಸುಭಾಷಿತ ❦
ಹೃದಯ ವಿಶಾಲವಾಗಿ ಇದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮುತ್ತದೆ.
–ಸ್ವಾಮಿ ವಿವೇಕಾನಂದ

ನೆಹರೂ ಚಿತ್ರ ಕೈಬಿಟ್ಟಿರುವುದು ಸಣ್ಣತನ ಮೊದಲ ಪ್ರಧಾನಿ ಇಲ್ಲದ ಚರಿತ್ರೆ ಅಪೂರ್ಣ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕುರಿತು ರಾಜ್ಯ ಸರ್ಕಾರ ನೀಡಿರುವ ಜಾಹೀರಾತಿನಲ್ಲಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರ-ವಿವರ ಇಲ್ಲದಿರುವುದನ್ನು ನೋಡಿಕೊಂಡಿರುವುದು ಸಣ್ಣತನದ ಹಾಗೂ ನಾಚಿಕೆಗೇಡಿನ ಕೆಲಸ. ರಾಷ್ಟ್ರದ ಹಾಗೂ ರಾಜ್ಯದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಈ ಜಾಹೀರಾತಿನಲ್ಲಿ ಪ್ರಕಟಿಸಿ, ಅವರನ್ನು ಸ್ಮರಿಸಲಾಗಿದೆ. ರಾಷ್ಟ್ರ ಮಟ್ಟದ ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಮಹಾತ್ಮ ಗಾಂಧಿ, ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ಹಲವರ ಚಿತ್ರಗಳಿವೆ. ಆದರೆ, ಆ ಚಿತ್ರಗಳ ಸಾಲಿನಲ್ಲಿ ನೆಹರೂ ಅವರ ಚಿತ್ರ ಇಲ್ಲ. ಜಾಹೀರಾತಿನ ಮೇಲ್ಭಾಗದ ಒಂದು ಬದಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಗುಂಪಿನಲ್ಲಿರುವ ನೆಹರೂ ಅವರ ರೇಖಾಚಿತ್ರವು ಅವರನ್ನು ಕೆಳಗಿನ ಭಾವಚಿತ್ರಗಳ ಸಾಲಿನಿಂದ ಹೊರಗಿಟ್ಟಿರುವುದನ್ನು ಖಂಡಿತವಾಗಿಯೂ ಸರಿದೂಗಿಸುವುದಿಲ್ಲ. ಏಕೆಂದರೆ, ಆ ಪ್ರಮಾದವು ಇಷ್ಟಕ್ಕೆ ಎದ್ದು ಕಾಣುವಂತೆ ಮಾಡುತ್ತದೆ. ನೆಹರೂ ಅವರ ಭಾವಚಿತ್ರವನ್ನಷ್ಟೇ ಕೈಬಿಟ್ಟಿಲ್ಲ, ದಕ್ಷಿಣ ಭಾರತದ ನೇತಾರರಲ್ಲಿ ಯಾರೊಬ್ಬರ ಭಾವಚಿತ್ರವೂ ಅದರಲ್ಲಿ ಸ್ಥಾನ ಪಡೆದಿಲ್ಲ. ಹಾಗೆಯೇ, ಇನ್ನೊಂದು ಬದಿಯಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿ ಅವರ ಚಿತ್ರಕ್ಕೆ ಸ್ಥಾನ ಕಲ್ಪಿಸಿರುವುದನ್ನು ಬಿಟ್ಟರೆ, ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಮಹಿಳಾ ಸಮುದಾಯವನ್ನು ಕಡೆಗಣಿಸಲಾಗಿದೆ. ರಾಷ್ಟ್ರಮಟ್ಟದ ನಾಯಕರನ್ನು ಹೊಂದಿರುವ ವಂಶಕ, ದಕ್ಷಿಣ ಭಾರತಕ್ಕೆ ಸೇರಿದ ಸ್ವಾತಂತ್ರ್ಯ ಸೇನಾನಿಯಾಗಲೀ, ಹೋರಾಟಗಾರ್ತಿಯಾಗಲೀ ಯಾರೊಬ್ಬರೂ ಇರಲಿಲ್ಲವೇ? ಜೈಲಿನಿಂದ ಬಿಡುಗಡೆ ಹೊಂದುವ ಸಲುವಾಗಿ ಬ್ರಿಟಿಷ್ ಸರ್ಕಾರದ ಕ್ಷಮೆ ಯಾಚಿಸಿದ್ದ ವಿನಾಯಕ ದಾಮೋದರ ಸಾವರ್ಕರ್, 1924ರ ನಂತರದ ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ಪಾತ್ರವನ್ನೂ ವಹಿಸಿಲ್ಲ. ಅವರ ಚಿತ್ರವೂ ಸ್ಥಾನ ಪಡೆದಿರುವಾಗ ರಾಜಾಜಿ ಹಾಗೂ ಸರೋಜಿನಿ ನಾಯ್ಡು ಅವರಂಥವರಿಗೆ ಈ ಜಾಹೀರಾತಿನಲ್ಲಿ ಸ್ಥಾನ ಇಲ್ಲದಿರುವುದನ್ನು ಏನೆಂದು ವ್ಯಾಖ್ಯಾನಿಸುವುದು?

ನೆಹರೂ ಅವರ ಚಿತ್ರವನ್ನು ಹೊರಗಿಟ್ಟ ಮಾತ್ರಕ್ಕೆ ಇತಿಹಾಸದಿಂದ ಅವರನ್ನು ಮರೆಯಾಗಿಸಲು ಸಾಧ್ಯವಿಲ್ಲ

ನೆಹರೂ ಅವರಿಲ್ಲದ ಭಾರತೀಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ಮತ್ತು ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಮುಂಚೂಣಿ ಸ್ವಾತಂತ್ರ್ಯ ಹೋರಾಟಗಾರರಾಗಿ, ರಾಷ್ಟ್ರ ನಿರ್ಮಾತೃವಾಗಿ ನೆಹರೂ ಅವರಿಗೆ ಗಾಂಧೀಜಿ ಅವರ ನಂತರದ ಸ್ಥಾನವಿದೆ. ಅಂತಹ ಪ್ರಮುಖ ನಾಯಕನ ಚಿತ್ರವನ್ನೇ ಹೋರಾಟಗಾರರ ಚಿತ್ರಪಟಗಳ ಸಾಲಿನಿಂದ ಹೊರಗಿಟ್ಟಿರುವುದು ನಗೆಪಾಟಲಿಗೆ ಈಡು ಮಾಡುವಂಥದ್ದು. ಇದು, ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಅವಮಾನವೂ ಆಗಿದ್ದು, ಕಾನೂನು ಕ್ರಮವನ್ನು ಸಹ ಎದುರಿಸಬಹುದಾದಂತಹ ಕೃತ್ಯ. ನೆಹರೂ ಅವರು ಪ್ರತಿಪಾದಿಸಿದ ಮೌಲ್ಯಗಳು ಮತ್ತು ಆದರ್ಶಗಳು ತನ್ನ ಸಿದ್ಧಾಂತಕ್ಕೆ ತದ್ವಿರುದ್ಧವಾಗಿರುವುದು ಮತ್ತು ನೆಹರೂ ಅವರ ವಂಶದವರೇ ಈಗ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುತ್ತಿರುವುದು ಸಂಘ ಪರಿವಾರದ ಪಾಲಿಗೆ ಅವರು ಅಪಥ್ಯವಾಗಲು, ಅಮಾನ್ಯವಾಗಲು ಕಾರಣ. ಹಾಗೆ ನೋಡಿದರೆ, ಸಾವರ್ಕರ್ ಅವರ ಮೌಲ್ಯಗಳು ಮತ್ತು ಸಿದ್ಧಾಂತಗಳು ಸ್ವಲ್ಪಮಟ್ಟಿಗೆ ಸಂಘ ಪರಿವಾರಕ್ಕೆ ಹೊಂದಿಕೆ ಆಗುತ್ತವೆ. ಉಳಿದಂತೆ ಚಿತ್ರಗಳಲ್ಲಿ ಇರುವ ಇತರ ಹೋರಾಟಗಾರರ ಮೌಲ್ಯಗಳು ಮತ್ತು ಆದರ್ಶಗಳು ಸಂಘ ಪರಿವಾರದ ಸಿದ್ಧಾಂತಕ್ಕೆ ಸರಿ ಹೊಂದುವುದಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರು ತನ್ನ ಬಳಿ ಇಲ್ಲದಿರುವುದರಿಂದ ಅವರನ್ನು ಅನಿವಾರ್ಯವಾಗಿ ಒಪ್ಪಿಕೊಂಡಿದೆ.

ನೆಹರೂ ಅವರು ಕೊನೆಯುಸಿರು ಎಳೆದು ದಶಕಗಳೇ ಸಂದಿದ್ದರೂ ದೇಶದ ಇಂದಿನ ಪ್ರತಿಯೊಂದು ಸಮಸ್ಯೆಗೂ ಅವರೇ ಕಾರಣ ಎಂದು ತೆಗಳುವ ಬಿಜೆಪಿಯ ನೀತಿಯ ಭಾಗವಾಗಿಯೇ ಸರ್ಕಾರದ ಜಾಹೀರಾತಿನಲ್ಲಿ ನೆಹರೂ ಅವರ ಚಿತ್ರ ಇಲ್ಲದಂತೆ ಆಗಿದೆ. 1947ರಲ್ಲಿ ದೇಶ ವಿಭಜನೆಗೂ ಅವರೇ ಕಾರಣ ಎಂದು ಬಿಂಬಿಸುವಂತಹ ವಿಡಿಯೊವನ್ನೂ ಆ ಪಕ್ಷ ಬಿಡುಗಡೆ ಮಾಡಿದೆ. ಎರಡು ರಾಷ್ಟ್ರಗಳ ಪರಿಕಲ್ಪನೆಯನ್ನು ಮುನ್ನೆಲೆಗೆ ತಂದಿದ್ದು ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳಲ್ಲಿದ್ದ ತೀವ್ರವಾದಿ ಗುಂಪುಗಳು. ಬೇರೆ ಆಯ್ಕೆಯೇ ಇಲ್ಲದಿದ್ದ ಕಾರಣಕ್ಕಾಗಿ ಸರ್ದಾರ್ ಪಟೇಲ್ ಅವರೂ ಸೇರಿದಂತೆ ಕಾಂಗ್ರೆಸ್ ನಾಯಕರು ಅದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು. ದೇಶ ವಿಭಜನೆಯ ಹೊಣೆಯನ್ನು ಯಾವುದೇ ನಾಯಕನ ಮೇಲೆ ಹೊರಿಸಬೇಕಿಲ್ಲ. ಅಲ್ಲದೆ, ನೆಹರೂ ಅವರೇ ಇದಕ್ಕೆಲ್ಲ ಕಾರಣ ಎಂದು ನಿರೂಪಿಸುವ ಯಾವ ಸಾಕ್ಷ್ಯಾಧಾರವೂ ಬಿಜೆಪಿಯ ಬಳಿ ಇಲ್ಲ. ಇತಿಹಾಸವನ್ನು ಮೂಗಿನ ನೇರಕ್ಕೆ ಮರುಸೃಷ್ಟಿಸಲು ಹೊರಟವರ ಸಿದ್ಧಾಂತದ ಭಾಗವಾಗಿ ನೆಹರೂ ಅವರನ್ನು ನಿಂದಿಸುವ ಈ ಪರಿಪಾಟ ತೀವ್ರಗೊಂಡಿದೆ. ಸರ್ಕಾರಿ ಜಾಹೀರಾತಿನಿಂದ ನೆಹರೂ ಅವರ ಚಿತ್ರವನ್ನು ಕೈಬಿಟ್ಟಿರುವುದು ಸಹ ಅದರ ಮುಂದುವರಿದ ಭಾಗವಾಗಿದೆ. ಇಂತಹ ರಾಜಕೀಯ ಪ್ರಚಾರಕ್ಕಾಗಿ ತೆರಿಗೆದಾರರ ಹಣ ಪೋಲು ಮಾಡುವ ಯಾವ ಅಧಿಕಾರವೂ ರಾಜ್ಯ ಸರ್ಕಾರಕ್ಕಿಲ್ಲ. ಸ್ವಾತಂತ್ರ್ಯ ಹೋರಾಟಕ್ಕೆ ಮತ್ತು ದೇಶವನ್ನು ಕಟ್ಟುವುದಕ್ಕೆ ಮೊದಲ ಹಾಗೂ ಮಹಾನ್ ಪ್ರಧಾನಿಯ ಕೊಡುಗೆ ಏನೆಂಬುದು ಇಡೀ ದೇಶಕ್ಕೆ ಗೊತ್ತಿದೆ. ನೆಹರೂ ಅವರ ಚಿತ್ರವನ್ನು ಹೊರಗಿಟ್ಟ ಮಾತ್ರಕ್ಕೆ ಇತಿಹಾಸದಿಂದ ಅವರನ್ನು ಮರೆಯಾಗಿಸಲು ಸಾಧ್ಯವಿಲ್ಲ. ಬದಲಾಗಿ, ಈ ಕೃತ್ಯವು ಚರಿತ್ರೆಯಲ್ಲಿ ಅವರ ಪಾತ್ರ ಏನೆಂಬುದನ್ನು ಜನ ಇನ್ನಷ್ಟು ಸ್ಪಷ್ಟವಾಗಿ ನೆನಪಿಸಿಕೊಳ್ಳುವಂತೆ ಮಾಡುತ್ತದೆ.

ಇತಿಹಾಸ ತಿರುಚಬಹುದು; ಸತ್ಯವನ್ನು ಸಮಾಧಿಯೊಳಗೆ ಮುಚ್ಚಿಡಲಾಗದು

ಚರಿತ್ರೆ ಬದಲಿಸಿದ ಬೊಮ್ಮಾಯಿ

ಗತಿಬಿಂಬ

ವೈ.ಗ.ಜಗದೀಶ್

ಚರಿತ್ರೆ ಸೃಷ್ಟಿಸಬಹುದಾದ ಅಪೂರ್ವ ಅವಕಾಶಗಳನ್ನು ಕಳೆದುಕೊಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇತಿಹಾಸ ತಿರುಚುವ ದಿಕ್ಕಿನತ್ತ ಅಡಿಯಿಟ್ಟರು. ಸರ್ಕಾರ ಒಂದು ವರ್ಷ ಪೂರ್ಣಗೊಳಿಸಿದ ಹೊತ್ತಿನೊಳಗೆ ಹಿಂತಿರುಗಿ ನೋಡಿದರೆ ವಿವಾದಗಳೇ ವಿಜೃಂಭಿಸಿವೆ. ‘ದ್ವೇಷಚರಿತೆ’ಯನ್ನು ಮುನ್ನೆಲೆಗೆ ತಂದು, ಕೋಮು ವಿಷವನ್ನು ಹೆಪ್ಪುಗಟ್ಟಿಸಿ ಮತಫಸಲು ತೆಗೆಯುವತ್ತಲೇ ಬಿಜೆಪಿ ತಲೆಯಾಳುಗಳು ಅವಿಶ್ರಾಂತವಾಗಿ ತೊಡಗಿಕೊಂಡರು. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ನೋಟದಲ್ಲೇ ಉಳಿದವು.

ಎಸ್.ಆರ್.ಬೊಮ್ಮಾಯಿ ಸೇರಿದಂತೆ ಏಳು ಜನ ಮುಖ್ಯಮಂತ್ರಿಗಳ ಜತೆ ಹತ್ತಿರದ ನಂಟು ಹೊಂದಿದ್ದ ಬಸವರಾಜ ಅವರಿಗೆ ರಾಜಕೀಯ–ಆಡಳಿತಾತ್ಮಕ ಅನುಭವ ಬಹಳಷ್ಟಿದ್ದು, ನಾಡಿನ ದಿಕ್ಕನ್ನೇ ಬದಲಿಸುವ ಅವಕಾಶ ಇದೆ ಎಂದು ‘ಚರಿತ್ರೆ ಸೃಷ್ಟಿಸೋ ಅವಕಾಶ’ ಶೀರ್ಷಿಕೆಯಡಿ ವರ್ಷದ ಹಿಂದೆ ಬರೆದಿದ್ದೆ. ಅವರ ಕೈಗೆ ಅಧಿಕಾರ ಕೊಟ್ಟ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಇಂತಹದೊಂದು ನಿರೀಕ್ಷೆ ಇದ್ದೀತು.

ತಮ್ಮದೇ ಚರಿತ್ರೆ ಸೃಷ್ಟಿಸುವ ದಾರಿ ಬಿಟ್ಟು ಇತಿಹಾಸ ಬದಲಿಸುವ ಕಾಯಕಕ್ಕೆ ಕೈ ಹಾಕಿದರು; ತಮ್ಮ ಜತೆಗಾರರು ಕೈಹಾಕುವುದನ್ನು ನೋಡುತ್ತಾ ಮೌನಕ್ಕೆ ಶರಣಾದರು. ಸರ್ಕಾರದ ಅಧಿಕೃತ ಆದೇಶವೇ ಇಲ್ಲದೆ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಪುಟ ಸಹೋದ್ಯೋಗಿ ಬಿ.ಸಿ.ನಾಗೇಶ್ ಅವರು ಮುಂದಾದಾಗ ಅದಕ್ಕೆ ಆಕ್ಷೇಪ ಎತ್ತಲಿಲ್ಲ. ಭಗತ್ ಸಿಂಗ್ ಪಾಠ ಕೈಬಿಟ್ಟಿದ್ದು, ಜನರಲ್ಲಿ ಸ್ವಾಭಿಮಾನದ ಕೆಚ್ಚು ತುಂಬಿದ ನಾರಾಯಣಗುರು, ದಾಸಶ್ರೇಷ್ಠರಾದ ಕನಕದಾಸರ ಪಾಠಗಳನ್ನು ತಲಾ ಒಂದು ಪ್ಯಾರಾಕ್ಕೆ ಇಳಿಸಿದ ಪ್ರಮಾದ ನಡೆಯಿತು. ಅಂತಹ ಕೆಲಸ ಮಾಡಿಯೇ ಇಲ್ಲ ಎಂದು ಸಚಿವರು ಹೇಳುತ್ತಾ ಬಂದರು; ಈ ಸುಳ್ಳಿಗೆ ಬೊಮ್ಮಾಯಿ ತಲೆಯಾಡಿಸುತ್ತಲೇ ಬಂದರು. ಇತಿಹಾಸವನ್ನೇ ಜನರಿಂದ ಮರೆಮಾಚುವ ಕೆಲಸವೂ ನಡೆಯಿತು.

‘ಆಧುನಿಕ ಭಾರತದ ಶಿಲ್ಪಿ’ ಎಂದು ಅಟಲ್ ಬಿಹಾರಿ ವಾಜಪೇಯಿ ಅವರಿಂದ ಮೆಚ್ಚುಗೆ ಪಡೆದಿದ್ದ ಜವಾಹರಲಾಲ್ ನೆಹರೂ ಹಾಗೂ ನವಕರ್ನಾಟಕದ ಮುಂಗೋಳಿ ಎಂದು ಕರೆಸಿಕೊಂಡ ಟಿಪ್ಪು ಸುಲ್ತಾನ್ ಅವರ ಚಿತ್ರವನ್ನು ಸ್ವಾತಂತ್ರ್ಯೋತ್ಸವದ ಜಾಹೀರಾತಿನಲ್ಲಿ ಕೈಬಿಟ್ಟರು. ಈ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಅನಾಮಧೇಯ ಹೋರಾಟಗಾರರಿಗೆ ನಮನ ಸಲ್ಲಿಸಿದ್ದೇವೆ. ದೇಶದ ಉದ್ದಗಲ ರಸ್ತೆಗಳು, ಕಟ್ಟಡಗಳಿಗೆ ನೆಹರೂ ಹೆಸರು ಇಟ್ಟಿದ್ದರಲ್ಲವೇ? ಈಗ ಇವರಿಗೆ ಅಭದ್ರತೆ ಏಕೆ ಕಾಡುತ್ತಿದೆ’ ಎಂದಿದ್ದಾರೆ. ‘ದೇಶ ವಿಭಜನೆಗೆ ನೆಹರೂ ಕಾರಣರಾಗಿದ್ದಕ್ಕೆ ಅವರ ಫೋಟೊವನ್ನು ಉದ್ದೇಶಪೂರ್ವಕವಾಗಿ ಬಿಟ್ಟಿದ್ದೇವೆ’ ಎಂದು ಬಿಜೆಪಿ ಶಾಸಕ ಎನ್. ರವಿಕುಮಾರ್ ಹೇಳಿದ್ದಾರೆ.

ಬ್ರಿಟನ್ ಸಂಸತ್‌ನಲ್ಲಿ 1947ರ ಜುಲೈ 18ರಂದು ಅಂಗೀಕಾರಕೊಂಡ ‘ಇಂಡಿಯನ್ ಇಂಡಿಪೆಂಡೆನ್ಸ್ ಆ್ಯಕ್ಟ್– 1947’ರಲ್ಲೇ ಎರಡು ದೇಶದ ಉಲ್ಲೇಖ ಇದೆ. ಎರಡು ದೇಶವಾಗದೇ ಇದ್ದರೆ ಸ್ವಾತಂತ್ರ್ಯ ಕೊಡಲು ಬ್ರಿಟಿಷರು ಒಪ್ಪುತ್ತಲೇ ಇರಲಿಲ್ಲ. ನೆಹರೂ ಜತೆಗೆ ಅಂದು ಸರ್ಕಾರದಲ್ಲಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್, ಹೊರಗಿದ್ದ ಗಾಂಧೀಜಿ ಕೂಡ ಕಾರಣರು ಎಂಬುದು ಇತಿಹಾಸ. ವಿಭಜನೆಗೆ ನೆಹರೂ ಕಾರಣರೆಂಬ ವಾದವನ್ನೇ ಒಪ್ಪೋಣ. ಪ್ರಧಾನಿ ಮೋದಿಯವರು 2015ರ ಡಿಸೆಂಬರ್ 25ರಂದು ಯಾವುದೇ ಆಹ್ವಾನ ಹಾಗೂ ಪೂರ್ವನಿಗದಿತ ಕಾರ್ಯಕ್ರಮ ಇಲ್ಲದೇ ಪಾಕಿಸ್ತಾನಕ್ಕೆ ಹೋಗಿ, ಅಲ್ಲಿನ ಪ್ರಧಾನಿಯಾಗಿದ್ದ ನವಾಜ್ ಷರೀಫರ ಹುಟ್ಟುಹಬ್ಬದಲ್ಲಿ ಪಾಲ್ಗೊಂಡು ಬಂದಿದ್ದರು. ನೆಹರೂ ಬಗೆಗಿನ ನಿಲುವು ಮೋದಿಯವರಿಗೂ ಅನ್ವಯಿಸಬೇಕಲ್ಲವೇ?

‘ಮೈಸೂರು ಹುಲಿ’ ಎಂದೇ ಬ್ರಿಟಿಷರಿಂದ ಕರೆಸಿಕೊಂಡು, ಅವರಿಗೆ ಸಿಂಹಸ್ವಪ್ನವಾಗಿ ಕಾಡಿದ್ದ ಟಿಪ್ಪು ಸುಲ್ತಾನ್‌ನನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಕರೆಯಲು ಬಿಜೆಪಿಗರಿಗೆ ಮನಸ್ಸೇ ಇಲ್ಲ. ಬ್ರಿಟಿಷರನ್ನು ದೇಶದಿಂದ ಒದ್ದೋಡಿಸಲು ಫ್ರಾನ್ಸ್‌ನ ನೆಪೋಲಿಯನ್ ಜತೆಗೆ ಪತ್ರ ವ್ಯವಹಾರ ನಡೆಸಿದ್ದ ಟಿಪ್ಪು, ಬ್ರಿಟಿಷರ ವಿರುದ್ಧ ನಾಲ್ಕು ಯುದ್ಧಗಳನ್ನು ನಡೆಸಿದವ. ಬಾಯಾರಿ ಬಂದವರು ಯಾವ ಜಾತಿಯವರು ಎಂದು ನೋಡಿ ನೀರನ್ನು ಕೊಡುವ ದರಿದ್ರ ಜಾತಿ ವ್ಯವಸ್ಥೆ ಈ ದೇಶದಲ್ಲಿದೆ; ಬ್ರಿಟಿಷರ ತೊತ್ತಾಗಿ ಅಪಾರ ಸಂಪತ್ತು ಲೂಟಿ ಹೊಡೆದವರು ಇದ್ದಾರೆ. ಅಂತಹ ದೇಶದಲ್ಲಿ, ‘ಬ್ರಿಟಿಷರಿಗೆ ಶರಣಾಗಲಾರೆ, ಯುದ್ಧದಲ್ಲಿ ಗೆದ್ದೇ ತೀರುವೆ’ ಎಂದು ಪಣತೊಟ್ಟ ವೀರ ಟಿಪ್ಪು, ತನ್ನ ಮಕ್ಕಳನ್ನೇ ಒತ್ತೆಯಿಡುವಷ್ಟು ನಾಡಪ್ರೇಮಿಯಾಗಿದ್ದ. ಆತ ತಂದ ಸುಧಾರಣೆಗಳು ಭವಿಷ್ಯದ ಭಾರತಕ್ಕೆ ಅಡಿಗಲ್ಲಾಗಿದ್ದವು. ಟಿಪ್ಪುವನ್ನು ಒಪ್ಪದವರು, ವಿ.ಡಿ.ಸಾವರ್ಕರ್ ಅವರನ್ನು ‘ವೀರ’ ಎಂದು ಬಣ್ಣಿಸುತ್ತಾರೆ. 1913ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಾವರ್ಕರ್ ಬರೆದ ಕ್ಷಮಾಪಣೆ ಪತ್ರ ಇನ್ನೂ ಕೇಂದ್ರ ಪತ್ರಾಗಾರ ಇಲಾಖೆಯಲ್ಲಿದ್ದೀತು. ‘ನಾವು ಜೈಲಿನಲ್ಲಿರುವಷ್ಟು ದಿನ ಮಹಾರಾಣಿಯವರ ಸಾವಿರಾರು ಭಾರತೀಯ ಪ್ರಜೆಗಳಿಗೆ ನಿಜವಾದ ಹರ್ಷ ಸಾಧ್ಯವಿಲ್ಲ. ಯಾಕೆಂದರೆ ರಕ್ತ ಸಂಬಂಧ ಹೆಚ್ಚು ಗಟ್ಟಿ... ನಾನು ಯಾವುದೇ ರೀತಿಯಲ್ಲಾದರೂ ಸರ್ಕಾರದ ಸೇವೆ ಮಾಡಲು ಸಿದ್ಧನಿದ್ದೇನೆ’ ಎಂದು ಕ್ಷಮಾಪಣೆ ಪತ್ರದಲ್ಲಿ ಬರೆದಿದ್ದರು. ಗಾಂಧೀಜಿಯವರನ್ನು ಕೊಂದ ನಾಥೂರಾಮ್ ಗೋಡ್ಸೆ, ಸಾವರ್ಕರ್ ಅವರ ಶಿಷ್ಯ ಎಂದು ದಾಖಲೆಗಳು ಹೇಳುತ್ತವೆ. ಈ ಹೊತ್ತಿಗೂ ಸಾವರ್ಕರ್, ಗೋಡ್ಸೆ, ನಾರಾಯಣ ಆಪ್ಟೆ ಜತೆಗಿರುವ ಫೋಟೊಗಳು ಬಹಳಷ್ಟು ಸಿಗುತ್ತವೆ. ಬ್ರಿಟಿಷರ ವಿರುದ್ಧ ನೆಹರೂ, ಟಿಪ್ಪು ಸುಲ್ತಾನ್ ಹೋರಾಡಲಿಲ್ಲ ಬಿಡಿ. ಸಾವರ್ಕರ್ ಎಲ್ಲಿ ಹೋರಾಡಿದ್ದರು? ದೇಶದ ಕ್ರಾಂತಿಕಾರಿಗಳು, ಅಂದಿನ ಕಾಂಗ್ರೆಸ್ ಪಕ್ಷವು ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದಾಗ, ಸಾವರ್ಕರ್ ಹಿಂದೂ ಮಹಾಸಭಾ ಸ್ಥಾಪಿಸಿ ತಮ್ಮದೇ ಆದ ಕೆಲಸ ಮಾಡುತ್ತಿದ್ದುದು ಇತಿಹಾಸ. ಅನಾಮಧೇಯ ಹೋರಾಟಗಾರರೆಂದರೆ ಇವರೇ ಇರಬೇಕು!

ಭಗತ್ ಸಿಂಗ್, ಚಂದ್ರಶೇಖರ್ ಆಜಾದ್ ಅವರಿಗೆ ಕೇಸರಿ ವಸ್ತ್ರ ಹೊದಿಸಿ, ತಮ್ಮ ನಾಯಕರು ಎಂದು ಬಿಂಬಿಸಿಕೊಳ್ಳುವ ಯತ್ನವನ್ನು ಸಂಘ ಪರಿವಾರ ಮಾಡಿತ್ತು. ಆಜಾದ್ ಅವರಿಗೆ ಜನಿವಾರವನ್ನೂ ತೊಡಿಸಿತ್ತು. ಕಮ್ಯುನಿಸ್ಟ್ ಸಿದ್ಧಾಂತವನ್ನು ನೆಚ್ಚಿಕೊಂಡಿದ್ದ ಈ ವೀರರು, ಬ್ರಿಟಿಷರನ್ನು ಓಡಿಸಲು ‘ಹಿಂದೂಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕ್ ಅಸೋಸಿಯೇಶನ್’ ಅನ್ನು 1927ರಲ್ಲೇ ಕಟ್ಟಿದ್ದನ್ನು ಸಂಘ ಪರಿವಾರದವರು ಮರೆತೇಬಿಟ್ಟಿದ್ದರು. ಬಳಿಕ, ಸರ್ದಾರ್ ಪಟೇಲರನ್ನು ತಮ್ಮ ಹೆಗ್ಗುರುತು ಮಾಡಿಕೊಳ್ಳುವ ಹುನ್ನಾರವೂ ನಡೆಯಿತು. ಅಪ್ಪಟ ರಾಷ್ಟ್ರೀಯವಾದಿಯಾಗಿದ್ದ, ಕಾಂಗ್ರೆಸ್ ಪರಂಪರೆಯಲ್ಲಿ ಬೆಳೆದಿದ್ದ ಪಟೇಲರು, ಕೋಮುವಾದಿಯಾಗಿರಲಿಲ್ಲ. ಆರ್‌ಎಸ್‌ಎಸ್ ಬಗ್ಗೆ ಭಿನ್ನವಾದ ನಿಲುವನ್ನೇ ಹೊಂದಿದ್ದರು. ಹಾಗಿದ್ದರೂ ಪಟೇಲರ ಪ್ರತಿಮೆ ನಿರ್ಮಾಣದ ಅಭಿಯಾನವನ್ನೇ ನಡೆಸಿ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮವರು ಭಾಗಿಯಾಗಿದ್ದಾರೆಂದು ಬಿಂಬಿಸುವ ಯತ್ನವೂ ನಡೆಯಿತು. ಪ್ರತಿಮಾ ರಾಜಕಾರಣವೂ ಅವರಿಗೆ ನಿರೀಕ್ಷಿತ ಫಲ ಕೊಡಲಿಲ್ಲ. ಈಗ ಕಡೆಗೆ ಉಳಿದಿರುವುದು ಸಾವರ್ಕರ್ ಮಾತ್ರ.



ತಮ್ಮ ಸರ್ಕಾರ ಕರ್ನಾಟಕವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದೆ ಎಂದು ಬೊಮ್ಮಾಯಿ ಹೇಳಿಕೊಳ್ಳುತ್ತಾರೆ. ಮುಖ್ಯಮಂತ್ರಿ ಬದಲಾವಣೆ ವಿಷಯವನ್ನು ಬಿಜೆಪಿಯ ಮಾಜಿ ಶಾಸಕ ಸುರೇಶ್ ಗೌಡ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಕಾಂಗ್ರೆಸ್‌ನವರು ಇದನ್ನು ಹಬ್ಬಿಸುತ್ತಿದ್ದಾರೆ; ಈ ಅಪಪ್ರಚಾರವು ಇನ್ನೂ ಎರಡು ಗಂಟೆ ಹೆಚ್ಚುವರಿ ಕೆಲಸ ಮಾಡಲು ಪ್ರೇರಣೆ ಒದಗಿಸಿದೆ’ ಎಂದರು. ಅಂದರೆ, ಅಭಿವೃದ್ಧಿಯತ್ತ ಪೂರ್ಣಾವಧಿ ಅವರು ತೊಡಗಿಕೊಂಡಿಲ್ಲ ಎಂಬುದು ಇದರರ್ಥವೇ? ಸಂಸದೀಯ ವ್ಯವಹಾರಗಳ (ಅಧಿಕೃತ ವಕ್ತಾರ) ಸಚಿವ ಜೆ.ಸಿ. ಮಾಧುಸ್ವಾಮಿ, ‘ಸರ್ಕಾರ ನಡೆಯುತ್ತಿಲ್ಲ, ಮ್ಯಾನೇಜ್ ಮಾಡುತ್ತಿದ್ದೇವೆ ಅಷ್ಟೆ’ ಎಂದು ಹೇಳಿದ್ದಾರೆ. ಈ ಇಬ್ಬರಲ್ಲಿ ಸತ್ಯ ಹೇಳಿದ್ದು ಯಾರು?

ಚರಿತ್ರೆಯನ್ನು ತಿರುಚಬಹುದು; ಆದರೆ, ಸತ್ಯವನ್ನು ಸಮಾಧಿ ಮಾಡಲಾಗದು; ಅದಕ್ಕೆ ಗಾಂಧೀಜಿ ‘ನನ್ನ ಸತ್ಯಾನ್ವೇಷಣೆ’ ಎಂಬ ಹೆಸರಿನಲ್ಲಿ ಆತ್ಮಚರಿತ್ರೆ ಬರೆದರು; ಸತ್ಯವೇ ನನ್ನ ದೇವರು ಎಂದರು. ಸುಳ್ಳನ್ನು ಎಷ್ಟು ಬಾರಿ ಹೇಳಿದರೂ ಅದು ಸತ್ಯವಾಗದು. ಸಮಾಧಿಯೊಳಗೆ ಹೂತಿಟ್ಟರೂ ಸತ್ಯ ಮೊಳಕೆಯೊಡೆದು, ಚಿಗುರು ಪಡೆದು ಎಂದಾದರೊಂದು ಮರವಾಗುತ್ತದೆ. ಅದಕ್ಕೇ ನಮ್ಮ ದೇಶದ ಹಾಗೂ ರಾಜ್ಯದ ಲಾಂಛನದಲ್ಲಿ ‘ಸತ್ಯಮೇವ ಜಯತೆ’ ಎಂಬ ಪದಗಳನ್ನು ಹಿರೀಕರು ಸೇರಿಸಿದ್ದಾರೆ. ಸರ್ಕಾರ ನಡೆಸುವವರಿಗೆ ಇದು ಅರ್ಥವಾಗಲಿ.

ಚುರುಮುರಿ

ನಂದೇನೂ ನಡೀತಿಲ್ಲ

● ಲಿಂಗರಾಜು ಡಿ.ಎಸ್.

ತುರೇಮಣೆ, ನಾನು ಕುಂತಿದ್ದಾಗ ಒಂದು ಗುಂಪಿನ ಮೆರವಣಿಗೆ ಬಂತು. ಅದರಲ್ಲೊಬ್ಬ ‘ಆಜಾತಿ ಆಜಾತಿ’ ಅಂತ ಕೂಗ್ತಿದ್ದ. ನಾನು ತುರೇಮಣೆ ಮುಖ ನೋಡಿದೆ.

ಅಲ್ಲಿ ಹೋಯ್ತಿದ್ದ ಇನ್ನೊಬ್ಬನ್ನ ಕರೆದು ‘ಇದೇನಲಾ ಅವನು ಆಜಾತಿ, ಆಜಾತಿ ಅಂತ ವರಲತಾವ್ನೆ’ ಅಂತ ಕೇಳಿದೋ.

ಅವನಂದ ‘ಸಾ ಅವುನಿಗೆ ನಾಲಿಗೆ ತಿರಗಕುಲ್ಲ. ಆಜಾದಿ ಅನ್ನೋ ಬದಲು ಆಜಾತಿ ಅಂತಾವ್ನೆ. ಮಿಸ್ಟೇಕ್ ಮಾಡಿಕ್ಯಬ್ಯಾಡಿ’ ಅಂತಂದ.

‘ರಾಜಕಾರಣಿ ಆಗಕೆ ಲಗತ್ತಾಗವನೆ. ಅವುರಿಗು ಹಂಗೇ ಐನ್ ಟೈಮಲ್ಲಿ ನಾಲಗೆ ತಿರುಗಕಿಲ್ಲ’ ಅಂದ್ರು ತುರೇಮಣೆ.

‘ಜಾತಿ ನಮ್ಮ ರಾಜಕಾರಣಿಗಳಿಗೆ ಚಾಕಲೇಟಿದ್ದಂಗೆ! ಎಪ್ಪತ್ತೈದು ವರ್ಷದಿಂದ ಅವರೂ ಚೀಪಿ ನಮಗೂ ಚೀಪಿಸ್ತಾವರೆ?’ ಅಂತಂದೆ.

‘ಹ್ಲೂಂ ಕಪ್ಪ, ಮನೇ ಕೆಲಸದೋರ್ನ ನೇಮಿಸಿಗ್ಯಳಕ್ಕೆ ಅಕ್ರಮ, ದಿನಸಿ-ತರಕಾರಿ ಅಂಗಡಿಯೋರ ತವು ಕಮೀಶನ್ನು, ಮನೆಗೆ ಬರೋ ಪುಸ್ತಕ, ಪತ್ರಿಕೆಗಳ ಬದಲಾಯಿಸೋಕೆ ಹುನ್ನಾರ. ಮೊನ್ನೆ ಮನೆ ಮುಂದೆ ಗುಂಡೀಲಿ ಎಡವಿ ಬಿದ್ದು ಕಾಲು ಉಳುಕಿಸಿಕೊಂಡಿದ್ಕೆ ಎಲ್ಲಾರು ನನ್ನೇ ಬೋದ್ರು. ನಮ್ಮನೇಲೂ ಇದೇ ಥರ ಯವಸ್ಥೆನೇ ಕೆಟ್ಟೋಗ್ಯದೆ!’ ತುರೇಮಣೆ ತಮ್ಮ ದುಃಖ ತೋಡಿಕೊಂಡರು.

‘ನಿಮ್ಮವ್ವಾರನ್ನ ಕರೆಸಿ ಬುದ್ಧಿ ಹೇಳಿಸ್ಬೇಕಾಗಿತ್ತು ಸಾ!’ ಸಲಹೆ ಕೊಟ್ಟೆ.

‘ಮನೇಲಿ ಅವುರ ಮಾತು ಯಾರೂ ಕೇಳೋ ಪರಿಸ್ಥಿತಿಲೇ ಇಲ್ಲ ಕನೋ. ‘ಇನ್ನು 7-8 ತಿಂಗಳುಗಂಟಾ ನಡೆದಂಗೆ ನಡೀಲಿ ಮಾದಪ್ಪನ ಜಾತ್ರೆ!’ ಅಂದ್ರಂತೆ’ ಸಣ್ಣಗೆ ಕೊರಗಿದರು.

‘ಈಗ ಏನು ಮಾಡಬಕು ಅಂತಿದ್ದರಿ?’ ಅಂತ ವಿಚಾರಿಸಿದೆ.

‘ನಮ್ಮಪ್ಪ ಲೋಕಪ್ಪನಿಗೆ ಇಸ್ಟೋರ್ಸ ಹುಸಾರಿರಲಿಲ್ಲ. ಈಗ ಇದೆಲ್ಲಾ ನೋಡಿ ಕೆಂಗೆಂಡ ಆಗ್ಯವನೆ ‘ನಾನು ಬತ್ತೀನಿ ಇರು ಮಗ. ಹೇಳಿದ್ದು ಕೇಳದಿದ್ದರೆ ಬಲಿ ಹಾಕ್ತಿನಿ’ ಅಂದವುನೆ. ನಮ್ಮನೇಲೂ ನಂದೇನು ನಡಿತಿಲ್ಲ. ಯಂಗೋ ಮ್ಯಾನೇಜ್ ಮಾಡ್ತಾ ಇವ್ನಿ ಕಯ್ಯಾ!’ ಅಂತ ತಮ್ಮ ದುಃಖ ತೋಡಿಕೊಂಡರು. ಇದು ಎಲ್ಲಾರದ್ದೂ ದುಃಖ ಅನ್ನಿಸ್ತು!

ದಿನದ ಟ್ವೀಟ್

ಸ್ವಾತಂತ್ರ್ಯ ಎಂದರೆ...

ನಿಜವಾದ ‘ಸ್ವಾತಂತ್ರ್ಯ’ವೆಂದರೆ, ಆ ದೇಶದ ಪ್ರತಿಯೊಬ್ಬ ನಾಗರಿಕನ ಬದುಕು, ಜೀವನ ವಿಧಾನ, ನಡವಳಿಕೆ ಅಥವಾ ರಾಜಕೀಯ ದೃಷ್ಟಿಕೋನಗಳ ಮೇಲೆ ಅಧಿಕಾರದಿಂದ ಹೇರಲಾದ ‘ದಬ್ಬಾಳಿಕೆ–ದೌರ್ಜನ್ಯ’ದ ನಿರ್ಬಂಧಗಳಿಂದ ಸಮಾಜದೊಳಗೆ ‘ಮುಕ್ತ’ವಾಗಿರುವ ಸ್ಥಿತಿ.

ಮಂಸೋರೆ, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ಭ್ರಷ್ಟಾಚಾರವನ್ನು ತೊಡೆದುಹಾಕಲು ಬಯಸುವುದಾಗಿ ಪ್ರತಿಯೊಂದು ರಾಜಕೀಯ ಪಕ್ಷವೂ ಹೇಳುತ್ತದೆ. ಹೀಗೆ ಎಲ್ಲ ಪಕ್ಷಗಳೂ ಏಕಪ್ರಕಾರವಾದ ಭಾಷೆಯಲ್ಲಿ ಮಾತನಾಡುತ್ತಿದ್ದರೆ, ಭ್ರಷ್ಟರು ಯಾರು ಎಂದು ನಿಮಗೆ ಅಚ್ಚರಿಯಾಗುತ್ತದೆ, ಅಲ್ಲವೇ? ಬಹುಶಃ ಅವರು ಅನ್ಯಗ್ರಹ ಜೀವಿಗಳಾಗಿರಬಹುದೇ? #IndependenceDay2022

ಸುಮಂತ್ ರಾಮನ್, ವಿಶ್ಲೇಷಕ

25 ವರ್ಷಗಳ ಹಿಂದೆ

ಶನಿವಾರ, 16-8-1997

● **ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ಪ್ರಧಾನಿ ಗುಜ್ರಾಲ್ ಘೋಷಣೆ**

ನವದೆಹಲಿ, ಆಗಸ್ಟ್ 15– ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ, ರಾಜಕೀಯ ಮತ್ತು ಕ್ರಿಮಿನಲ್‌ಗಳ ನಡುವಣ ಅಪವಿತ್ರ ಮೈತ್ರಿ ವರ್ಜ್ಯಕ್ಕೆ ರಾಜಕೀಯ ಪಕ್ಷಗಳಿಗೆ ಪ್ರಧಾನಮಂತ್ರಿ ಇಂದರ್ ಕುಮಾರ್ ಗುಜ್ರಾಲ್ ಅವರು ಕರೆ ನೀಡಿದರು.

ಸ್ವಾತಂತ್ರ್ಯದ ಸುವರ್ಣ ಜಯಂತಿಯ ಅಂಗವಾಗಿ ಕಡುಬಡ ಕುಟುಂಬಗಳಲ್ಲಿ ಜನಿಸುವ ಹೆಣ್ಣು ಮಗುವಿಗೆ ವಿದ್ಯಾರ್ಥಿ ವೇತನ, ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮೀಸಲಾತಿಗೆ ಮತ್ತೆ ಸರ್ಕಾರದ ಕಟಿಬದ್ಧತೆ, ಭೂರಹಿತ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ, ಸ್ವಾತಂತ್ರ್ಯ ಯೋಧರಿಗೆ ನೀಡುತ್ತಿರುವ ವೇತನ ದುಪ್ಪಟ್ಟು ಮತ್ತು ಮುಂದಿನ ಸಂಸತ್ ಅಧಿವೇಶನದಲ್ಲಿ ಲೋಕಪಾಲ್ ಮಸೂದೆ ಮಂಡನೆ ಸೇರಿ ಹಲವು ಕಾರ್ಯಕ್ರಮಗಳನ್ನು ಪ್ರಕಟಿಸಿದರು.

● **ನೆರೆ ರಾಜ್ಯಗಳ ಸಹಕಾರಕ್ಕೆ ಪಟೇಲ್ ಕರೆ**

ಬೆಂಗಳೂರು, ಆಗಸ್ಟ್ 15– ನೆರೆ ಹೊರೆ ರಾಜ್ಯಗಳ ಸಹಕಾರ ಸೌಹಾರ್ದತೆಗೆ ಕರೆ ನೀಡಿದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು, ರಾಜ್ಯದ ತಾಳ್ಮೆ ಮತ್ತು ನಿಲುವನ್ನು ಯಾರೂ ದೌರ್ಬಲ್ಯ ಎಂದು ಭಾವಿಸಬಾರದು ಎಂದು ಎಚ್ಚರಿಕೆ ನೀಡಿದರು.

‘ನೆರೆ ಹೊರೆ ರಾಜ್ಯಗಳಲ್ಲಿ ಸೌಹಾರ್ದಯುತ ಬಾಂಧವ್ಯವನ್ನು ಕಾಪಾಡಿಕೊಂಡು ಬರುವುದು ಕರ್ನಾಟಕ ರಾಜ್ಯದ ಸಂಸ್ಕೃತಿ, ಪರಂಪರೆ. ವಿವಾದ ಹುಟ್ಟಿಸುವುದು, ನ್ಯಾಯಾಲಯಕ್ಕೆ ಹೋಗುವುದು ರಾಜ್ಯದ ಸ್ವಭಾವ ಅಲ್ಲ’ ಎಂದು ಹೇಳಿದರು.

● **ಒಂದೇ ಕುಟುಂಬದ ಐವರ ಕಗ್ಗೊಲೆ**

ಬೆಳಗಾವಿ, ಆಗಸ್ಟ್ 15– ಸವದತ್ತಿ ಬಳಿಯ ಯಡಹಳ್ಳಿ ಗ್ರಾಮದಲ್ಲಿ ಇಂದು ಬೆಳಗಿನ ಒಂದು ಗಂಟೆ ಸಮಯದಲ್ಲಿ ಒಂದೇ ಕುಟುಂಬದ ಐವರನ್ನು ಕೊಲೆ ಮಾಡಿದ ಭೀಕರ ಘಟನೆ ನಡೆದಿದೆ.

ಆಪಾದಿತರಾದ ವಿರೂಪಾಕ್ಷ ಹೂಗಾರ ಮತ್ತು ಅವರ ಬೆಂಬಲಿಗರಾದ 15ರಿಂದ 20 ಜನರು ಮಾರಕ ಅಸ್ತ್ರಗಳ ಜೊತೆಗೆ ಲಗಮಣ್ಣವರ ಕುಟುಂಬದ ಮೇಲೆ ಮಧ್ಯರಾತ್ರಿ ಎರಗಿ ಮಾರಣಹೋಮ ನಡೆಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

● **‘ಮತ್ತೆ ಮದುವೆ ಇಲ್ಲ’**

ಲಂಡನ್, ಆಗಸ್ಟ್ 15 (ಡಿಪಿಎ)– ರಾಜಕುಮಾರ ಚಾರ್ಲ್ಸ್ ಅವರಿಂದ ಒಂದು ವರ್ಷದ ಹಿಂದೆ ವಿವಾಹ ವಿಚ್ಛೇದನ ಪಡೆದಿರುವ ರಾಜಕುಮಾರಿ ಡಯಾನಾ ಎರಡನೇ ವಿವಾಹಕ್ಕೆ ತಾನು ಆತುರಳಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಕೋಟ್ಯಧಿಪತಿ ಪ್ಲೇಬಾಯ್ ದೋದಿ ಅಲಫೈಯ್ಡ್ ಅವರೊಂದಿಗಿರುವ ವಿವಾದಾತ್ಮಕ ಸಂಬಂಧದ ಹಿನ್ನೆಲೆಯಲ್ಲಿ ಅವರಿಬ್ಬರ ವಿವಾಹವಾಗಲಿದೆ ಎಂಬ ಸುದ್ದಿಗಳು ನಿನ್ನೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಆಕೆ, ‘ಹಳೆ ವಿವಾಹ ಬಂಧನದಿಂದ ಹೊರಬಂದು ಹೊಸ ವಿವಾಹ ಮಾಡಿಕೊಳ್ಳಲು ಅಷ್ಟು ಸುದೀರ್ಘ ಕಾಲ ಹೋರಾಟ ನಡೆಸಿಲ್ಲ’ ಎಂದು ತಿಳಿಸಿದ್ದಾರೆ.

ಸಂಗತ

ಅಮೃತದ ಗರಿ: ಸಾಧನೆಯ ಗುರಿ

ಒಂದು ದೇಶದ ಸ್ವಾತಂತ್ರ್ಯಕ್ಕೆ ಸ್ವಾವಲಂಬನೆಯೇ ರಾಜಮಾರ್ಗ

● ಯೋಗಾನಂದ

‘ಸ್ವಾತಂತ್ರ್ಯ’ ಎಂದಾಗಲೆಲ್ಲ ಆ ವೃತ್ತಾಂತ ನೆನಪಾಗುತ್ತದೆ. ಒಂದು ಹಾಸ್ಟೆಲಿನಲ್ಲಿ ವಾರ್ಡನ್ ‘ವಿದ್ಯಾರ್ಥಿಗಳೇ, ನಾಳೆಯಿಂದ ನಿಮ್ಮ ನಿಮ್ಮ ಕೊಠಡಿ ನಿರ್ವಹಿಸಲು ನೀವು ಸ್ವತಂತ್ರರು. ನನ್ನ ನಿಗಾ, ತಪಾಸಣೆ ಇರದು’ ಎನ್ನುತ್ತಾರೆ. ಮೂರು ದಿನಗಳ ಬಳಿಕ ಅವರು ಗಮನಿಸಿದ್ದು ನಿರೀಕ್ಷೆಗೆ ವ್ಯತಿರಿಕ್ತವಾಗಿತ್ತು. ಎಲ್ಲರನ್ನೂ ಕರೆದು ನೋವಿನಿಂದ ಹೇಳಿದ್ದರು: ‘ಮಕ್ಕಳೇ, ಸ್ವಚ್ಛತೆ ಕಾಪಾಡುವ ಮಾತು ಒತ್ತಟ್ಟಿಗಿರಲಿ, ನೀರು ಕೂಡ ಸಿಗುತ್ತಿಲ್ಲ ಅಂತ ದೂರುಗಳು ನಿಮ್ಮಿಂದಲೇ ಬಂದಿವೆ. ಪೊರಕೆಗಳು ಎಷ್ಟಿಟ್ಟರೂ ನಾಪತ್ತೆ. ಕೆಲವರದೋ ಅಕ್ಕಪಕ್ಕದವರು ಕೇಳುವಷ್ಟು ಜೋರಾದ ಮೊಬೈಲ್ ಸೌಂಡ್. ನೀವು ಆಲೋಚಿಸಿ ವರ್ತಿಸಬೇಕಲ್ಲವೆ?’ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ ಮತ್ತೊಬ್ಬರ ಸ್ವಾತಂತ್ರ್ಯವನ್ನು ಮಿತಗೊಳಿಸಿದರೆ ಆಗುವ ಎಡವಟ್ಟಿದು.

ನಮ್ಮ ಸ್ವಾತಂತ್ರ್ಯಕ್ಕೆ ಇತಿಮಿತಿಗಳಿವೆ. ಸ್ವಾತಂತ್ರ್ಯದ ಅನುಭೂತಿ ಸ್ವಯಂ ನಿಯಂತ್ರಣದಿಂದಲೇ ಆರಂಭ. ನಿಜ, ಸ್ವಾತಂತ್ರ್ಯ ಎಂದರೆ ಸ್ವಯಂ ನಿಯಂತ್ರಣ, ಸ್ವಯಂ ನಿರ್ವಹಣೆ. ಒಂದು ದೇಶದ ಸ್ವಾತಂತ್ರ್ಯಕ್ಕೆ ಸ್ವಾವಲಂಬನೆಯೇ ರಾಜಮಾರ್ಗ. ಸ್ವಾತಂತ್ರ್ಯ ಎಂದರೆ ಬಿಡುಬೀಸಾಗಿ ವರ್ತಿಸಲು ಸಿಕ್ಕ ಪರವಾನಗಿ ಅಂತ ಭಾವಿಸಬಾರದು. ಅದರೊಳಗೆ ಜವಾಬ್ದಾರಿಯೂ ಸೇರಿಕೊಂಡಿರುತ್ತದೆ. ಅದು ವಹಿಸುವ ಹೊಣೆಗಾರಿಕೆಯೇ ಒಂದು ಹೆಮ್ಮೆಯ ಉಡುಗೊರೆ. ಯಾವುದೇ ದೇಶದ ಅಸ್ಮಿತೆ ಸ್ಥಾಪಿತವಾಗುವುದು ಭೌಗೋಳಿಕ ವಿವರದಿಂದಲ್ಲ, ಅದರ ಪ್ರಜೆಗಳಿಂದ. ಹಾಗಾಗಿ ದೇಶದ ಸ್ವಾತಂತ್ರ್ಯ ಎಂದರೆ ಅದು ಅಲ್ಲಿನ ಪ್ರಜೆಗಳ ಸ್ವಾತಂತ್ರ್ಯ.

ಸರ್ವರಿಗೂ ಸಮಪಾಲು, ಸಮಬಾಳು ಪರಿಕಲ್ಪನೆ ನಮ್ಮದು. ಇದರ ಸಾಕಾರಕ್ಕೆ ಭಾರತ ‘ಬಡವರಿರುವ ಶ್ರೀಮಂತ ದೇಶ’ ಎಂಬ ಅಪಖ್ಯಾತಿಯಿಂದ ಮುಕ್ತವಾಗಬೇಕಿದೆ. ಇದಕ್ಕೆ ಒಂದೇ ಉಪಾಯ ಸರ್ವರೂ ಶಾರೀರಿಕ ದುಡಿಮೆಯಲ್ಲಿ ತೊಡಗಿಕೊಳ್ಳುವುದು. ಮಕ್ಕಳ ಶಿಕ್ಷಣ ಕ್ರಮದಲ್ಲಿ ಕುಂಬಾರಿಕೆ, ಮರಗೆಲಸ, ಕಟ್ಟಡ ಕೆಲಸ, ಟೈಲರಿಂಗ್, ಬುಕ್ ಬೈಂಡಿಂಗ್... ಹೀಗೆ ಒಂದಲ್ಲೊಂದು ಬಗೆಯ ಕಲಿಕೆ ಕಡ್ಡಾಯವಾಗಿರಬೇಕೆಂದು ಮಹಾತ್ಮ ಗಾಂಧಿ ಹಂಬಲಿಸಿದರು. ಇದರಿಂದ ವಿದ್ಯಾರ್ಥಿ ದೆಸೆಯಲ್ಲೇ ಮಕ್ಕಳಿಗೆ ದುಡಿಮೆ ಮತ್ತು ಗಳಿಕೆಯ ಮಹತ್ವದ ಬಗೆಗೆ ತಿಳಿವಳಿಕೆ ಉಂಟಾಗುವುದು. ಅವರಿಗೆ ಕಿಂಚಿತ್ತಾದರೂ ಹಣಕಾಸಿನ ಆಯವ್ಯಯದ ಅರಿವು ಮೂಡುವುದು.

ಮನುಷ್ಯನಿಗೆ ಮನುಷ್ಯನೇ ಆಳಾಗುವುದು ವಿಪರ್ಯಾಸ. ಇದನ್ನೇ ಬಸವಣ್ಣನವರು ಮಾರ್ಮಿಕವಾಗಿ ‘ಎನಗಿಂತ ಕಿರಿಯರಿಲ್ಲ’ ಎಂದಿದ್ದು. ಯಾರೊಬ್ಬರೂ ಇನ್ನೊಬ್ಬರಿಗೆ ಯಜಮಾನರಾಗುವಷ್ಟು ದೊಡ್ಡವರಲ್ಲ.

ಪ್ರಾಜ್ಞರ ಧೀಮಂತಿಕೆ ಸರ್ವರ ಧೀಮಂತಿಕೆಯಾಗಬೇಕು, ದೇಶ ಸರ್ವರ ದೇಶವಾಗಬೇಕು. ಇದುವೆ ಪ್ರಜಾಸತ್ತೆಯ ಸ್ವಾತಂತ್ರ್ಯ. ಶಾಲೆಗೆ ಮಕ್ಕಳು ದಿನನಿತ್ಯ ಎಳೆಂಟು ಕಿ.ಮೀ. ಹೋಗಿ ಬರುವ, ಚಿಕಿತ್ಸೆಗೆ ರೋಗಿಯನ್ನು ದುಪ್ಪಟ್ಟಾದಲ್ಲಿ ಸುತ್ತಿ ಹೊತ್ತೊಯ್ಯುವ, ಆಸ್ಪತ್ರೆಯಲ್ಲಿ ಒಂದೇ ದೂಡುಗಾಡಿಯಲ್ಲಿ ನಾಲ್ಕೈದು ಮಂದಿ ಗರ್ಭಿಣಿಯರನ್ನು ಹೆರಿಗೆ ಕೊಠಡಿಗೆ ಸ್ಥಳಾಂತರಿಸುವ, ಬೈಕಿನಲ್ಲಿ ಶವ ಸಾಗಿಸುವ ಸಂದರ್ಭಗಳು ವರದಿಯಾಗುತ್ತಿರುತ್ತವೆ. ಕರುಳು ಹಿಂಡುವ ಚಿತ್ರಣಗಳಿವು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಡಗರವನ್ನು ಹಲವು ಮಡಿಗೊಳಿಸಲು ಇಂತಹ ನ್ಯೂನತೆಗಳು ಹಂತ ಹಂತವಾಗಿಯಾದರೂ ನಿರ್ಮೂಲವಾಗಬೇಕಿದೆ. ಇಲ್ಲವಾದರೆ ‘75’ ಕೇವಲ ಒಂದು ಕ್ರಮಸಂಖ್ಯೆಯಾಗುತ್ತದೆ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳು ತಮ್ಮ ನೋವು, ಅನನುಕೂಲಗಳನ್ನು ಪ್ರಭುತ್ವದ ಗಮನಕ್ಕೆ ತರಲಡ್ಡಿಯಿಲ್ಲ. ಆದರೆ ಆ ವಿಧಾನ ಹಿಂಸಾರೂಪ ತಳೆದರೆ ದೇಶಕ್ಕೆ ಬಹುಮುಖ ಹಿನ್ನಡೆ ಕಟ್ಟಿಟ್ಟ ಬುತ್ತಿ. ನಮ್ಮದು ಒಕ್ಕೂಟ ವ್ಯವಸ್ಥೆ. ನಮ್ಮ ಸಾಮಾಜಿಕ ಜವಾಬ್ದಾರಿ ನಿರ್ವಹಿಸಲು ರಾಜ್ಯ, ಕೇಂದ್ರದಲ್ಲಿ ಯಾವ ಪಕ್ಷದ ನೇತೃತ್ವದ ಸರ್ಕಾರ ಇದೆ ಎಂಬುದು ಮುಖ್ಯವಲ್ಲ.

ಸ್ಥಾವರಗಳಿಗಿಂತ ಜಂಗಮಗಳಾದ ಗ್ರಂಥಾಲಯಗಳು, ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ನೆಲೆಗೊಳ್ಳುವುದು ಯುಕ್ತ. ಮಳೆ ಬರಲು ಯಜ್ಞ, ಮಳೆ ಹೆಚ್ಚಾಯಿತೆಂದೂ ಯಜ್ಞ, ಚಿತ್ರ ವಿಚಿತ್ರ ಆಚರಣೆಗಳು!

ಆರಾಧನೆ, ಪುನಸ್ಕಾರ ಅವರವರ ನಂಬಿಕೆ ಸರಿ. ಆದರೆ ಅವು ಸಾಂಕೇತಿಕವಾಗಿರಬೇಕು. ಪೂಜೆಯ ಹೆಸರಲ್ಲಿ ಪ್ರಾಣಿಬಲಿ, ಆಹಾರ ಮತ್ತು ಹಣ್ಣು ಹಂಪಲುಗಳ ಪೋಲು, ಸ್ವಹಿಂಸೆ, ವಸ್ತ್ರಗಳ ದಹನ ಸರ್ವತ್ರ ಅಸಮರ್ಥನೀಯ. ಮಳೆ ಇಲ್ಲ, ಬೆಳೆ ಬರಲಿಲ್ಲ, ಬೆಲೆ ಸಿಗಲಿಲ್ಲ ಎನ್ನುವುದೇನು? ಚೀಲಗಟ್ಟಲೆ ಇಡುಗಾಯಿ ಒಡೆಯುವುದೇನು? ಅತಿರೇಕವು ಸ್ವಾತಂತ್ರ್ಯದ ಅಕ್ಷಮ್ಯ ಅಣಕ. ಪ್ರಬುದ್ಧತೆಯೇ ನಮಗೆ ಸ್ವಾತಂತ್ರ್ಯದ ಸಂಪನ್ನ ಅನುಭೋಗವನ್ನು ಕಲಿಸುವುದು.

ನಮ್ಮ ಚರಾಚರ ಸಂಪತ್ತುಗಳ ಕುರಿತು ನಾವು ಕಡಿಮೆ ಯೋಚಿಸುವುದರಿಂದ ಅಹಮಿಕೆ ನೀಗುತ್ತದೆ. ವ್ಯಕ್ತಿಗತ ಆರ್ಥಿಕ ಸ್ವಾತಂತ್ರ್ಯ ನಾವು ಭಾವಿಸುವುದಕ್ಕಿಂತಲೂ ಸುಲಭವೆ. ನಾವು ಅಪ್ರಾಮಾಣಿಕರಾಗಬೇಕೆಂದಲ್ಲ, ಬದುಕನ್ನು ಸರಳಗೊಳಿಸಿಕೊಂಡರಾಯಿತು. ವ್ಯಕ್ತಿ ವ್ಯಕ್ತಿಯೂ ಸಾಲವ್ಯಸನದಿಂದ ಮುಕ್ತನಾದರೆ ಇಡೀ ರಾಷ್ಟ್ರಕ್ಕೆ ತಾನಾಗಿ ಆರ್ಥಿಕ ಸ್ವಾತಂತ್ರ್ಯ ಪ್ರಾಪ್ತವಾಗುವುದು. ಸಮಯವಿಲ್ಲ ಎನ್ನುವ ಆರೋಪವೇ ಒಂದು ವ್ಯಸನ. ಬದುಕಿನ ಶೈಲಿಯಲ್ಲಿ ಸಮಯದ ಸಮರ್ಥ ನಿರ್ವಹಣೆಯ ಕೌಶಲ ಮೆರೆಯಬೇಕಿದೆ. ನಮ್ಮ ರೂವಾರಿ ನಾವೇ. ನಮ್ಮನ್ನು ನಾವು ವಂಚಿಸಿಕೊಳ್ಳುವಷ್ಟು ಬೇರ್‍ಯಾರೂ ವಂಚಿಸಲಾರರು!

ವಾಚಕರ ವಾಣಿ

ಸಂಭ್ರಮದ ಜೊತೆ ಅವಲೋಕನ ಆಗಲಿ

ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿದ್ದೇವೆ. ಇದು ಸರಿಯಾದುದು. ಇದೇ ವೇಳೆ, ನಡೆದುಬಂದ ಹಾದಿಯ ಬಗೆಗೆ, ಸಾಧನೆಗಳ ಬಗೆಗೆ, ಸಮಸ್ಯೆಗಳ ಬಗೆಗೆ ವಸ್ತುನಿಷ್ಠವಾಗಿ ಅವಲೋಕನ ಆಗಬೇಕಾದುದು ಕೂಡ ಅಷ್ಟೇ ಅಗತ್ಯ. ಎಡವಿದ್ದು ಎಲ್ಲಿ ಎಂಬುದು ಗೊತ್ತಾದರೆ ತಿದ್ದಿಕೊಳ್ಳಬಹುದು. ಅದಕ್ಕಿಂತ ಹೆಚ್ಚಿಗೆ ವಸ್ತುಸ್ಥಿತಿಯನ್ನು ಎಲ್ಲರ ಮುಂದಿಡುವುದು ಯುಕ್ತವಾದುದು.

ಅಪೌಷ್ಟಿಕತೆಯು ಮಕ್ಕಳನ್ನು ಬಹಳವಾಗಿ ಕಾಡುತ್ತಿದೆ. ಅದರ ನಿವಾರಣೆಗೆ ಹಲವಾರು ಉಪಕ್ರಮಗಳನ್ನು ಕೂಡ ಕೈಗೊಳ್ಳಲಾಗಿದೆ. ಅದರ ಫಲಾಫಲಗಳ ಬಗೆಗೆ ಆತ್ಮಾವಲೋಕನ ಆಗಬೇಕು. ದೇಶದ ಆರ್ಥಿಕ ಪರಿಸ್ಥಿತಿ ಹೇಗಿದೆ, ಉದ್ಯೋಗ ಅವಕಾಶಗಳ ಸೃಷ್ಟಿಯ ಸ್ಥಿತಿಗತಿ ಹೇಗಿದೆ, ಕೃಷಿ ಕ್ಷೇತ್ರದಲ್ಲಿ ಚೇತರಿಕೆ ಕಂಡುಬಂದಿದೆಯೇ ಇವೇ ಮುಂತಾದ ವಿಷಯಗಳ ಬಗೆಗೆ ಗಂಭೀರ ಚರ್ಚೆಗಳಾಗಬೇಕು. ಅದರ ಆಧಾರದ ಮೇಲೆ ಆದ್ಯತೆಗಳನ್ನು ಗುರುತಿಸಬೇಕು. ಅದಕ್ಕೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಆಗಬೇಕು.

ಚಂದ್ರಿಕಾ ಕೆ., ನೆಲಮಂಗಲ

ಮನಸ್ಸಿನ ಮಾಲಿನ್ಯಕ್ಕೆ ಬೇಕಿದೆ ಮದ್ದು

ರಾಜಸ್ಥಾನದ ಹಳ್ಳಿಯೊಂದರ ಖಾಸಗಿ ಶಾಲೆಯಲ್ಲಿ ಓದುತ್ತಿದ್ದ, ಪರಿಶಿಷ್ಟ ಸಮುದಾಯಕ್ಕೆ ಸೇರಿದ ಬಾಲಕ ಕುಡಿಯುವ ನೀರಿನ ಮಡಕೆ ಮುಟ್ಟಿದ ಎನ್ನುವ ಕಾರಣಕ್ಕೆ ಶಿಕ್ಷಕರೊಬ್ಬರು ಅವನನ್ನು ಥಳಿಸಿದ್ದರು. ಅದರಿಂದ ಬಾಲಕ ಮೃತನಾದನೆಂದು ವರದಿಯಾಗಿದೆ (ಪ್ರ.ವಾ., ಆ. 15). ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ನಡೆದಿರುವ ಈ ಅಮಾನವೀಯ ಕೃತ್ಯವು ಅನೇಕ ಪ್ರಶ್ನೆಗಳನ್ನು ನಮ್ಮ ಮುಂದೆ ಇಡುತ್ತದೆ. ಸ್ವಾತಂತ್ರ್ಯ ಸಿಕ್ಕಿರುವುದು ಯಾರಿಗೆ ಎಂಬ ಪ್ರಶ್ನೆ ಅದರಲ್ಲಿ ಮುಖ್ಯವಾದುದು.

‘ನನ್ನ ಜಾತಿಯೇ ಶ್ರೇಷ್ಠ, ನನ್ನ ಧರ್ಮವೇ ಶ್ರೇಷ್ಠ’ ಎಂಬ ಶ್ರೇಷ್ಠತೆಯ ವ್ಯಸನಗಳೇ ಎಲ್ಲ ಸಮಸ್ಯೆಗಳ ಮೂಲ. ಪ್ರಬಲ ಜಾತಿಯ ಜನರಿಗೆ ದುರ್ಬಲರನ್ನು ಹೊಡೆಯಲು, ಕೊಲ್ಲಲು ಯಾವುದೋ ಒಂದು ನೆವ ಸಿಕ್ಕರೆ ಸಾಕು. ಪರಿಶಿಷ್ಟ ಸಮುದಾಯದ ಮಕ್ಕಳು ಬಯಲು ಶೌಚ ಮಾಡಿದರೆಂಬ ಕಾರಣಕ್ಕೆ, ಪರಿಶಿಷ್ಟ ವಿದ್ಯಾರ್ಥಿ ಹೆಚ್ಚು ಅಂಕಗಳನ್ನು ಗಳಿಸಿದನೆಂಬ ಕಾರಣಕ್ಕೆ ಹಲ್ಲೆ, ಕೊಲೆ ಆಗಿರುವ ನಿದರ್ಶನಗಳು ಇವೆ. ಈ ಎಲ್ಲ ಸಮಸ್ಯೆಗಳ ನಿವಾರಣೆಯು ಪ್ರಬಲರು ತಮ್ಮ ಮಲಿನವಾಗಿರುವ ಮನಸ್ಸನ್ನು ಶುದ್ಧೀಕರಿಸಿಕೊಳ್ಳುವುದರಿಂದ ಮಾತ್ರ ಸಾಧ್ಯ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ತೊಲಗಲಿ...

ದೇಶದಾದ್ಯಂತ ಸ್ವಾತಂತ್ರ್ಯ
ದಿನಾಚರಣೆಯ ಅಮೃತ
ಮಹೋತ್ಸವದ
ಸಂಭ್ರಮ, ಸಡಗರ...
ಇನ್ನಾದರೂ ಬಡತನ,
ಭ್ರಷ್ಟಾಚಾರ, ನಿರುದ್ಯೋಗ
ತೊಲಗಲಿ ಅವಸರ...

ಚೆಲುವರಾಜು ಕೆ.
ಧನಗೆರೆ, ಕೊಳ್ಳೇಗಾಲ

ಕನ್ನಡದಲ್ಲಿ ಕಾನೂನು ಪುಸ್ತಕ ಶ್ಲಾಘನೀಯ

ದೇಶದ ಪ್ರಮುಖ ಕಾನೂನು ಸಂಹಿತೆಗಳನ್ನು ಒಳಗೊಂಡ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಗೊಂಡ ಕಾನೂನು ಪುಸ್ತಕಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಬಿಡುಗಡೆ ಮಾಡಿರುವುದು ಸೂಕ್ತವಾಗಿದೆ. ಇದರಿಂದ ನಾಡಿನ ಜನಸಾಮಾನ್ಯರು ತಮಗೆ ಚೆನ್ನಾಗಿ ಅರ್ಥವಾಗುವ ಸ್ಥಳೀಯ ಭಾಷೆಯಲ್ಲಿ ಪುಸ್ತಕಗಳನ್ನು ಓದಿ, ಕಾನೂನಿನ ಜ್ಞಾನ ಹೊಂದಲು ಸಾಧ್ಯವಾಗುತ್ತದೆ. ಇದುವರೆಗೆ ಭಾರತೀಯ ದಂಡ ಸಂಹಿತೆ (ಐಪಿಸಿ), ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಮತ್ತು ಭಾರತ ಸಾಕ್ಷ್ಯ ಅಧಿನಿಯಮಕ್ಕೆ ಸಂಬಂಧಿಸಿದ ಕಾನೂನಿನ ಬಹುತೇಕ ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿದ್ದವು. ಮೇಲಾಗಿ, ರಾಜ್ಯದ ಕೆಲವು ಜಲವಿವಾದ, ಅಂತರರಾಜ್ಯ ನ್ಯಾಯಮಂಡಳಿಯ ತೀರ್ಪುಗಳು, ವರದಿಗಳು ಸಹ ಕನ್ನಡಕ್ಕೆ ತರ್ಜುಮೆಗೊಂಡಿರುವುದು ಅತ್ಯಂತ ಸಮಂಜಸವಾಗಿದೆ.

ಈ ಪುಸ್ತಕಗಳು ರಾಜ್ಯದ ಎಲ್ಲ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಓದಲು ಲಭ್ಯವಾಗಬೇಕು. ಸರ್ಕಾರವು ಈ ಕಾನೂನು ಸಂಹಿತೆಗಳ ಕನ್ನಡ ಆವೃತ್ತಿಗಳನ್ನು ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಲಭ್ಯವಾಗುವಂತೆ ಮಾಡುವುದು ಸೂಕ್ತ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಯುವಪೀಳಿಗೆಯ ಪಾತ್ರ ಹಿರಿದು

ಜಾತೀಯತೆಯ ರೋಗ ಇನ್ನೂ ವಾಸಿಯಾಗಿಲ್ಲ ಎಂಬುದನ್ನು ರಾಜಸ್ಥಾನದಲ್ಲಿ ಶಾಲಾ ಶಿಕ್ಷಕರೊಬ್ಬರ ಅಮಾನವೀಯ ಕೃತ್ಯ ಮತ್ತೊಮ್ಮೆ ನಿರೂಪಿಸಿದೆ. ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕಾದ, ತಿಳಿವಳಿಕೆ ಇಲ್ಲದವರಿಗೆ ತಿಳಿಸಿಹೇಳಿ ಅವರನ್ನು ತಿದ್ದಬೇಕಾದ ಶಿಕ್ಷಕರೇ ಜಾತಿಯ ರೋಗ ಅಂಟಿಸಿಕೊಂಡರೆ ಅವರ ಬಳಿ ಕಲಿಯುವ ಮಕ್ಕಳ ಪಾಡು ಹೇಗಿರಬಹುದು? ಹೊರನೋಟಕ್ಕೆ ಆಧುನಿಕರಂತೆ ಕಾಣುತ್ತೇವೆ. ಒಳಗೆ ಅದೇ ಕೊಳಕು ಮನಃಸ್ಥಿತಿ. ಬರೀ ಕಾನೂನಿನ ಮೂಲಕ ಈ ಪಿಡುಗನ್ನು ನಿವಾರಿಸಲಾಗದು. ಇದನ್ನು ತೊಲಗಿಸಲು ದೊಡ್ಡ ಮಟ್ಟದಲ್ಲಿ ಸಾಮಾಜಿಕ ಆಂದೋಲನವೇ ಆಗಬೇಕಾಗಿದೆ. ಯುವ ಪೀಳಿಗೆಯ ಪಾತ್ರ ಅದರಲ್ಲಿ ಬಹಳ ಮುಖ್ಯವಾದುದು. ಈ ಬಗೆಯ ಅನಿಷ್ಟಗಳನ್ನು ಹೋಗಲಾಡಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು.

ಡಿ. ಪ್ರಸನ್ನಕುಮಾರ್, ಬೆಂಗಳೂರು

ಕುವೆಂಪು ಕವನದ ಉಲ್ಲೇಖ: ಹೆಮ್ಮೆಯ ಸಂಗತಿ

ಭವ್ಯ ಭಾರತದ ನಿರ್ಮಾಣದಲ್ಲಿ ದೇಶದ ಯುವಪೀಳಿಗೆಯು ಕುವೆಂಪು ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವಾತಂತ್ರ್ಯೋತ್ಸವದ ಮುನ್ನಾದಿನ ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಕರೆ ಕೊಟ್ಟಿದ್ದಾರೆ. ಕುವೆಂಪು ಅವರ ಕವನದ ಸಾಲುಗಳನ್ನೂ ಉಲ್ಲೇಖಿಸಿದ್ದಾರೆ. ಕನ್ನಡಿಗರಾದ ನಮಗೆ ಇದು ಹೆಮ್ಮೆಯ ಸಂಗತಿ. ಕುವೆಂಪು ಅವರ ಆದರ್ಶಗಳು ಎಲ್ಲ ಕಾಲಕ್ಕೂ ಪ್ರಸ್ತುತ. ಅವುಗಳನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ.

ನಂಜನಹಳ್ಳಿ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಂಜು ಕವಿದ ಘಟ್ಟಗಳಲ್ಲಿ ವಿವೇಕ ಮಾರ್ಗ

• ನಾಗೇಶ ಹೆಗಡೆ





‘ಮನುಷ್ಯನಿರ್ಮಿತ ಏನನ್ನೇ ಯಾರಾದರೂ ಹಾಳುಗೆಡವಿದರೆ ನಾವದನ್ನು ‘ವಿಧ್ವಂಸಕ ಕೃತ್ಯ’ ಎನ್ನುತ್ತೇವೆ. ನಿಸರ್ಗನಿರ್ಮಿತ ಏನೆಲ್ಲವನ್ನು ನಾವು ಹಾಳುಗೆಡವಿ ಅದಕ್ಕೆ ‘ಅಭಿವೃದ್ಧಿ’ ಎನ್ನುತ್ತೇವೆ’- ಹೀಗೆಂದು ಅಮೆರಿಕದ ನಿಸರ್ಗ ಚಿಂತಕ ಜೋಸೆಫ್ ವುಡ್‌ಕ್ರಚ್ ಹೇಳಿದ್ದ. ಲಂಗುಲಗಾಮಿಲ್ಲದ ಅಭಿವೃದ್ಧಿಯ ದಾಂಗುಡಿಯ ಕುರಿತು ಆತ ಇನ್ನೂ ಒಂದು ಮಾತನ್ನು ಹೇಳುತ್ತಾನೆ: ‘ಭಾರೀ ವೇಗದಲ್ಲಿ ಕಾರಿನ ಚಾಲನೆ ಮಾಡುತ್ತಿದ್ದರೆ ನೀವು ಏನನ್ನೂ ಚಿಂತನ ಮಂಥನ ಮಾಡಲಾರಿರಿ; ನಿಮ್ಮ ಗಮನವೆಲ್ಲ ಆ ರೋಚಕತೆಯನ್ನು ಸಂಭಾಳಿಸುವುದರಲ್ಲೇ ಕಳೆದು ಹೋಗುತ್ತದೆ’ ಅಂತ.

ತಂತ್ರಜ್ಞಾನದ ರೋಚಕತೆಯನ್ನು, ಅಭಿವೃದ್ಧಿಯ ಉನ್ಮಾದವನ್ನು ಜನಸಾಮಾನ್ಯರಿಗೆ ತೋರಿಸುತ್ತಲೇ ನಮ್ಮ ಬಹುಪಾಲು ಜನಪ್ರತಿನಿಧಿಗಳು ಮತ್ತು ಕಾರ್ಪೊರೇಟ್ ಶಕ್ತಿಗಳು ಎಲ್ಲರ ಭವಿಷ್ಯವನ್ನು ಡೋಲಾಯಮಾನ ಸ್ಥಿತಿಯತ್ತ ತಳ್ಳುತ್ತಿರುವಂತೆ ಕಾಣುತ್ತಿದೆ. ಚಿಂತನೆಗೆ ಅವಕಾಶವೇ ಇಲ್ಲದ, ಏಕಾಂತಕ್ಕೆ ತಾಣವೇ ಇಲ್ಲದಂಥ ಸಮಾಜವೊಂದು ನಮ್ಮ ಕಣ್ಣೆದುರೇ ಸೃಷ್ಟಿಯಾಗುತ್ತಿದೆ.

ಪಶ್ಚಿಮಘಟ್ಟಗಳನ್ನು ನಾವೆಲ್ಲ ಬರಿಗಣ್ಣಲ್ಲಿ, ಅದೂ ಟಾರ್ ರಸ್ತೆಯ ಆಚೀಚೆ ಕಂಡಷ್ಟೆ ನೋಡುತ್ತೇವೆ. ಅದನ್ನು ನೋಡಲು ಕಣ್ಣಷ್ಟೇ ಸಾಲದು, ಕೈಕಾಲು ಗಟ್ಟಿ ಇರಬೇಕು, ಪಂಚೇಂದ್ರಿಯಗಳು ಚುರುಕಾಗಿರಬೇಕು. ಜೊತೆಗೆ ಬೈನಾಕ್ಯುಲರೂ ಬೇಕು, ಭೂತಗನ್ನಡಿ, ಸೂಕ್ಷ್ಮದರ್ಶಕವೂ ಬೇಕು. ಮೇಲಾಗಿ, ಉಪಗ್ರಹಗಳ ಸಿಂಹಾವಲೋಕನವೂ ಬೇಕು, ಅವೆಲ್ಲಕ್ಕಿಂತ ಮುಖ್ಯವಾಗಿ ನಿನ್ನೆ ನಾಳೆಗಳ ಸಮಗ್ರ ನೋಟ ಬೇಕು. ಈ ಘಟ್ಟಪ್ರದೇಶಗಳ 320 ಕೋಟಿ ವರ್ಷಗಳ ವಿಕಾಸಯಾತ್ರೆಯಲ್ಲಿ ಈಚೆಗಷ್ಟೇ ಎಂಟ್ರಿ ಪಡೆದ ಮನುಷ್ಯನಿಗೆ ತನ್ನ ಪಾತ್ರ ಏನು ಎಂಬುದರ ಪರಿಜ್ಞಾನ ಬೇಕು. ಇಡೀ ಪೃಥ್ವಿಯ ಜೀವಮಂಡಲದಲ್ಲಿ ಈ ಘಟ್ಟಸಾಲಿನ ಪಾತ್ರ ಏನು ಎಂಬುದೂ ಗೊತ್ತಿರಬೇಕು.

ಅವೆಲ್ಲ ಗೊತ್ತಿದ್ದ ಕೆಲವೇ ತಜ್ಞರಿಂದಾಗಿ, ವಿವೇಕವಂತರಿಂದಾಗಿ ಈ ಘಟ್ಟಸಾಲು ಈಗಲೂ ಅಷ್ಟಿಷ್ಟು ಉಳಿದುಕೊಂಡಿದೆ. 1970ರಲ್ಲಿ ಕೇರಳ ಸರ್ಕಾರ ಅಲ್ಲಿನ ಸೈಲೆಂಟ್ ವ್ಯಾಲಿಯನ್ನೇ ಮುಳುಗಿಸಿ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಹಾಕಿತು. ಅಲ್ಲಿ ‘ಅಭಿವೃದ್ಧಿಯ ಹಸ್ತಕ್ಷೇಪ ಕೂಡದು’ ಎಂದು ನಿಸರ್ಗತಜ್ಞ ಝಫರ್ ಫುತೇಹಲಿ ವರದಿ ಸಲ್ಲಿಸಿದರು. ಸರ್ಕಾರ ಅದನ್ನು ಕಡೆಗಣಿಸಿ ಅಣೆಕಟ್ಟು ಕಟ್ಟಲು ಹೊರಟಾಗ ಜನಸಾಮಾನ್ಯರು ಬೀದಿಗಿಳಿದರು. ಪ್ರಧಾನಿಯವರ ವಿಜ್ಞಾನ ಸಲಹಾಕಾರರಾಗಿದ್ದ ಡಾ. ಎಮ್‌ಜಿಕೆ ಮೆನನ್‌ಗೆ ಜನಾಕ್ರೋಶದ ಬಿಸಿ ತಲುಪಿತು. ಅವರು ಇಂದಿರಾಗಾಂಧಿಯವರಿಗೆ ಆ ಮೌನ ಕಣಿವೆಯ ಮಹತ್ವವನ್ನು ತಿಳಿಸಿದರು. ಅದೇತಾನೆ 1972ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ಪ್ರಥಮ ವಿಶ್ವ ಪರಿಸರ ಸಮ್ಮೇಳನದಲ್ಲಿ ತಜ್ಞರ ಉಪನ್ಯಾಸಗಳನ್ನು ಆಲಿಸಿ ಬಂದಿದ್ದ ಇಂದಿರಾ ಗಾಂಧಿಯವರು ಮೆನನ್ ಸಲಹೆಯ ಪ್ರಕಾರ ‘ಸೈಲೆಂಟ್ ವ್ಯಾಲಿ’ಯನ್ನು ಸಂರಕ್ಷಣಾ ವಲಯವನ್ನಾಗಿ ಘೋಷಿಸಿದರು. ಹೀಗೆ, ಕೇರಳದ ‘ಮೌನ ಕಣಿವೆ’ ಇಂದಿಗೂ ಇಡಿಯಾಗಿ ಉಳಿಯುವಲ್ಲಿ ಇಡೀ ಜಗತ್ತಿನ ವಿವೇಕವೇ ಒಂದಾಗಿತ್ತು.

ಐವತ್ತು ವರ್ಷಗಳ ಹಿಂದೆ ಕರ್ನಾಟಕದಲ್ಲೂ ಅಂಥ ವಿವೇಕ ಅಲ್ಲಲ್ಲಿ ಜಾಗೃತವಾಗಿತ್ತು. ಅರಣ್ಯ ಪರಿಸರದ ಜಾಗತಿಕ ಮಹತ್ವ ಗೊತ್ತಾಗುತ್ತಿದ್ದಂತೆ ಒಂದರಮೇಲೊಂದರಂತೆ ಹತ್ತಾರು ಸಂರಕ್ಷಣಾ ವಲಯಗಳು, ಜೀವಧಾಮಗಳು, ರಕ್ಷಿತಾರಣ್ಯಗಳು ಘೋಷಣೆಯಾದವು. ಆಮೇಲೆ 80ರ ದಶಕದಲ್ಲಿ ಕಾಳಿ, ಬೇಡ್ತಿ, ಶರಾವತಿ ಕಣಿವೆಗಳಲ್ಲಿ ಅಭಿವೃದ್ಧಿಯ ರಣಕಹಳೆ ಮೊಳಗತೊಡಗಿದಾಗ ಪರಿಸರವಾದ ಮುನ್ನೆಲೆಗೆ ಬಂತು; ಪ್ರತಿಭಟನೆಗಳು ನಡೆದವು. ತೊಂಬತ್ತರ ದಶಕದಲ್ಲಿ ಜಾಗತೀಕರಣದ ಸುನಾಮಿಯಲ್ಲಿ ಎಲ್ಲ ಬಗೆಯ ಜನಪರ ಚಳವಳಿಗಳ ದನಿ ಉಡುಗಿ, ಭೋಗಭಾಗ್ಯಗಳ ಹೆಬ್ಬಾಗಿಲು ಎಲ್ಲೆಲ್ಲೂ ತೆರೆದುಕೊಂಡಿತು. ಜೆಸಿಬಿಗಳ ಸಾಲುಸಾಲುಗಳೇ ಘಟ್ಟಪ್ರದೇಶದ ಕಾಡುಕೊಳ್ಳಗಳಿಗೆ ನುಗ್ಗಿದವು. ಡೈನಮೈಟ್, ವಿದ್ಯುತ್ ಗರಗಸ, ಡ್ರಿಲ್ಲಿಂಗ್ ಯಂತ್ರಗಳ ಗದ್ದಲದಲ್ಲಿ ಶಿವರಾಮ ಕಾರಂತ, ಕುಸುಮಾ ಸೊರಬ, ಕೆ.ವಿ. ಸುಬ್ಬಣ್ಣ, ಸೆಸಿಲ್ ಸಾಲ್ಡಾನ್ಹಾ, ತೇಜಸ್ವಿ, ಯೆಲ್ಲಪ್ಪ ರೆಡ್ಡಿಯಂಥವರ ವಿವೇಕದ ಸದ್ದಡಗಿತು.

ಅಭಿವೃದ್ಧಿಯ ಬಿಸಿಶಾಖ ಇಡೀ ಭೂಮಿಗೇ ವಿಸ್ತರಿಸಿದಾಗ ಕಳೆದ ದಶಕದಲ್ಲಿ ವಿಜ್ಞಾನಿಗಳೇ ದನಿಯೆತ್ತಿದರು. ‘ಅತಿಮಾನವ ಯುಗ ಆರಂಭವಾಗಿದೆ’ ಎಂದರು. ನಾವೆಲ್ಲ ಸೇರಿ ಭೂಮಿಯನ್ನು ಆರನೇ ಮಹಾನಾಶದ ಅಂಚಿಗೆ ತಂದಿದ್ದೇವೆ ಎಂದರು. ಬರುತ್ತಿರುವ ಝಳಪ್ರಳಯದಲ್ಲಿ ಭೂಗ್ರಹಕ್ಕೆ ಅದೇನೇ ವಿಪತ್ತು ಬಂದರೂ ರಿಪೇರಿ ಮಾಡಿಕೊಳ್ಳುವ ಸಾಮರ್ಥ್ಯ ಮಳೆಕಾಡುಗಳ ಸಂಕೀರ್ಣ ಜೀವಮಂಡಲಕ್ಕಿದೆ, ‘ಅದನ್ನು ಉಳಿಸಿಕೊಳ್ಳಬೇಕು’ ಎಂದರು.

ಕೇಳುವ ವ್ಯವಧಾನ ಯಾರಿಗಿದೆ? ನಿಸರ್ಗದ ಪರವಾಗಿ ವಕಾಲತ್ತು ಮಾಡುವವರು ಯಾರು? ತೇಜಸ್ವಿ ಹಿಂದೊಮ್ಮೆ ಹೇಳಿದ ಹಾಗೆ, ಕಾಡಿನ ಈ ಮೂಕಜೀವಿಗಳಿಗೆ ವೋಟ್ ಹಾಕುವ ಹಕ್ಕು ಇದ್ದಿದ್ದರೆ ಚಿತ್ರಣವೇ ಬೇರೆ ಇರುತ್ತಿತ್ತು. ಅವಕ್ಕಂತೂ ಉಸಿರೆತ್ತುವ ಸ್ವಾತಂತ್ರ್ಯವಿಲ್ಲ; ನಾಳಿನ ಜಗತ್ತನ್ನು ನಿಭಾಯಿಸಬೇಕಾದ ಎಳೆ ಮಕ್ಕಳೂ ಮತ ಹಾಕುವಂತಿಲ್ಲ. ‘ಇರುವುದೊಂದೇ ಭೂಮಿ’ ಎಂಬ ಘೋಷಣೆ ಹೊಮ್ಮಿದ 50ನೇ ವರ್ಷದ ಸಂದರ್ಭದಲ್ಲಿ ಅದೇ ಸ್ಟಾಕ್‌ಹೋಮ್‌ನಲ್ಲಿ ಮೊನ್ನೆ ಜೂನ್ 5ರಂದು ಮತ್ತೊಮ್ಮೆ ಅದೇ ಘೋಷಣೆ ಹೊಮ್ಮಿತು. ಈ ಅರ್ಧ ಶತಮಾನದಲ್ಲಿ ಜಗತ್ತಿನಲ್ಲಿ ನಿಸರ್ಗಜೀವಿಗಳ ಸಂಖ್ಯೆ ಡೇಂಜರಸ್ಲೀ ಡಿಕ್ಲೈನಿಂಗ್ (ಕಮ್ಮಿಯಾಗುತ್ತಿದೆ) ಎಂದು ತಜ್ಞರು ವರದಿ ಕೊಟ್ಟರು. ಪ್ರತಿಷ್ಠಿತ 17 ಸಂಶೋಧನ ಸಂಸ್ಥೆಗಳು ಜಂಟಿ ಹೇಳಿಕೆ ನೀಡಿ, ‘ನಾಳಿನವರಿಗಾಗಿ ನಾವೆಲ್ಲ ಉತ್ತಮ ಪೂರ್ವಜರಾಗೋಣ’ ಎಂದರು.

> ಅಭಿವೃದ್ಧಿಯ ಬಿಸಿಶಾಖ ಇಡೀ ಭೂಮಿಗೇ ವಿಸ್ತರಿಸಿದಾಗ ಕಳೆದ ದಶಕದಲ್ಲಿ ವಿಜ್ಞಾನಿಗಳೇ ದನಿಯೆತ್ತಿದರು. ‘ಅತಿಮಾನವ ಯುಗ ಆರಂಭವಾಗಿದೆ’ ಎಂದರು. ನಾವೆಲ್ಲ ಸೇರಿ ಭೂಮಿಯನ್ನು ಆರನೇ ಮಹಾನಾಶದ ಅಂಚಿಗೆ ತಂದಿದ್ದೇವೆ ಎಂದರು. ಬರುತ್ತಿರುವ ಝಳಪ್ರಳಯದಲ್ಲಿ ಭೂಗ್ರಹಕ್ಕೆ ಅದೇನೇ ವಿಪತ್ತು ಬಂದರೂ ರಿಪೇರಿ ಮಾಡಿಕೊಳ್ಳುವ ಸಾಮರ್ಥ್ಯ ಮಳೆಕಾಡುಗಳ ಸಂಕೀರ್ಣ ಜೀವಮಂಡಲಕ್ಕಿದೆ, ‘ಅದನ್ನು ಉಳಿಸಿಕೊಳ್ಳಬೇಕು’ ಎಂದರು. ಕೇಳುವ ವ್ಯವಧಾನ ಯಾರಿಗಿದೆ? ನಿಸರ್ಗದ ಪರವಾಗಿ ವಕಾಲತ್ತು ಮಾಡುವವರು ಯಾರು?

ಪಶ್ಚಿಮಘಟ್ಟಗಳಲ್ಲಿ ಇನ್ನಷ್ಟು ಅಭಿವೃದ್ಧಿ ಬೇಕೆನ್ನುವವರು, ‘ಹತ್ತಾರು ರಕ್ಷಿತಾರಣ್ಯಗಳು ನಮ್ಮಲ್ಲಿವೆ, ಅದು ಸಾಲದೆ?’ ಎನ್ನುತ್ತಾರೆ. ಊಜಿನೊಣದ ಉದಾಹರಣೆ ನಮಗಿಲ್ಲಿ ನೆನಪಾಗಬೇಕು: ರೇಷ್ಮೆಹುಳದ ದೇಹವನ್ನು ಊಜಿನೊಣದ ಲಾರ್ವಾ ಒಳಗಿಂದೊಳಗೇ ತಿನ್ನುತ್ತ ಹೋಗುತ್ತದೆ. ಆದರೆ ಹೃದಯ, ಶ್ವಾಸಕೋಶ, ಕಣ್ಣು, ಮಿದುಳು ಮುಂತಾದ ಮಹತ್ವದ ಅಂಗಗಳನ್ನು ಕೊನೆಗೆ ತಿನ್ನಲೆಂದು ಉಳಿಸಿಕೊಂಡಿರುತ್ತದೆ. ಆಶ್ರಯ ಕೊಟ್ಟ ಜೀವಿ ಸಾಯಬಾರದಲ್ಲ! ನಮ್ಮ ರಕ್ಷಿತಾರಣ್ಯಗಳು ಮುಖ್ಯ, ಹೌದು. ಆದರೆ ಅದರಾಚೆಗೂ ಏನೆಲ್ಲ ಜೀವಸಮೃದ್ಧಿ ಇವೆ. ಶೋಲಾ ಕಾಡುಗಳಿವೆ, ಸೊಪ್ಪಿನ ಬೆಟ್ಟ, ಕುಮ್ಕಿ, ಬಾಣೆಗಳಿವೆ. ಪ್ರಪಾತಗಳಿವೆ, ಜಲಪಾತದ ತುಂತುರುಗಳಲ್ಲಿ ಮಾತ್ರ ಜೀವಿಸಬಲ್ಲ ಕೀಟಭಕ್ಷಕ ಸಸ್ಯಗಳಿವೆ. ಅದರ ಬಗ್ಗೆ ಗೊತ್ತಿಲ್ಲದ ಎಂಜಿನಿಯರ್‌ಗಳು ನದಿ ತಿರುವಿನ ಯೋಜನೆ ಹಾಕುತ್ತಾರೆ. ಜೀವ ಜಗತ್ತಿನಲ್ಲೇ ಅನನ್ಯವೆನಿಸಿದ ಡಾನ್ಸಿಂಗ್ ಕಪ್ಪೆಗಳು ಹಳ್ಳದ ಕೊರಕಲುಗಳಲ್ಲಿವೆ ಎಂಬುದು ಗೊತ್ತೇ ಇಲ್ಲದೆ ಮರಳು ಮಾಫಿಯಾಗಳು ಲಗ್ಗೆ ಹಾಕುತ್ತಾರೆ. ಕೋಟಿವರ್ಷಗಳ ಹಿಂದಿನ ‘ರಾಂಪತ್ರೆ ಜಡ್ಡಿ’ಗಳಲ್ಲಿ ಬೇರುಗಳ ಮೂಲಕ ಉಸಿರಾಡುವ ವೃಕ್ಷಗಳಿವೆ; ಮೊಟ್ಟೆಗೆ ಮಣ್ಣುಮೆತ್ತಿ ಕಾವು ಕೊಡುವ ವಿಶಿಷ್ಟ ಕುಂಬಾರ ಕಪ್ಪೆಗಳು ವಾಸಿಸುತ್ತವೆ. ಅದರ ಜಾಗತಿಕ ಮಹತ್ವ ಗೊತ್ತೇ ಇಲ್ಲದವರು ಅತಿಕ್ರಮ ಸಾಗುವಳಿಗೆಂದು ಗಿಡಮರ ಸವರುತ್ತಾರೆ. ಕೃಷಿ ವಿಸ್ತರಣೆಗೆಂದು ಬೆಂಕಿ ಇಡುತ್ತಾರೆ. ರಕ್ಷಿತ ಅರಣ್ಯದಲ್ಲಿ ಇಲ್ಲದ ಅವೆಷ್ಟೊ ಕಿರುಜೀವಿಗಳು, ಪಕ್ಷಿಪ್ರಾಣಿಗಳು ಅದರಾಚಿನ ಹುಲ್ಲು ಮೈದಾನದಲ್ಲಿ, ಬೇಣದ ಪೊದೆ-ಪೊಟರೆಗಳಲ್ಲಿ ಇವೆ. ನಾಳಿನ ಜಗತ್ತಿಗೆ ವಿಮೆಯಾಗಬಲ್ಲ ಗಿಡಮೂಲಿಕೆಗಳಿವೆ. ಬೋಳುಬೆಟ್ಟಗಳಲ್ಲಿ ಕುರಿಂಜಿ ಹೂ ಅರಳಿದಾಗ ಇಡೀ ಜೀವಜಾಲವೇ ಮೈಮುರಿದೆದ್ದು ಸಂಭ್ರಮಿಸುವ ಚಮತ್ಕಾರವನ್ನು ನಾವು ನೋಡಿದ್ದೇವೆ. ಕಾಡಂಚಿನ ಕಣಿವೆಗಳ ಕೃಷಿಕರು ಬಯೊಟೆಕ್ ಕಂಪನಿಗಳ ನಿಯೊನಿಕೊಟಿನೈಡ್ ವಿಷವನ್ನೊ, ಕಳೆನಾಶಕ ಗ್ಲೈಫೊಸೇಟನ್ನೊ ಸಿಂಪಡಿಸಿದಾಗ ದುಂಬಿ, ಜೇನ್ನೊಣಗಳು ಸಾಯುತ್ತವೆ. ಇವು ಅರಣ್ಯಕ್ಕೆ ಮರಳಿ ಬಾರದಿದ್ದರೆ ಅರಣ್ಯದ ಒಣಮರಗಳಲ್ಲಿ ಅರಳಬೇಕಿದ್ದ ಆರ್ಕಿಡ್‌ಗಳು ಪರಾಗಸ್ಪರ್ಶವಿಲ್ಲದೆ ನಶಿಸುತ್ತವೆ. ದಟ್ಟಕಾಡನ್ನು ಸೀಳಿ ಹೆದ್ದಾರಿಯನ್ನು ನಿರ್ಮಿಸಿ, ಅಗಲಿಸುತ್ತ ಹೋದರೆ ಅದು ಆನೆಯ ಪಾದಕ್ಕೆ ನಾಟಿದ ಸೂಜಿಯಂತಾಗುತ್ತದೆ. ದಿನದಿನಕ್ಕೂ ಹೆಚ್ಚುವ ನೋವು, ಕೀವು, ವ್ರಣದ ಆ ಆಕ್ರಂದನ ನಮಗೆ ಕೇಳಿಸಲಾರದು. ಶರಾವತಿ ಕೊಳ್ಳದ ಸಿಂಗಳೀಕಗಳು ಬಿಸ್ಕಿಟ್, ಕುರ್ಕುರೆಯ ಭಿಕ್ಷೆಗಾಗಿ ಹೆದ್ದಾರಿಗೆ ಜಿಗಿಯುತ್ತ ವಿದ್ಯುತ್ ತಂತಿಗೊ, ವೇಗದ ಚಕ್ರಕ್ಕೊ ಸಿಕ್ಕು ಸತ್ತಾಗ ನಾವು ಕ್ಲಿಕ್ ಮಾಡಿ ಅವರಿವರಲ್ಲಿ ಹಂಚಿಕೊಳ್ಳುವಲ್ಲಿಗೆ ನಮ್ಮ ಸಂವೇದನೆ ಮುಗಿಯುತ್ತದೆ.

ಈ ಯಾವುದನ್ನೂ ತಲೆಗೆ ಹಚ್ಚಿಕೊಳ್ಳದೆ, ‘ಅರಣ್ಯ ನಮಗೆ ಬೇಕಾಗಿಲ್ಲ’ ಎನ್ನುವ ಜನಪ್ರತಿನಿಧಿಗಳನ್ನೂ ನಾವು ನೋಡಿದ್ದೇವೆ. (‘ಗಿಡಮರಗಳನ್ನೆಲ್ಲ ಕಡಿದು ಹಾಕಿ ಸಾಗುವಳಿ ಮಾಡಿ! ಹುಟ್ಟಿದ ಮೇಲೆ ನಾವು ಹೊಟ್ಟೆಗೆ ಅನ್ನ ತಿಂತೇವೆ ವಿನಾ ಅರಣ್ಯ ತಿನ್ನೋದಿಲ್ಲ’ ಎಂದು ಹಿರಿಯ ಶಾಸಕರೊಬ್ಬರು ಹೇಳಿದ್ದು ಪ್ರಜಾವಾಣಿಯ ಮುಖಪುಟದಲ್ಲಿ 2017ರ ಮೇ 9ರಂದು ಪ್ರಕಟವಾಗಿತ್ತು). ಅಂಥ ಘಂಟಾಘೋಷವನ್ನೇನೂ ಮಾಡದೆ, ಕಡತಗಳ ಮೂಲಕವೇ ಡೀಮ್ಡ್ (ಡೂಮ್ಡ್?) ಅರಣ್ಯಗಳ ತಲೆಕಡಿತ ಮಾಡಿಸಬಲ್ಲ ಚಾಣಾಕ್ಷರೂ ಇದ್ದಾರೆ; ಗ್ರಾನೈಟ್ ಗಣಿಸ್ಫೋಟಕ್ಕೆ ಲೈಸೆನ್ಸ್ ಕೊಡಿಸುವ ದಲ್ಲಾಳಿಗಳೂ ಇದ್ದಾರೆ.

ಅಂಥವರೆಲ್ಲ ಕೈಕೈ ಜೋಡಿಸಿ ನಿಂತು ಗಾಡ್ಗೀಳ್ ವರದಿ, ಕಸ್ತೂರಿರಂಗನ್ ವರದಿ ಬೇಡ ಎನ್ನುತ್ತಿದ್ದಾರೆ ವಿನಾ ಬದಲಿಯಾಗಿ ಬೇರೇನನ್ನೂ ತೋರಿಸುತ್ತಿಲ್ಲ. ಕೋಸ್ಟಾರೀಕಾ ದೇಶದ ಮಾದರಿ ನಮ್ಮಲ್ಲೂ ಬರಬೇಕೆಂದು ಸೂಚಿಸಿದಿರೊ, ಅಲ್ಲಿಗೆ ದೌಡಾಯಿಸಲು ಇದೇ ಪೀಠಸ್ಥರ ದಂಡೇ ತಯಾರಾಗುತ್ತದೆ. ಹೋಗಲಿ, ಆದರೆ ಅದಕ್ಕೂ ಮೊದಲು ಮಾಡಬೇಕಾದ ಕೆಲ ಕೆಲಸಗಳಿವೆ. ನಮ್ಮ ಘಟ್ಟಸೀಮೆಯಲ್ಲೇ ಸುಸ್ಥಿರ ಬದುಕಿನ ನೂರಾರು ಮಾದರಿಗಳಿವೆ. ಗಾಡ್ಗೀಳ್ ಸಮಿತಿಯ ಆಶಯಗಳನ್ನು ಎಂದೋ ಜಾರಿಗೆ ತಂದ ಗ್ರಾಮೀಣ ಸಂಘಸಂಸ್ಥೆಗಳಿವೆ. ಪರಿಸರ ಸಂವರ್ಧನೆಯಲ್ಲೇ ಬದುಕಿನ ಸುಸ್ಥಿರತೆಯನ್ನು ಕಂಡುಕೊಂಡ ಅಂಥ ಮಾದರಿಗಳನ್ನು ಘಟ್ಟಪ್ರದೇಶದ ಇತರ ಪಂಚಾಯತ್‌ಗಳಿಗೂ ಪರಿಚಯಿಸಬೇಕಿದೆ. ಘಟ್ಟಪ್ರದೇಶದ ಪ್ರತಿ ಶಾಲಾಮಕ್ಕಳಿಗೂ ಅವರದೇ ಪರಿಸರದ ಮಹತ್ವವನ್ನು ತಿಳಿಸುವಂಥ ಪಠ್ಯಗಳ ಸೇರ್ಪಡೆಯಾಗಬೇಕಿದೆ. ನಿಸರ್ಗದ ಗರ್ಭಗುಡಿಯಲ್ಲೇ ಹಣ ಹೂಡಬಯಸುವವರಿಗೆ ಗರ್ಭಗುಡಿಯ ನಿಯಮಗಳನ್ನು ಮನದಟ್ಟು ಮಾಡಿಕೊಡಬೇಕಿದೆ.

ಅಭಿವೃದ್ಧಿಯ ಲಾಂಛನವೆನಿಸಿದ ಜೆಸಿಬಿಯೇ ಕಂದಕಕ್ಕೆ ಉರುಳಿ ಭೂಗತವಾದ ಉದಾಹರಣೆಯನ್ನು ನಾವು ಈಚಿನ ಜಡಿಮಳೆಯಲ್ಲಿ ನೋಡಿದ್ದೇವೆ. ‘ಇದು ಪರಿಸರ ಸೂಕ್ಷ್ಮ ಪ್ರದೇಶ: ಹುಷಾರಾಗಿ ಹೆಜ್ಜೆ ಇಡಿ’ ಎಂದು ಪ್ರಕೃತಿ ದನಿಯೆತ್ತಿ ಹೇಳಿದಂತಿದೆ. ಅದನ್ನು ಕೇಳಿಸಿಕೊಂಡು ಮುಂದಡಿ ಇಡುವ ವಿವೇಕ ನಮ್ಮದಾಗಬೇಕಿದೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 200

ಹೆತ್ತವರ ಮುದ್ದಾದ ಪಾರ್ವತಿ

ವಸಂತಋತುವಿನ ವೈಶಾಖಮಾಸದ, ನವಮಿಯ ಅರ್ಧರಾತ್ರಿಯಲ್ಲಿ, ಪುನರ್ವಸು ನಕ್ಷತ್ರದಲ್ಲಿ ಜಗನ್ಮಾತೆ ಉಮಾದೇವಿಯು ಮೇನಾದೇವಿಯ ಗರ್ಭದಿಂದ ಜನಿಸಿದಳು. ಚಂದ್ರಮಂಡಲದಿಂದ ಗಂಗೆಯಂತೆ, ಸಾಗರದಿಂದ ಲಕ್ಷ್ಮಿಯಂತೆ ಉಮಾದೇವಿಯು ಧರೆಗೆ ಬಂದಳು. ಆ ಸಂದರ್ಭದಲ್ಲಿ ಜಗತ್ತೆಲ್ಲವೂ ಪ್ರಸನ್ನವಾಯಿತು. ಸುವಾಸನೆಯುಳ್ಳ ಗಾಳಿಯು ಮಂದವಾಗಿ ಬೀಸಿತು. ತಂಪಾಗಿ ಮಳೆ ಮತ್ತು ಪುಷ್ಪವೃಷ್ಟಿಯೂ ಆಯಿತು. ಅಗ್ನಿ ಶಾಂತವಾಗಿ ಜ್ವಲಿಸಿದರೆ, ಮೇಘಗಳು ಗಂಭೀರವಾಗಿ ಗರ್ಜಿಸಿದವು.

ದೇವತೆಗಳು ಹಿಮವಂತನ ಮನೆಗೆ ಬಂದರು. ಅವನ ಪುತ್ರಿಯಾಗಿ ಜನಿಸಿದ ಜಗದಂಬೆಯನ್ನು ನೋಡಿ ಭಕ್ತಿಯಿಂದ ‘ಜಗನ್ಮಾತೆಯಾದ ಓ ಮಹಾದೇವಿ! ನೀನು ಸಕಲ ಇಷ್ಟಾರ್ಥಗಳನ್ನೂ ಈಡೇರಿಸುವವಳು, ಸದಾ ದೇವತೆಗಳ ಕಾರ್ಯವನ್ನು ನಿರ್ವಹಿಸುವವಳು. ನಿನ್ನ ಭಕ್ತರಾದ ದೇವತೆಗಳಿಗೆ ಕ್ಷೇಮವನ್ನು ಉಂಟುಮಾಡಿರುವೆ. ಮೇನಾದೇವಿಯ ಮನೋರಥವನ್ನು ಪೂರ್ಣಗೊಳಿಸಿರುವೆ. ಅದರಂತೆ ಶಿವನ ಮನೋರಥವನ್ನೂ ಪೂರ್ಣಮಾಡು’ ಎಂದು ಸ್ತುತಿಸಿದರು.

ಮೇನಾದೇವಿಯು ಕನ್ನೈದಿಲೆಯಂತೆ ನೀಲಬಣ್ಣದ ಕಾಂತಿಯುಳ್ಳ ಪುತ್ರಿಯನ್ನು ನೋಡಿ, ‘ಜಗನ್ಮಾತೆಯಾದ ಓ ಮಹೇಶ್ವರಿ, ನನ್ನಲ್ಲಿ ಅನುಗ್ರಹವನ್ನು ಮಾಡಿ ನನ್ನೆದುರಿಗೆ ಆವಿರ್ಭವಿಸಿರುವೆ. ನೀನು ಆದಿಶಕ್ತಿಯು, ತ್ರಿಲೋಕಮಾತೆಯು. ಶಿವನ ಪ್ರಿಯಮಡದಿಯಾದ ನಿನ್ನನ್ನು ದೇವತೆಗಳೆಲ್ಲ ಸ್ತುತಿಸುವರು. ಓ ಪರಮೇಶ್ವರಿ, ಅನುಗ್ರಹವನ್ನು ಮಾಡು. ಈ ನಿನ್ನ ರೂಪವನ್ನು ಬಿಟ್ಟು ನನ್ನ ಪುತ್ರಿಗನುಸಾರವಾದ ರೂಪವನ್ನು ಧರಿಸು’ ಎಂದು ಪ್ರಾರ್ಥಿಸಿದಳು.

ಮೇನಾದೇವಿಯ ಮಾತನ್ನು ಕೇಳಿ ಪರಮೇಶ್ವರಿಯು ‘ಎಲೈ ಮೇನಾದೇವಿ, ಹಿಂದೆ ನೀನು ನನ್ನನ್ನು ಭಕ್ತಿಯಿಂದ ಆರಾಧಿಸಿ ವರವನ್ನು ಕೇಳಿದ್ದೆ. ಅದರಂತೆ ನಿನ್ನ ಪುತ್ರಿಯಾಗಿ ಜನಿಸಿರುವೆ. ನಾನು ಪರಮೇಶ್ವರಿ ಎಂದು ತಿಳಿಸಲು ಈ ದಿವ್ಯರೂಪವನ್ನು ಧರಿಸಿ ಪ್ರತ್ಯಕ್ಷಳಾಗಿರುವೆ. ಮುಂದೆ ನನ್ನನ್ನು ಪುತ್ರಿಯೆಂಬ ವಾತ್ಸಲ್ಯದಿಂದಲೂ, ದೇವಿ ಎಂಬ ಭಕ್ತಿಯಿಂದಲೂ ಸೇವಿಸಿರಿ. ಕೊನೆಯಲ್ಲಿ ನಿಮಗೆ ನನ್ನ ದಿವ್ಯಲೋಕವು ಲಭಿಸುವುದು. ನಿಮ್ಮ ಪುತ್ರಿಯಾಗಿ ಜನಿಸಿದ ನಾನು ದುಷ್ಟರನ್ನು ಶಿಕ್ಷಿಸುವೆ, ಶಿಷ್ಟರನ್ನು ಉದ್ಧರಿಸುವೆ’ ಎಂದಳು.

ಬಳಿಕ ಜಗನ್ಮಾತೆಯು ಶಿಶುವಿನ ಸ್ವರೂಪವನ್ನು ತಾಳಿದಳು. ಶಿಶುವಿನ ಅಳುವನ್ನು ಕೇಳಿ ಒಳಮನೆಯತ್ತ ಅರಮನೆಯ ಸ್ತ್ರೀಯರೆಲ್ಲರೂ ಓಡಿ ಬಂದರು. ಕಂಚುಕಿಯು ಹಿಮವಂತನಿಗೆ ಮಗುವಿನ ಜನ್ಮವಾಯಿತೆಂದು ತ್ವರೆಯಿಂದ ನಿವೇದಿಸಿದ. ಶುಭಸಮಾಚಾರವನ್ನು ತಿಳಿಸಿದ ಕಂಚುಕಿಗೆ ಹಿಮವಂತನು ಬೆಲೆಬಾಳುವ ವಸ್ತುಗಳನ್ನು ಬಹುಮಾನವಾಗಿ ಕೊಟ್ಟ. ನಂತರ ಪುರೋಹಿತರು, ಮಂತ್ರಿ ಮಹೋದಯರೊಡನೆ ಮಗು ನೋಡಲು ತೆರಳಿದ. ಮಹಾತೇಜಸ್ವಿನಿಯಾಗಿರುವ ಪುತ್ರಿಯನ್ನು ನೋಡಿ ತುಂಬಾ ಸಂತೋಷಗೊಂಡ.

ಶುಭವಾದೊಂದು ಮುಹೂರ್ತದಲ್ಲಿ ಹಿಮವಂತನು, ಆ ಶಿಶುವಿಗೆ ಕಾಳೀ, ತಾರಾ, ಮಹಾವಿದ್ಯಾ, ಷೋಡಶೀ, ಭುವನೇಶ್ವರಿ, ಭೈರವೀ, ಛಿನ್ನಮಸ್ತಾ, ಸದ್ಯಾ, ಧೂಮಾವತೀ, ಬಗಲಾಮುಖೀ, ಸಿದ್ಧಿವಿದ್ಯಾ, ಮಾತಂಗೀ, ಕಮಲಾತ್ಮಿಕಾ ಎಂಬ ಹಲವು ಹೆಸರುಗಳನ್ನು ಇಟ್ಟು ನಾಮಕರಣ ಮಾಡಿದ. ಹಿಮವಂತನ ಅರಮನೆಯಲ್ಲಿ ಸುಂದರಿಯಾದ ದೇವಿಯು, ಮಳೆಗಾಲದ ಗಂಗೆಯಂತೆಯೂ ಶರದೃತುವಿನ ಶುಕ್ಲಪಕ್ಷದ ಚಂದ್ರಕಲೆಯಂತೆಯೂ ದಿನದಿನವೂ ಬೆಳೆಯತೊಡಗಿದಳು. ಬಂಧುಗಳು ತಮ್ಮ ಪರ್ವತಕುಲಕ್ಕನುಸಾರವಾಗಿ ಮಗುವಿಗೆ ‘ಪಾರ್ವತೀ’ ಎಂದು ಕರೆದರು.

ಹಿಮವಂತನಿಗೆ ಅನೇಕ ಮಕ್ಕಳಿದ್ದರೂ ಪಾರ್ವತಿಯ ಮೇಲೆ ವಿಶೇಷವಾದ ಪ್ರೀತಿ ತೋರಿಸುತ್ತಿದ್ದ. ಪ್ರಭೆಯುಳ್ಳ ಶಿಖೆಯಿಂದ ದೀಪವು ಶೋಭಿಸುವಂತೆ ಪುಟ್ಟಪಾರ್ವತಿ ಕಂಗೊಳಿಸುತ್ತಿದ್ದಳು, ಬಾಲ್ಯಸಹಜ ಆಟಗಳಿಂದ ಎಲ್ಲರನ್ನು ಸಂತೋಷಪಡಿಸುತ್ತಿದ್ದಳು – ಎಂದು ಬ್ರಹ್ಮ ನಾರದನಿಗೆ ಹೇಳುವಲ್ಲಿಗೆ ಪಾರ್ವತೀಖಂಡದ ಏಳನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟ ಅಮೀರ್ ಖಾನ್ ನಟನೆಯ ‘ಲಾಲ್‌ಸಿಂಗ್ ಛಡ್ಡಾ’ ಚಿತ್ರಕ್ಕೆ ಪ್ರತಿಭಟನೆಯ ಬಿಸಿ ತಟ್ಟಿದೆ. ಚಿತ್ರವನ್ನು ಪ್ರದರ್ಶಿಸಬಾರದು ಎಂದು ಆಗ್ರಹಿಸಿ ಸಿಖ್ ತಾಲಮೇಲ್ ಸಂಘಟನೆ ಸದಸ್ಯರು ಪಂಜಾಬ್‌ನಲ್ಲಿ ಪ್ರತಿಭಟನೆ ನಡೆಸಿದ್ದಾರೆ ಎಂದು ಸೂಚಿಸುವ ಚಿತ್ರದ ಬಗ್ಗೆ ಸಾಮಾಜಿಕ ಜಾಲತಾಣ-ಗಳಲ್ಲಿ ಚರ್ಚೆಯಾಗುತ್ತಿದೆ. ‘ಭಾರತದಲ್ಲಿ ಇರಲು ಭಯವಾಗುತ್ತಿದೆ ಎಂದಿದ್ದ ಹಿಂದೂ ವಿರೋಧಿ ಅಮೀರ್ ಖಾನ್ ಚಿತ್ರವನ್ನು ನಿಷೇಧಿಸಬೇಕು’ ಎಂದು ಕೆಲವು ಜಾಲತಾಣ ಬಳಕೆದಾರರು ಆಗ್ರಹಿಸಿದ್ದಾರೆ.

ಚಿತ್ರದ ಮೂಲವನ್ನು ಪರಿಶೀಲನೆ ನಡೆಸಿದ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ವೇದಿಕೆ, ಈ ಪ್ರದರ್ಶನ ನಡೆದಿರುವುದು ಚಿತ್ರದ ಪರವಾಗಿ ಎಂದು ಮಾಹಿತಿ ನೀಡಿದೆ. ಜಲಂಧರ್‌ನಲ್ಲಿ ನಡೆದಿದ್ದ ಪ್ರದರ್ಶನದ ಬಗ್ಗೆ ಹಲವು ಪತ್ರಿಕೆಗಳು ಆಗಸ್ಟ್ 12ರಂದು ವರದಿ ಮಾಡಿದ್ದವು. ಸಿನಿಮಾ ಪ್ರದರ್ಶನ ವಿರೋಧಿಸಿರುವ ಸ್ಥಳೀಯ ಶಿವಸೇನಾ ಒತ್ತಡಕ್ಕೆ ಮಣಿಯಬಾರದು ಎಂದು ಆಗ್ರಹಿಸಿ ಸಂಘಟನೆ ಸದಸ್ಯರು ಪ್ರದರ್ಶನ ನಡೆಸಿದ್ದರು. ಆದರೆ, ಸಿನಿಮಾವನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಗಿದೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪರತತ್ವ ಸಂದರ್ಶನ

ಬಂಧನಗಳೆಲ್ಲವನು ದಾಟಿ, ಹೊಳೆ ನೆರೆ ನೀರು |
ಸಂಧಿಪುದು ಕಡಲ ನೀರ್ಗಳನ್; ಅಂತು ಜೀವನ್ ||
ಇಂದ್ರಿಯದ ಕಟ್ಟುಗಳ ಮೀರ್ದೀಕ್ಷೆಯೋಟದಿಂ|
ಸಂದರುಶಿಪನು – ಮಂಕುತಿಮ್ಮ || 694 ||

ಪದ-ಅರ್ಥ: ಬಂಧನಗಳೆಲ್ಲವನು = ಬಂಧನಗಳು + ಎಲ್ಲವನು, ಸಂಧಿಪುದು = ಸೇರುವುದು, ನೀರ್ಗಳನ್ = ನೀರುಗಳನ್ನು, ಜೀವನ್ = ಜೀವಿ, ವ್ಯಕ್ತಿ, ಮೀರ್ದೀಕ್ಷೆಯೋಟದಿಂ = ಮೀರ್ದ (ಮೀರಿದ) + ಕಕ್ಷೆಯ (ದೃಷ್ಟಿಯ) + ಓಟದಿಂ, ಸಂದರುಶಿಪನು = ಸಂದರ್ಶಿಸುತ್ತಾನೆ, ಪರನ = ಪರಮಾತ್ಮನ, ಪರತತ್ವವನ್ನು

ವಾಚ್ಯಾರ್ಥ: ಪ್ರವಾಹದಲ್ಲಿ ಬಂದ ನದಿಯ ನೀರು ಎಲ್ಲ ಅಡೆತಡೆಗಳನ್ನು ದಾಟಿ ಸಮುದ್ರದ ಜಲರಾಶಿಯನ್ನು ಸೇರುವುದು. ಅದರಂತೆ ಮನುಷ್ಯ, ಇಂದ್ರಿಯಗಳ ಬಂಧನದಿಂದ ಮುಕ್ತನಾಗಿ ಪರತತ್ವವನ್ನು, ಪರಶಿವನನ್ನು ಸೇರುತ್ತಾನೆ.

ವಿವರಣೆ: ಬೆಟ್ಟದ ಮೇಲೆ ಹುಟ್ಟಿದ, ಬಿದ್ದ ಹನಿಹನಿ ನೀರು ಜಿನುಗುತ್ತ ಪುಟ್ಟ ತೊರೆಯಾಗುತ್ತದೆ. ಮತ್ತಷ್ಟು ತೊರೆಗಳನ್ನು ಸೇರಿಸಿಕೊಂಡು ಹಳ್ಳವಾಗುತ್ತದೆ. ಅದಕ್ಕೆ ಇನ್ನಷ್ಟು ಹಳ್ಳಗಳು ಜೊತೆಯಾದಾಗ ನದಿಯಾಗುತ್ತದೆ. ನದಿಯ ನೀರಿನ ಹನಿ ಒಂದು ಕ್ಷಣವೂ ನಿಂತಲ್ಲಿ ನಿಲ್ಲಲಾರದು. ಒಂದೇ ಸಮನೆ ಅದರ ಪ್ರಯಾಣ ಸಮುದ್ರದೆಡೆಗೆ. ದಾರಿಯಲ್ಲಿ ಬಂದ ಮಣ್ಣನ್ನು ಕೊಚ್ಚಿ, ಬಂಡೆಗಳನ್ನು ಸುತ್ತುವರೆದು, ಎದುರಿಗೆ ಬಂದ ಬಂಧನಗಳನ್ನೆಲ್ಲ ನಿವಾರಿಸಿಕೊಂಡು ಕೊನೆಗೆ ಸಮುದ್ರದ ನೀರಿನಲ್ಲಿ ತನ್ನ ಸಂಗಮದ ಸಂತೃಪ್ತಿಯನ್ನು ಪಡೆಯುತ್ತದೆ.

ಅದರಂತೆ ಮನುಷ್ಯನದೂ ಒಂದು ಯಾತ್ರೆ. ಅವನ ಗಮ್ಯಸ್ಥಳ ಪರಮಾತ್ಮ ಅಥವಾ ಪರತತ್ವ ಸಂದರ್ಶನ. ಈ ಪ್ರಯಾಣದಲ್ಲಿ ಅವನಿಗೆ ಅಡ್ಡಿಯಾಗಿ ನಿಲ್ಲುವುದು ಹೊರಗಿನ ವಸ್ತುಗಳಲ್ಲ. ಅವನವೇ ಆದ ಇಂದ್ರಿಯಗಳು. ಮತ್ತೆ, ಅವನು ತನ್ನ ಅಂತಿಮ ಗುರಿ ಎಂದುಕೊಂಡಿರುವ ಪರಸತ್ವವೂ ಹೊರಗಿರುವುದಲ್ಲ. ಅದು ಅವನಲ್ಲೇ ಇದೆ.

ಹಾಗಾದರೆ ಇಂದ್ರಿಯಗಳು ತಡೆಗಳು ಹೇಗಾದವು? ಇಂದ್ರಿಯಗಳನ್ನು ಬಳಸಿಕೊಂಡು ಪರಮಸತ್ಯವನ್ನು ಕಾಣುವ ಹವ್ಯಾಸ ನಮಗೆ! ಅದು ಅಸಾಧ್ಯ. ಕಣ್ಣು ಕೇವಲ ಆಕಾರವನ್ನು ಕಾಣಬಹುದು, ನಿರಾಕಾರವನ್ನು ಕಾಣಬಹುದೆ? ಕಿವಿ ಇರುವುದೇ ಶಬ್ದಗಳನ್ನು ಕೇಳಲು. ಅದು ನಿಶ್ಯಬ್ದವನ್ನು ಕೇಳೀತೇ? ಚರ್ಮ ಸ್ಪರ್ಶವನ್ನು ಗುರುತಿಸಲು ಇರುವ ಸಾಧನ. ಅದು ಸ್ಪರ್ಶಾತೀತವಾದದ್ದರ ಅನುಭವವನ್ನು ಪಡೆದೀತೇ? ಹಾಗೆಯೇ ವಾಸನೆಯೇ ಇಲ್ಲದ ವಸ್ತುವನ್ನು ಮೂಗು, ರುಚಿಯೇ ಇಲ್ಲದ್ದನ್ನು ನಾಲಿಗೆ ಗುರುತಿಸುವುದು ಸಾಧ್ಯವಿಲ್ಲ.

ಹೀಗೆಂದರೇನಾಯಿತು? ಇಂದ್ರಿಯಗಳಿಂದ ದೇವ ಕಾಣಲಾರ. ಕಣ್ಣು ಸೊಗಸಾದದ್ದನ್ನು ನೋಡುತ್ತದೆ. ಆಸೆ ಬಿಗಿಯಿತು. ಮನುಷ್ಯನನ್ನು ನೆಲಕ್ಕೆ ಕಟ್ಟಿತು. ಶಬ್ದದ ಮೂಲಕ ಕಿವಿ, ಸ್ಪರ್ಶದ ಮೂಲಕ ಚರ್ಮ, ರುಚಿಯ ಮೂಲಕ ನಾಲಿಗೆ, ವಾಸನೆಯ ಮೂಲಕ ಮೂಗು ಒಂದೊಂದಾಗಿ ಮನುಷ್ಯನನ್ನು ಬಿಗಿದು ಅವನ ಪ್ರಯಾಣಕ್ಕೆ ಅಡ್ಡಿಯಾದವು. ಯಾರು ಈ ಇಂದ್ರಿಯಗಳ ಬಾಧೆಯಿಂದ ಬಿಡಿಸಿಕೊಂಡು ಏಕಮನಸ್ಸಿನಿಂದ ಮುಂದುವರೆದನೋ ಅವನು ಪರತತ್ವವನ್ನು, ಪರಮಾತ್ಮನನ್ನು ತಲುಪುತ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಆಗಸ್ಟ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ, ಋತು ತಿಥಿ: ಶ್ರಾವಣ ಕೃಷ್ಣ ಪಂಚಮಿ ಗಂ. 20-18, ನಕ್ಷತ್ರ: ರೇವತಿ ಗಂ. 21-07 ಯೋಗ: ಶೂಲ ಗಂ. 21-49, ಕರಣ: ಕೌಲವ ಗಂ. 08-34, ಕರ್ಕಾಟಕ ಮಾಸದ 30 ನೇ ದಿನ. ರಾಹುಕಾಲ : ಸಾಯಂಕಾಲ 03:00 - 04:30 ಸೂರ್ಯೋದಯ : 06-22 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 17 ಮೊಹರಮ್, ದಿನ ವಿಶೇಷ : ರಕ್ಷಾ ಪಂಚಮಿ (ಒರಿಸ್ಸಾ), ಪಾರ್ಸಿ ಹೊಸ ವರ್ಷದ ದಿನ (ಶಹೆನ್‌ಶಾಹಿ)
ಅದೃಷ್ಟ ಸಂಖ್ಯೆ : 5, 10

ಮೇಷ: ದೈಹಿಕ ಶ್ರಮ ಜಾಸ್ತಿಯಾದರೂ ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಎಲ್ಲಾ ಸಮಸ್ಯೆಗಳು ಪರಿಹಾರವಾಗುವುದು.

ವೃಷಭ: ವಿದ್ಯಾರ್ಥಿಗಳು ತಮ್ಮ ವಿಶೇಷ ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರಿಯಲು ಬಹಳಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ. ಮಾನಸಿಕ ಸ್ಥೈರ್ಯ ಹೆಚ್ಚಿಸಿಕೊಳ್ಳುವಿರಿ.

ಮಿಥುನ: ವೃತ್ತಿ ಬದುಕಿನಲ್ಲಿ ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಹೆಚ್ಚಿನ ವಿರೋಧ ಬರಲಿದೆ. ಮಾತೃ ವರ್ಗದವರ ಸಹಾಯದಿಂದ ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು. ಗಣಪತಿಯ ಆರಾಧನೆ ಮಾಡಿ.

ಕರ್ಕಾಟಕ: ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ನಿಮಗೆ ಹೆಚ್ಚು ಆನಂದ ಸಿಗಬಹುದು. ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳಿ. ಆತ್ಮಾಭಿಮಾನವನ್ನು ಸಂರಕ್ಷಿಸಿಕೊಳ್ಳಿ.

ಸಿಂಹ: ಹೊರ ದೇಶದಲ್ಲಿ ಉದ್ಯೋಗದ ಅನ್ವೇಷಣೆ ಮಾಡುವುದಕ್ಕೆ ಒಳ್ಳೆಯ ದಿನ. ಇಂದಿನ ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುವುದಿಲ್ಲ, ಜೋಪಾನವಾಗಿರಿ. ಕುತೂಹಲಕಾರಿ ವಿಷಯಗಳಿಂದ ಅಚ್ಚರಿಗೊಳ್ಳುವಿರಿ.

ಕನ್ಯಾ: ಅನವಶ್ಯಕ ತಿರುಗಾಟವಿದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಅಧಿಕ ಲಾಭ ಬರುವುದು. ತಾಯಿಯವರ ದೇಹಾರೋಗ್ಯ ತಪಾಸಣೆಗೆ ವೈದ್ಯರ ಬಳಿ ಹೋಗುವಿರಿ. ಯೋಜನೆಯ ಸುಳಿವು ಯಾರಲ್ಲೂ ಹಂಚಿಕೊಳ್ಳಬೇಡಿ.

ತುಲಾ: ನಿಮಗೆ ಈ ದಿನದಲ್ಲಿ ಶುಭ ಫಲ ತರಲಿದೆ. ಎಲ್ಲಾ ರೀತಿಯ ಧವಸ ಧಾನ್ಯ ಹಾಗೂ ಮಸಾಲಾ ಸಾಮಗ್ರಿ ರಫ್ತು ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲವಾಗುವುದು.

ವೃಶ್ಚಿಕ: ಶೈಕ್ಷಣಿಕ ರಂಗದಲ್ಲಿನ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸಿಕೊಳ್ಳುವಿರಿ. ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಸೂಕ್ತ ಕಾಲ. ದೇವರ ಸೇವೆಯಿಂದ ನಿಮ್ಮ ಅದೃಷ್ಟ ಈ ದಿನ ಇಮ್ಮಡಿಗೊಳ್ಳಲಿದೆ.

ಧನು: ನಿಮ್ಮ ಎಲ್ಲಾ ವ್ಯವಹಾರಗಳೂ ಸಾಮಾನ್ಯ ಗತಿಯಲ್ಲಿ ಮುಂದುವರಿಯಲಿದೆ. ನಿಷ್ಫಲ ವಿಚಾರದಲ್ಲಿ ಸಮಯಹರಣವೂ, ಕೀರ್ತಿಹಾನಿಯು ಸಂಭವಿಸಲಿದೆ. ಆಲಸ್ಯದಿಂದ ವಿದ್ಯಾರ್ಜನೆಯಲ್ಲಿ ಸ್ವಲ್ಪ ಹಿನ್ನಡೆಯಾಗಲಿದೆ.

ಮಕರ: ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನ ಮಾನಗಳು ಲಭಿಸುವುದು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ನಿಮ್ಮ ಪರಿಪೂರ್ಣ ಪ್ರಯತ್ನವನ್ನು ಹಾಕುವುದು ಅಗತ್ಯ.

ಕುಂಭ: ಕುಟುಂಬದ ಹಾಗೂ ಕಾರ್ಯಕ್ಷೇತ್ರದ ಸಮಸ್ಯೆಯನ್ನು ಹಂತಹಂತವಾಗಿ ಸುಧಾರಣೆ ಮಾಡುವಿರಿ. ಆಭರಣಗಳ ಖರೀದಿ, ಸತ್ಕಾರ್ಯದಲ್ಲಿ ಆಸಕ್ತಿ, ಬಂಧು-ಬಾಂಧವರ ಸಹಾಯದಿಂದ ಸತ್ಫಲ ಸಿಗಲಿದೆ.

ಮೀನ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟು ಮಾಡುತ್ತದೆ. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆ ಗಳು ಈಡೇರಲಿವೆ.

ಪದಬಂಧ 5051

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
2.ಹಿಗ್ಗಿನಿಂದ ಕಲಿತಿರುವ ಅಂಕಗಣಿತದ ಕೋಷ್ಟಕ (2)
4.ಒಳ್ಳೆಯ ಅಥವಾ ಕೆಟ್ಟ ನಾತ(3)
5.ಅಂಗಣಕ್ಕೇರಿದಾಗ ಕಾಣಿಸಿದ ಮಂಗಳಗ್ರಹ (4)
6.ಇದು ಮಾತಿಗೆ ನಿಲುಕದ್ದು(4)
7.ನಗರದಲ್ಲಿರುವ ಮನುಷ್ಯ(2)
9.ಕವಿಪುಂಗವರು ಹೊಕ್ಕಿರುವ ಗುಹೆ! (2)
13. ಹೊಸಯುಗ ಈ ತರ ಬಂದಿದೆ(4)
14.ಅವಶ್ಯವಿಲ್ಲದ ಖರ್ಚು (4)
15.ಕಪಟವನ್ನು ಹೀಗೂ ಹೇಳಿ(3)
16.ಹಂತಕನೇರಿದ ಸೋಪಾನ(2)

ಮೇಲಿಂದ ಕೆಳಕ್ಕೆ
1.ಜರಿಯಲ್ಲಿಟ್ಟಿರುವ ರತ್ನ ಖಚಿತವಾದ ಒಡವೆ! (4)
2.ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು(5)
3.ನೆನಪಿನಲ್ಲಿ ಉಳಿಯದಿರುವುದು(3)
5. ಒಳಮನಸ್ಸು ಇದು(4)
8.ದ್ರವದಿಂದ ತುಂಬಿರುವುದು(4)
10.ಈತ ವಿವೇಕಶಾಲಿ(5)
11.ಸಮರ್ಪಕವಲ್ಲದ ಕಾರಣ(4)
12.ಅತಿಯಾದ ಬಯಕೆ(3)

5050ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಸ್ಥಾನ 5.ವರ್ತಮಾನ
6.ರಸಾಯನ 7.ತರ್ಜನಿ
10.ಮಡದಿ 12.ದುರಭ್ಯಾಸ
15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ:
1.ಸಂಹಿತೆ 2.ನವನೀತ
3.ವಾನರ 4.ಗಗನಚುಂಬಿ
8.ನಿಗಮ 9.ಉಮೇದುವಾರ
11.ದಿಗ್ವಿಜಯ 13.ಸಮಸ್ಯೆ
14.ನಿಯತ್ತು

ಸುಡೊಕು 5437

				7			4	
		4	6		8			9
7				1				
						6	7	
6		1	7		2			4
								1
9				6		5		
	3	6	2		5			7
8		5		4			6	3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5436 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

‘ದೇಶ ಸ್ವಾವಲಂಬಿ ಆಗಬೇಕು’

ನಾಗ್ಪುರ: ‘ಸಾಕಷ್ಟು ಹೋರಾಟಗಳ ನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ದೇಶ ಸ್ವಾವಲಂಬಿಯಾಗಬೇಕು’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಸೋಮವಾರ ಹೇಳಿದರು.

ಭಾರತದ 76 ನೇ ಸ್ವಾತಂತ್ರ್ಯ ದಿನಾಚರಣೆಯಂದು ನಾಗಪುರದ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ‘ದೇಶವು ಜಗತ್ತಿಗೆ ಶಾಂತಿಯ ಸಂದೇಶ ನೀಡುತ್ತದೆ’ ಎಂದು ಹೇಳಿದರು.

‘ದೇಶ ಮತ್ತು ಸಮಾಜ ನಮಗೆ ಏನು ನೀಡಿತು ಎಂದು ಜನ ಕೇಳಬಾರದು. ಬದಲಿಗೆ ದೇಶಕ್ಕೆ ನಾವೇನು ನೀಡುತ್ತಿದ್ದೇವೆ’ ಎಂದು ಯೋಚಿಸಬೇಕು ಎಂದು ಭಾಗವತ್ ಹೇಳಿದರು.

ಬಿಗಿ ಭದ್ರತೆಯ ನಡುವೆ ನಡೆದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಕೆಲವು ಸ್ವಯಂಸೇವಕರು ಮತ್ತು ಪ್ರಚಾರಕರು ಉಪಸ್ಥಿತರಿದ್ದರು.

ಫ್ಲೆಕ್ಸ್ ವಿವಾದ: ಶಿವಮೊಗ್ಗ ಉದ್ವಿಗ್ನ

ಒಂದನೇ ಪುಟದಿಂದ...

ಈ ವೇಳೆ ವಿಶ್ವ ಹಿಂದೂ ಪರಿಷತ್, ಬಜರಂಗದಳ, ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ಆರಂಭಿಸಿದರು. ಎರಡು ದಿನದ ಹಿಂದೆ ಸಿಟಿ ಸೆಂಟರ್ ಮಾಲ್‌ನಲ್ಲಿ ವೀರ ಸಾವರ್ಕರ್ ಭಾವಚಿತ್ರ ತೆಗೆಸಲಾಗಿತ್ತು. ಇಲ್ಲಿ ಸಾವರ್ಕರ್ ಫ್ಲೆಕ್ಸ್ ಅಳವಡಿಸಲು ಅವಕಾಶ ಕೊಡಬೇಕು ಎಂದು ಪಟ್ಟು ಹಿಡಿದರು.

ಕೆಲ ಹೊತ್ತಿನ ನಂತರ ಶಿವಪ್ಪ ನಾಯಕ ಪ್ರತಿಮೆ ಸ್ಥಳಕ್ಕೆ ತೆರಳಿ ಪ್ರತಿಭಟನೆ ಮುಂದುವರಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ. ಲಕ್ಷ್ಮೀಪ್ರಸಾದ್ ಸ್ಥಳದಲ್ಲಿ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿದರು.

ಕಾನೂನು, ಸುವ್ಯವಸ್ಥೆ ಪಾಲನೆ ಅಗತ್ಯದ ಬಗ್ಗೆ ಮನವರಿಕೆ ಮಾಡಿ ಗುಂಪು ಚದುರಿಸಿದರು. ಈ ವೇಳೆ ಗದ್ದಲ ಮಾಡಿದ ಕೆಲವರನ್ನು ಪೊಲೀಸರು ವಶಕ್ಕೆ ಪಡೆದರು. ಸ್ಥಳಕ್ಕೆ ಹೆಚ್ಚಿನ ಪಡೆಗಳನ್ನು ಕರೆಸಲಾಯಿತು.

ಎರಡು ಗುಂಪುಗಳ ಮುಖಾಮುಖಿ ತಪ್ಪಿಸಲು ಲಘು ಲಾಠಿ ಪ್ರಹಾರ ಮಾಡಿದ್ದೇವೆ. ಪರಿಸ್ಥಿತಿ ತಹಬದಿಯಲ್ಲಿದೆ. ಯಾರನ್ನೂ ಬಂಧಿಸಿಲ್ಲ

ಬಿ.ಎಂ.ಲಕ್ಷ್ಮೀಪ್ರಸಾದ್, ಶಿವಮೊಗ್ಗ ಎಸ್ಪಿ

‘ಅಮೃತ ಭಾರತಿ– ಕರುನಾಡ ಜಾತ್ರೆ’ ಕಾರ್ಯಕ್ರಮದಲ್ಲಿ ಸಿ.ಎಂ ಹೇಳಿಕೆ

ಆರೆಸ್ಸೆಸ್‌ಗೆ ತಲೆಬಾಗಿರುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೊಮ್ಮಾಯಿ ಆರೆಸ್ಸೆಸ್ ಅಡಿಯಾಳಾಗಿದ್ದಾರೆ ಅನ್ನುತ್ತಾರೆ. ಆ ವಿಚಾರಕ್ಕೆ ನಾನು ತಲೆಬಾಗಿದ್ದೇನೆ. ಒಂದು ತತ್ವ, ಆದರ್ಶಕ್ಕೆ ದೇಶ ಕಟ್ಟಲು ನಾನು ಬದ್ಧನಾಗಿದ್ದೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬಿಜೆಪಿ ವತಿಯಿಂದ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ‘ಅಮೃತ ಭಾರತಿ– ಕರುನಾಡ ಜಾತ್ರೆ’ ಕಾರ್ಯಕ್ರಮದಲ್ಲಿ ಬೊಮ್ಮಾಯಿ ಅವರು ಮಾತನಾಡಿದರು.

‘ಹಿಂದೆಂದೂ ಮಾಡದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಫೋಟೊ ಹಾಕುವ ಕೆಲಸ ಮಾಡಿದೆವು. ಅದರ ಬಗ್ಗೆ ಮಾತಿಲ್ಲ. ಅವರ ನಾಯಕರ ಫೋಟೊ ಹಾಕಲಿಲ್ಲ ಎಂದು ದುಃಖಪಟ್ಟರು. ನೆಹರೂ ಅವರ ಬಗ್ಗೆ ನಮಗೆ ಅಪಾರ ಗೌರವ ಇದೆ. ನಾವು ಅವರನ್ನು, ಅವರ ಕೆಲಸವನ್ನು ಮರೆತಿಲ್ಲ’ ಎಂದು ಬೊಮ್ಮಾಯಿ ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ನೆಹರೂ ಅವರಿಗೆ ಗೌರವ ಕೊಟ್ಟಿದ್ದಾರೆ. ಮೊದಲ ಪ್ರಧಾನಿ ನೆಹರೂ ಅವರಿಂದ ಹಿಡಿದು ವಾಜಪೇಯಿ ಅವರವರೆಗೂ ಏನೆಲ್ಲ ಕೊಡುಗೆ ನೀಡಿದ್ದಾರೆ ಎಂಬ ಪ್ರದರ್ಶನ ದೆಹಲಿಯಲ್ಲಿ ಮಾಡಿದ್ದಾರೆ’

ಸೋಮವಾರ ನಡೆದ 'ಅಮೃತ ಭಾರತಿ– ಕರುನಾಡ ಜಾತ್ರೆ' ಕಾರ್ಯಕ್ರಮದಲ್ಲಿ ಶಾಸಕ ಬಿ.ಎಸ್‌. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಬಿಜೆಪಿಯ ಇತರ ನಾಯಕರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಎಂದರು.

‘ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಮೊದಲಿಗರು ರೈತರು. ಕೂಲಿ ಕಾರ್ಮಿಕರೂ ತಿರುಗಿಬಿದ್ದಿದ್ದರು. ಸಾವಿರಾರು ಅನಾಮಧೇಯರು ಪ್ರಾಣ ಕಳೆದುಕೊಂಡರು. ಅವರನ್ನೆಲ್ಲ ಸ್ಮರಿಸುವ ಕಾಲ ಬಂದಿದೆ’ ಎಂದು ಹೇಳಿದರು.

‘ಕಾಶ್ಮೀರದಲ್ಲಿ, ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಅವಕಾಶ ಇರಲಿಲ್ಲ. ಪ್ರಧಾನಿ ನರೇಂದ್ರಮೋದಿ ಇದೀಗ ದೇಶದೆಲ್ಲೆಡೆ ತಿರಂಗಾ ಹಾರುವಂತೆ ಮಾಡಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

‘ಸಿದ್ದರಾಮಯ್ಯ ಅವರು ಸ್ವಾತಂತ್ರ್ಯ ನಾವು ತಂದುಕೊಟ್ಟೆವು ಎನ್ನುತ್ತಾರೆ. ಅವರಿಗೆ ಇದು ಮೂರನೇ ಪಾರ್ಟಿ. ಅವರಂತೂ ಸ್ವಾತಂತ್ರ್ಯ ತಂದಿಲ್ಲ. ಕಾಂಗ್ರೆಸ್‌ನವರು ಅನೇಕ ಪ್ರಧಾನಿಗಳನ್ನು ದೇಶಕ್ಕೆ ನೀಡಿದರು. ಲಾಲ್ ಬಹದ್ದೂರ್ ಶಾಸ್ತ್ರಿ ಬಿಟ್ಟರೆ ಇನ್ಯಾರೂ ಕೆಲಸ ಮಾಡಲಿಲ್ಲ’ ಎಂದು ಕಂದಾಯ ಇಲಾಖೆ ಸಚಿವ ಆರ್. ಅಶೋಕ ಹೇಳಿದರು.

ಸಂಸದ ಸದಾನಂದಗೌಡ, ರಾಜ್ಯಸಭೆ ಸದಸ್ಯ ಲಹರ್ ಸಿಂಗ್, ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಇದ್ದರು.

‘ಕಾಂಗ್ರೆಸ್‌ನಿಂದ ಅಂಬೇಡ್ಕರ್‌ಗೆ ಕಿರುಕುಳ’

ಬೆಂಗಳೂರು: ‘ಕಾಂಗ್ರೆಸ್‌ನವರು ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಎಷ್ಟು ಕಿರುಕುಳ ಕೊಟ್ಟರು ಎಂಬುದನ್ನು ರಾಜ್ಯದಾದ್ಯಂತ ಪ್ರವಾಸ ಮಾಡಿ ಜನರಿಗೆ ತಿಳಿಸಿಕೊಡುತ್ತೇವೆ’ ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ‘ಅಮೃತ ಭಾರತಿ– ಕರುನಾಡ ಜಾತ್ರೆ’ ಕಾರ್ಯಕ್ರಮದಲ್ಲಿ ಹೇಳಿದರು.

‘ಈಗಾಗಲೇ ಅಧಿಕಾರಕ್ಕೆ ಬಂದುಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ಕಾಂಗ್ರೆಸ್‌ನವರಿದ್ದಾರೆ. ನಾಡಿನಲ್ಲಿ ಮತ್ತೆ ಪ್ರವಾಸ ಮಾಡಿ, ನಾವು ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟರೆ ಕಾಂಗ್ರೆಸ್‌ಗೆ ಉಸಿರುಗಟ್ಟಲಿದೆ ಎಂದರು. ‘ಸ್ವಾತಂತ್ರ್ಯ ಬಂದು 75 ವರ್ಷ ಸಂದಿದೆ. ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ, ಹಿರಿಯರು ಅಹಿಂಸೆಯ ಆಚರಣೆ ಮಾಡಿದರು. ನಂತರ, ವಿಭಜನೆ, ಭಯೋತ್ಪಾದನೆ, ಇತರೆ ಎಲ್ಲವನ್ನೂ ದೇಶ ಎದುರಿಸಿ ನಿಂತಿದೆ. ಅವೆಲ್ಲವನ್ನೂ ಎದುರಿಸಿ ನಿಲ್ಲೋ ಧೈರ್ಯ ಪ್ರಧಾನಿ ನರೇಂದ್ರ ಮೋದಿಗಿದೆ. ಅವರಂತೆ ಹಗಲಿರುಳು ಕೆಲಸ ಮಾಡಿದರೆ ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲಿದೆ’ ಎಂದರು.

ಸುದ್ದಿ 2 ನಿಮಿಷ

‘ದೇಶಪ್ರೇಮದ ಗುತ್ತಿಗೆ ಪಡೆದವರಿಂದಲೇ ವಿಭಜನೆ’

ಬೆಂಗಳೂರು: ‘ನಿಮ್ಮ (ಬಿಜೆಪಿ–ಸಂಘಪರಿವಾರ) ಸಂಕುಚಿತ ಮನೋಭಾವವೇ ದೇಶ ವಿಭಜನೆ ಆಗಲು ಕಾರಣ. ಈಗ ನೆಹರೂ ಅವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಲಾಗುತ್ತಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ಬೇಸರ ವ್ಯಕ್ತಪಡಿಸಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಜೆಡಿಎಸ್ ರಾಜ್ಯ ಕಚೇರಿಯಲ್ಲಿ ಧ್ವಜಾರೋಹಣದ ಬಳಿಕ ಮಾತನಾಡಿದ ಅವರು, ‘ಇಂದು ದೇಶಪ್ರೇಮವನ್ನು ಗುತ್ತಿಗೆ ಪಡೆದವರಂತೆ ವರ್ತಿಸುತ್ತಿರುವ ಶಕ್ತಿಗಳು ಮತ್ತು ಗಾಂಧೀಜಿಯವರನ್ನು ಕೊಂದವರೇ ದೇಶ ವಿಭಜನೆಗೆ ಕಾರಣರು’ ಎಂದು ಹರಿಹಾಯ್ದರು.

‘ಒಂದು ಕಡೆ ನೆಹರೂ ಅವರ ಭಾವಚಿತ್ರ ಕಣ್ಮರೆ ಮಾಡುತ್ತಾರೆ. ಮತ್ತೊಂದು ಕಡೆ ನೆಹರೂ ರಾಷ್ಟ್ರ ವಿಭಜನೆಗೆ ಕಾರಣ ಎಂದು ನೆಪ ಹೇಳುತ್ತಾರೆ. ನೆಹರೂ ಕುಟುಂಬ ಸ್ವಾತಂತ್ರ್ಯ ಹೋರಾಟದಲ್ಲಿ ಹೇಗೆ ಭಾಗವಹಿಸಿತ್ತು. ಅವರ ಕೊಡುಗೆ ಏನೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ’ ಎಂದು ಸರ್ಕಾರದ ನಡೆಗೆ ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷವನ್ನೂ ತರಾಟೆ ತೆಗೆದುಕೊಂಡ ಕುಮಾರಸ್ವಾಮಿ, ‘ಅಂದು ಸ್ವಾತಂತ್ರ್ಯಕ್ಕಾಗಿ ಹುಟ್ಟಿಕೊಂಡ ಕಾಂಗ್ರೆಸ್ ಬೇರೆ. ಆದರೆ, ಇಂದು ಕಾಂಗ್ರೆಸ್ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವವರು ನಕಲಿ ಕಾಂಗ್ರೆಸ್ಸಿಗರು’ ಎಂದರು.

ಧ್ವಜಾರೋಹಣ ನೆರವೇರಿಸಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, 1995ರಲ್ಲಿ ಜನತಾದಳ ಕಚೇರಿಯಲ್ಲಿ ಧ್ವಜಾರೋಹಣಮಾಡಿದೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿ ಎಚ್‌.ಡಿ.ದೇವೇಗೌಡರು ಧ್ವಜಾರೋಹಣ ಮಾಡಿದ್ದರು. ಮುಂದಿನ ಬಾರಿ ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಧ್ವಜಾರೋಹಣ ಮಾಡುತ್ತಾರೆ ಎಂದರು.

‘ಕಾಶಿಯಾತ್ರೆಗೆ ಭಾರತ್ ಗೌರವ್ ರೈಲು’

ಕೊಪ್ಪಳ: ‘ಕಾಶಿಯಾತ್ರೆಗೆ ತೆರಳುವ ಯಾತ್ರಾರ್ಥಿಗಳಿಗಾಗಿ ಆಗಸ್ಟ್ ಕೊನೆಯ ವಾರ ಬೆಂಗಳೂರಿನಿಂದ ‘ಭಾರತ್ ಗೌರವ್’ ರೈಲು ಸಂಚರಿಸಲಿದೆ‘ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

‘ರಾಜ್ಯದ 30 ಸಾವಿರ ಯಾತ್ರಾರ್ಥಿಗಳಿಗೆ ತಲಾ ₹5 ಸಾವಿರ ಸಬ್ಸಿಡಿ ನೀಡಲಾಗುವುದು. 7 ದಿನದ ಪ್ರವಾಸದಲ್ಲಿ ಕಾಶಿ, ಆಯೋಧ್ಯ ಮತ್ತು ಪ್ರಯಾಗರಾಜ್ ದರ್ಶನ ಪಡೆಯಬಹುದು’ ಎಂದು ಹೇಳಿದರು.

‘ಆ. 25ರಂದು ಸಪ್ತಪದಿ ಸಾಮೂಹಿಕ ಸರಳ ವಿವಾಹ ನಡೆಯಲಿದೆ. ಎಷ್ಟೇ ಅರ್ಜಿಗಳು ಸಲ್ಲಿಕೆಯಾದರೂ ಪರಿಗಣಿಸಲಾಗುವುದು. ಯಾವ ಅರ್ಜಿಗಳನ್ನೂ ವಾಪಸು ಕಳುಹಿಸುವಂತಿಲ್ಲ’ ಎಂದರು.

‘ಶೀಘ್ರವೇ ರಾಯಣ್ಣ ಸೈನಿಕ ಶಾಲೆ ಉದ್ಘಾಟನೆ’

ರಾಯಣ್ಣನ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮದಲ್ಲಿ ಬೊಮ್ಮಾಯಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೆಪ್ಟೆಂಬರ್ ತಿಂಗಳಲ್ಲಿ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯನ್ನು ಉದ್ಘಾಟಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನದ ವತಿಯಿಂದ ಸೋಮವಾರ ಇಲ್ಲಿ ಆಯೋಜಿಸಿದ್ದ ಸಂಗೊಳ್ಳಿ ರಾಯಣ್ಣನ 225ನೇ ಜಯಂತಿ ಹಾಗೂ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಯಣ್ಣನ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

‘ಸಂಗೊಳ್ಳಿ ರಾಯಣ್ಣ ಸೈನಿಕ

ದೆಹಲಿಯಲ್ಲಿ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಸ್ಥಾಪಿಸುವ ಕುರಿತು ಈಗಾಗಲೇ ಪತ್ರ ಬರೆಯಲಾಗಿದೆ. ದೆಹಲಿಗೆ ಹೋಗಿ ಈ ಕುರಿತು ಮಾತನಾಡಲಾಗುವುದು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ

ಶಾಲೆಗೆ ಬೇಕಾಗಿರುವ ₹50 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ’ ಎಂದರು.

ದಿನೇಶ್ ಗುಂಡೂರಾವ್, ‘ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ರಾಯಣ್ಣನ ಹೆಸರಿನಲ್ಲಿ ಪ್ರಾಧಿಕಾರ ರಚಿಸಲಾಗಿದೆ. ನಂದಗಡದಲ್ಲಿ ಅಥವಾ ಸಂಗೊಳ್ಳಿಯಲ್ಲಿ ಅವರ ಸ್ಮಾರಕ ನಿರ್ಮಾಣ ಮತ್ತು ಸೈನಿಕ ಶಾಲೆಯನ್ನು ಸ್ಥಾಪಿಸುವುದಕ್ಕೆ ₹250 ಕೋಟಿ ಅನುದಾನ ನೀಡಲಾಗಿತ್ತು. ಈ ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡಿ, ಕಾಮಗಾರಿಗಳನ್ನು ಬೇಗ ಮುಕ್ತಾಯಗೊಳಿಸಬೇಕು’ ಎಂದು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದರು.

ಮಾಜಿ ಸಚಿವ ಎಚ್.ಎಂ. ರೇವಣ್ಣ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಾಟಾಳ್ ನಾಗರಾಜ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನದ ಅಧ್ಯಕ್ಷ ಸಂಗೊಳ್ಳಿ ಕೃಷ್ಣಮೂರ್ತಿ ಇದ್ದರು.

ಬೆಂಗಳೂರಿನಲ್ಲಿ ಸ್ಮಾರಕಗಳ ನಿರ್ಮಾಣ

ಕನ್ನಡಕ್ಕಾಗಿ ಹೋರಾಡಿದ ಕನ್ನಡಿಗರ ಸ್ಮರಣೆ ಮತ್ತು ರೈತರ ಸ್ಮರಣೆ ಮಾಡುವ ಸ್ಮಾರಕಗಳನ್ನು ಬೆಂಗಳೂರಿನ ಕೇಂದ್ರ ಪ್ರದೇಶದಲ್ಲಿ ನಿರ್ಮಿಸಲಾಗುವುದು. ಇದಕ್ಕೆ ವಾಟಾಳ್ ನಾಗರಾಜ್ ಮತ್ತು ರೈತರ ಸಂಘದವರ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕೇರಳ: ಸಿಪಿಎಂ ಮುಖಂಡನ ಕೊಲೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪಾಲಕ್ಕಾಡ್‌ನಲ್ಲಿ ಸಿಪಿಎಂ ಪಕ್ಷದ ಮುಖಂಡರೊಬ್ಬರನ್ನು ದುಷ್ಕರ್ಮಿಗಳು ಭಾನುವಾರ ರಾತ್ರಿ ಕೊಲೆ ಮಾಡಿದ್ದಾರೆ.

ಮಲಂಪುಳ ಬಳಿಯ ಕುನ್ನಂಗಡ ನಿವಾಸಿ ಶಾಜಹಾನ್ (40) ಕೊಲೆಯಾದವರು. ಇವರು ಸಿಪಿಎಂ ಪಕ್ಷದ ವಿಭಾಗೀಯ ಕಾರ್ಯದರ್ಶಿಯಾಗಿದ್ದರು. ಸ್ಥಳೀಯ ಸಮಿತಿಯ ಸದಸ್ಯರೂ ಆಗಿದ್ದರು.

‘ದುಷ್ಕರ್ಮಿಗಳ ಗುಂಪೊಂದು ಭಾನುವಾರ ರಾತ್ರಿ 9 ಗಂಟೆ ಸುಮಾರಿಗೆ ಕುನ್ನಂಗಡ ವೃತ್ತದಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿ ಆಗಿದೆ. ಎಂದು ಮೂಲಗಳು ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	121.52	14,851	2,158
ಹಾರಂಗಿ	2,859	2,855.15	3,250	3,000
ಕಬಿನಿ	2,284	2,283.59	6,854	4,000
ಹೇಮಾವತಿ	2,922	2,921.85	12,374	8,960
ಲಿಂಗನಮಕ್ಕಿ	1,819	1,812	16,443	1,932
ಸೂಪಾ (ಮೀ)	564	547.75	12,177	1,239
ಮಾಣಿ	595	587	2,070	00
ತುಂಗಭದ್ರಾ	1,633	1,632.49	91,193	94,292
ಮಲಪ್ರಭಾ	2,079.50	2,076.70	8,160	5,694
ಘಟಪ್ರಭಾ	2,175	2,173.16	24,730	21,240
ಭದ್ರಾ	186	183	12,041	12,631
ಆಲಮಟ್ಟಿ (ಮೀ)	519.60	518.20	2,13,552	2,25,000
ನಾರಾಯಣಪುರ (ಮೀ)	492.25	490.86	2,00,000	1,97,912

*ನೆಲಮಟ್ಟದಿಂದ

ನೇತಾಜಿ ಚಿತಾಭಸ್ಮ ದೇಶಕ್ಕೆ ತನ್ನಿ: ಆಗ್ರಹ

ನವದೆಹಲಿ (ಪಿಟಿಐ): ನೇತಾಜಿ ಸುಭಾಶ್ ಚಂದ್ರ ಬೋಸ್ ಅವರ ಚಿತಾಭಸ್ಮವನ್ನು ಭಾರತಕ್ಕೆ ಮರಳಿ ತರಬೇಕು ಎಂದು ನೇತಾಜಿ ಅವರ ಮಗಳು ಅನಿತಾ ಬೋಸ್ ಸೋಮವಾರ ಆಗ್ರಹಿಸಿದ್ದಾರೆ.

ನೇತಾಜಿ ಸಾವಿನ ಬಗ್ಗೆಇರುವ ಸಂಶಯಕ್ಕೆ ಚಿತಾಭಸ್ಮದ ಡಿಎನ್‌ಎ ಪರೀಕ್ಷೆಯಿಂದ ಉತ್ತರ ಸಿಗಲಿದೆ ಎಂದಿದ್ದಾರೆ.

ಮಾಜಿ ಸಚಿವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲು

ಮುಂಬೈ (ಪಿಟಿಐ): ‘ಎನ್‌ಸಿಬಿಯ ಮುಂಬೈ ವಲಯದ ಮಾಜಿ ನಿರ್ದೇಶಕ ಸಮೀರ್ ವಾಂಖೆಡೆ ಅವರು ಮಹಾರಾಷ್ಟ್ರದ ಮಾಜಿ ಸಚಿವ ನವಾಬ್ ಮಲಿಕ್ ವಿರುದ್ಧ ಭಾನುವಾರ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ. ಈ ಸಂಬಂಧ ಗೋರೆಗಾಂವ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಸಮೀರ್ ಅವರು ಸರ್ಕಾರಿ ಹುದ್ದೆ ಪಡೆಯುವುದಕ್ಕಾಗಿ ನಕಲಿ ಜಾತಿ ಪ್ರಮಾಣಪತ್ರ ಸಲ್ಲಿಸಿದ್ದರು’ ಎಂದು ಮಲಿಕ್ ಆರೋಪಿಸಿದ್ದರು. ಈ ಕುರಿತು ವಿಚಾರಣೆ ನಡೆಸಿದ್ದ ಮುಂಬೈ ಜಿಲ್ಲಾ ಜಾತಿ ಪ್ರಮಾಣಪತ್ರ ಪರಿಶೀಲನಾ ಸಮಿತಿಯು ಸಮೀರ್ ಸಲ್ಲಿಸಿರುವ ಪ್ರಮಾಣಪತ್ರ ನಕಲಿಯಲ್ಲ ಎಂದು ಶುಕ್ರವಾರ ಹೇಳಿತ್ತು.

‘ತಾವು ನಿರ್ದೋಷಿ ಎಂಬುದು ಸಾಬೀತಾದ ಬೆನ್ನಲ್ಲೇ ಗೋರೆಗಾಂವ್ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ಸಮೀರ್, ಮಲಿಕ್ ವಿರುದ್ಧ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಘಟಪ್ರಭಾ ಪ್ರವಾಹ: ಸೇತುವೆ ಮುಳುಗಡೆ

ಪ್ರಜಾವಾಣಿ ವಾರ್ತೆ

ಮುಧೋಳ (ಬಾಗಲಕೋಟೆ ಜಿಲ್ಲೆ): ಮಹಾರಾಷ್ಟ್ರದಲ್ಲಿನ ಮಳೆಯಿಂದಾಗಿ ಘಟಪ್ರಭಾ ನದಿಗೆ ಪ್ರವಾಹ ಬಂದಿದ್ದು ನದಿ ಪಾತ್ರದ ಜಮೀನುಗಳಿಗೆ ನೀರು ನುಗ್ಗಿದೆ.

ತಾಲ್ಲೂಕಿನ 11 ಬ್ಯಾರೇಜ್‌ಗಳು ಜಲಾವೃತಗೊಂಡಿರುವುದರಿಂದ ರಸ್ತೆ ಸಂಚಾರಕ್ಕೆ ತೊಂದರೆಯಾಗಿದೆ. ಯಾದವಾಡ ಸಂಪರ್ಕಿಸುವ ಸೇತುವೆ ಮುಳುಡೆಯಾಗಿದೆ.

‘ಮಿರ್ಜಿ ಗ್ರಾಮದಲ್ಲಿ ನೀರು ನುಗ್ಗಿದ್ದು 14 ಕುಟುಂಬದ 60 ಜನರನ್ನು ಆಯುರ್ವೇದ ಆಸ್ಪತ್ರೆಯ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ’ ಎಂದು ತಹಶೀಲ್ದಾರ್ ವಿನೋದ ಹತ್ತಳ್ಳಿ ತಿಳಿಸಿದ್ದಾರೆ.

ಗೋವಿಂದ ಕಾರಜೋಳ ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದರು.

ಮುತ್ತೂರು ಗ್ರಾಮ ಜಲಾವೃತ: ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯಲ್ಲಿ ಪ್ರವಾಹ ಸ್ಥಿತಿ ತಲೆದೋರಿದ್ದು ನದಿ ಪಾತ್ರದ ಮನೆ, ಜಮೀನು ಜಲಾವೃತಗೊಂಡಿವೆ.

ತಾಲ್ಲೂಕಿನ ಮುತ್ತೂರ ಹಾಗೂ ಕಂಕಣವಾಡಿ ಗ್ರಾಮ ನಡುಗಡ್ಡೆಯಾಗಿದ್ದು, ಅಲ್ಲಿನ 12ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ಕುಟುಂಬಗಳನ್ನು ದೋಣಿಯ ಮೂಲಕ ಸ್ಥಳಾಂತರಿಸಲಾಗಿದೆ.

ಒಟ್ಟು 80 ಮನೆಗಳಿವೆ. ಇನ್ನುಳಿದ ಕುಟುಂಬದವರು ಅಲ್ಲಿಯೇ ಇದ್ದಾರೆ. ಆದರೆ ಅಲ್ಲಿಂದ ಇತ್ತ ಬರಲು ರಸ್ತೆ ಇಲ್ಲ, ದೋಣಿ ಮೂಲಕವೇ ಅಡ್ಡಾಡಬೇಕು. 40ಕ್ಕೂ ಹೆಚ್ಚು ಮಕ್ಕಳು ಶಾಲಾ, ಕಾಲೇಜುಗಳಿಗೆ ತೆರಳಲು ಆಗದೆ ಮನೆಯಲ್ಲೇ ಉಳಿದಿದ್ದಾರೆ. ದೋಣಿ ಲಭ್ಯತೆಯೂ ಸಾಕಷ್ಟಿಲ್ಲ ಎನ್ನಲಾಗಿದೆ.

ದೇವನಹಳ್ಳಿಯ ಜೂನಿಯರ್ ಕಾಲೇಜು ಮೈದಾನ ಮುಂಭಾಗ ರೈತರನ್ನು ವಶಕ್ಕೆ ಪಡೆಯುತ್ತಿರುವ ಪೊಲೀಸರು.

ಸಚಿವ ಸುಧಾಕರ್ ಭಾಷಣಕ್ಕೆ ರೈತರ ಅಡ್ಡಿ

ದೇವನಹಳ್ಳಿ/ವಿಜಯಪುರ:ದೇವನಹಳ್ಳಿ ಜೂನಿಯರ್ ಕಾಲೇಜು ಮೈದಾನದಲ್ಲಿ ಸೋಮವಾರ ಧ್ವಜಾರೋಹಣ ನಂತರ ಸಚಿವ ಡಾ.ಕೆ.ಸುಧಾಕರ್ ಭಾಷಣಕ್ಕೆ ನೂರಾರು ರೈತರು ಅಡ್ಡಿಪಡಿಸಲು ಯತ್ನಿಸಿದರು.

ಭೂಸ್ವಾಧಿನ ಪ್ರಕ್ರಿಯೆ ಕೈಬಿಡುವಂತೆ ಒತ್ತಾಯಿಸಿ ಮೌನ ಪ್ರತಿಭಟನೆ ಮಾಡುತ್ತ ವೇದಿಕೆಗೆ ನುಗ್ಗಲು ಯತ್ನಿಸಿದ ರೈತರನ್ನು ಪೊಲೀಸರು ತಡೆದಾಗ ಜಟಾಪಟಿ ನಡೆಯಿತು. ಇದರಿಂದ ಕೆಲಕಾಲ ಗೊಂದಲದ ವಾತಾವರಣ ಉಂಟಾಯಿತು. 50ಕ್ಕೂ ಹೆಚ್ಚು ರೈತರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು.

ಭೂಸ್ವಾಧೀನ ವಿರೋಧಿಸಿ 134 ದಿನಗಳಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ರೈತರು ಬಾಯಿಗೆ ಕಪ್ಪುಪಟ್ಟಿ ಧರಿಸಿ ಸರ್ಕಾರದ ವಿರುದ್ಧ ಮೌನ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದರು. ಪ್ರತಿಭಟನೆ ನಡೆಸದಂತೆ ಪೊಲೀಸರು ಮನವೊಲಿಸಲು ನಡೆಸಿದ ಯತ್ನ ವಿಫಲವಾಗಿತ್ತು.

ಸ್ವಾತಂತ್ರ್ಯ ಉತ್ಸವಕ್ಕೆ ಅಡ್ಡಿಪಡಿಸುತ್ತಾರೆ ಎಂಬ ಕಾರಣಕ್ಕೆ ಚನ್ನರಾಯಪಟ್ಟಣದ ರೈತರ ಮನೆಗಳಿಗೆ ಬೆಳಗಿನ ಜಾವ ಪೊಲೀಸರು ಹಲವರನ್ನು ವಶಕ್ಕೆ ಪಡೆದರು. ಈ ಸಂದರ್ಭದಲ್ಲಿ ಹಲವು ರೈತರಿಗೆ ಗಾಯಗಳಾಗಿವೆ.

ಈ ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡಲಾಗಿದ್ದು, ಸರ್ಕಾರದ ನಡೆಗೆ ಸಾಕಷ್ಟು ಟೀಕೆ ವ್ಯಕ್ತವಾಗಿದೆ.

ಕೆಂಪುಕೋಟೆಗೆ ತ್ರಿವರ್ಣದ ಮೆರುಗು

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ಕೆಂಪುಕೋಟೆ ಪ್ರದೇಶದಲ್ಲಿ ಕಣ್ಣು ಹಾಯಿಸಿದಲ್ಲೆಲ್ಲ ತ್ರಿವರ್ಣ ಧ್ವಜಗಳೇ ಸೋಮವಾರ ರಾರಾಜಿಸುತ್ತಿದ್ದವು. ದೇಶದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಗಳನ್ನು ತೋರಿಸುವ ಭಿತ್ತಿಚಿತ್ರಗಳನ್ನು ರಚಿಸಲಾಗಿತ್ತು. ಹೂಗಳನ್ನು ಬಳಸಿಯೂ ಘಟನೆಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿತ್ತು. ಹೀಗೆ, 76ನೇ ಸ್ವಾತಂತ್ರ್ಯೋತ್ಸವಕ್ಕೆ ಐತಿಹಾಸಿಕ ಕೆಂಪುಕೋಟೆಯು ಸಾಕ್ಷಿಯಾಯಿತು.

ಪ್ರಧಾನಿ ನರೇಂದ್ರ ಮೋದಿ ಭಾಷಣಕ್ಕೆ ಮುನ್ನ, ಎಂಐ–17 ಹೆಲಿಕಾಪ್ಟರ್‌ಗಳ ಮೂಲಕ ಕೆಂಪುಕೋಟೆಯ ಮೇಲೆ ಹೂಮಳೆ ಸುರಿಸಲಾಯಿತು. ಇದೇ ಮೊದಲ ಬಾರಿಗೆ ಈ ರೀತಿ ಮಾಡಲಾಗಿದೆ. ಪ್ರಧಾನಿ ಭಾಷಣದ ಬಳಿಕ, ತ್ರಿವರ್ಣದ ಬಲೂನುಗಳ ಗುಚ್ಛವನ್ನು ಆಕಾಶಕ್ಕೆ ಹಾರಿ ಬಿಡಲಾಯಿತು.

ಕೆಂಪುಕೋಟೆಯ ದ್ವಾರದಲ್ಲಿ ಆನೆಯ ಎರಡು ಗೊಂಬೆಗಳನ್ನು ಇರಿಸಲಾಗಿತ್ತು. ಯಂತ್ರವನ್ನು ಅಳವಡಿಸಿದ್ದ ಈ ಆನೆಗಳ ಒಳಗೆ ಕುಳಿತು ನಿರ್ವಾಹಕರು ಅವುಗಳನ್ನು ನಿರ್ವಹಿಸಿದರು. ಇದು ಜನರ ಆಕರ್ಷಣೆಯ ಕೇಂದ್ರವಾಗಿತ್ತು. ಕಾರ್ಯಕ್ರಮದ ಬಳಿಕ ಈ ಆನೆಗಳ ಸುತ್ತಲೂ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಎನ್‌ಸಿಸಿ ಕೆಡೆಟ್‌ಗಳು ತಮ್ಮ ತಮ್ಮ ರಾಜ್ಯದ ಸಾಂಪ್ರದಾಯಿಕ ದಿರಿಸಿನಲ್ಲಿ ಕೆಂಪುಕೋಟೆಯ ‘ಜ್ಞಾನಪಥ’ದಲ್ಲಿ ಭಾರತದ ನಕ್ಷೆಯನ್ನು ಬಿಂಬಿಸುವ ರೀತಿಯಲ್ಲಿ ಕುಳಿತಿದ್ದರು. ಪ್ರಧಾನಿ ಅವರು ಭಾಷಣ ಮುಗಿಸಿ ಹಿಂದಿರುಗುವ ಮುನ್ನ ಈ ಸ್ಥಳಕ್ಕೆ ಹೋಗಿ, ಎನ್‌ಸಿಸಿ ಕೆಡೆಟ್‌ಗಳನ್ನು ಮಾತನಾಡಿಸಿದರು.

ತ್ರಿವರ್ಣದ ಟೋಪಿ ಧರಿಸಿ ಕೈಯಲ್ಲಿ ರಾಷ್ಟ್ರಧ್ವಜ ಹಿಡಿದ ಸಾವಿರಾರು ಜನರು ಕೆಂಪುಕೋಟೆಯಲ್ಲಿ ಭಾರಿ ಉತ್ಸಾಹದಿಂದ ಸೇರಿದ್ದರು. ದೇಶದ ವಿವಿಧ ಭಾಗಗಳಿಂದ ಬಂದ ಎನ್‌ಸಿಸಿಯ 792 ಕೆಡೆಟ್‌ಗಳು ಕಾರ್ಯಕ್ರಮದಲ್ಲಿ ಭಾಗಿಯಾದರು. ರಾಷ್ಟ್ರ ರಾಜಧಾನಿ ಮತ್ತು ದೇಶದ ಎಲ್ಲೆಡೆಯೂ ಭಾರಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

‘ತ್ಯಾಗವನ್ನು ಕ್ಷುಲ್ಲಕಗೊಳಿಸಿದ ಸರ್ಕಾರ’

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ದೇಶದ ಸಾಧನೆಯ ಹೆಮ್ಮೆಯನ್ನು ಕ್ಷುಲ್ಲಕವಾಗಿಸಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಆರೋಪಿಸಿದ್ದಾರೆ.

ದೇಶ ವಿಭಜನೆಗೆ ಜವಾಹರಲಾಲ್ ನೆಹರೂ ಮತ್ತು ಇತರ ಕೆಲವರು ಕಾರಣ ಎಂದು ಹೇಳುವ ವಿಡಿಯೊವನ್ನು ಬಿಜೆಪಿ ಪ್ರಕಟಿಸಿದ ಮರು ದಿನ ಸೋನಿಯಾ ಅವರು ಈ ಹೇಳಿಕೆ ನೀಡಿದ್ದಾರೆ.

‘75 ವರ್ಷಗಳಲ್ಲಿ ನಾವು ಬಹಳಷ್ಟನ್ನು ಸಾಧಿಸಿದ್ದೇವೆ. ಆದರೆ, ಈಗಿನ ಸ್ವಗೀಳಿನ ಸರ್ಕಾರವು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ದೇಶದ ಮಹತ್ವದ ಸಾಧನೆಗಳನ್ನು ಕ್ಷುಲ್ಲಕ ಎಂಬಂತೆ ನೋಡುತ್ತಿದೆ. ಅದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ’ ಎಂದು ಸೋನಿಯಾ ಹೇಳಿದ್ದಾರೆ.

ಚಾರಿತ್ರಿಕ ಸತ್ಯಗಳನ್ನು ತಿರುಚುವುದು, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲ್, ಅಬ್ದುಲ್ ಕಲಾಂ ಆಜಾದ್ ಅಂತಹ ಶ್ರೇಷ್ಠ ನಾಯಕರನ್ನು ಸುಳ್ಳುಗಳ ಆಧಾರದಲ್ಲಿ ರಾಜಕೀಯ ಲಾಭಕ್ಕಾಗಿ ಅವಮಾನಿಸುವುದನ್ನು ಕಾಂಗ್ರೆಸ್ ಬಲವಾಗಿ ಖಂಡಿಸುತ್ತದೆ ಎಂದು ಅವರು ಹೇಳಿದ್ದಾರೆ.

75 ವರ್ಷಗಳಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಅಳಿಸಲಾಗದ ಛಾಪು ಮೂಡಿಸಿದೆ. ವಿಜ್ಞಾನ, ಶಿಕ್ಷಣ, ಆರೋಗ್ಯ, ಮಾಹಿತಿ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಭಾರತದ ಪ್ರತಿಭಾವಂತರು ಕಠಿಣ ಶ್ರಮ ಹಾಕಿ ಈ ಛಾಪು ಮೂಡಿಸಿದ್ದಾರೆ ಎಂದರು.

‘ದೂರದರ್ಶಿ ನಾಯಕರ ನಾಯಕತ್ವದಲ್ಲಿ ಭಾರತವು ಸ್ವಾತಂತ್ರ್ಯ ಪಡೆದುಕೊಂಡದ್ದು ಮಾತ್ರವಲ್ಲದೆ, ಪಾರದರ್ಶಕ ಚುನಾವಣಾ ವ್ಯವಸ್ಥೆಯನ್ನೂ ರೂಪಿಸಿಕೊಂಡಿದೆ. ಸಾಂವಿಧಾನಿಕ ಸಂಸ್ಥೆಗಳನ್ನು ಬಲಗೊಳಿಸಲಾಗಿದೆ. ಜತೆಗೆ, ಭಾಷೆ, ಧರ್ಮ ಮತ್ತು ಜನಾಂಗಗಳ ಬಹುತ್ವಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಲಾಗಿದೆ’ ಎಂದರು.

ಸ್ವಾತಂತ್ರ್ಯ ನಡಿಗೆ: ಕಾಂಗ್ರೆಸ್ ಶಕ್ತಿ ಪ್ರದರ್ಶನ

ಒಂದನೇ ಪುಟದಿಂದ

ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಸುರ್ಜೇವಾಲಾ, ‘ಸ್ವತಂತ್ರ ಭಾರತದಲ್ಲಿ ದೇಶ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವದ ಮೇಲೆ ಆಕ್ರಮಣ ಆಗುತ್ತಿದೆ. ಪರಸ್ಪರ ಭೇದ-ಭಾವ ಹುಟ್ಟು ಹಾಕಲಾಗುತ್ತಿದ್ದು, ಅಲ್ಪಸಂಖ್ಯಾತರನ್ನು ಎರಡನೇ ದರ್ಜೆ ಪ್ರಜೆಯಾಗಿ ನೋಡಲಾಗುತ್ತಿದೆ. ಈ ರೀತಿಯ ತಾರತಮ್ಯದ ಆಡಳಿತದಿಂದ ದೇಶವನ್ನು ಮುಂದಕ್ಕೆ ಕೊಂಡೊಯ್ಯಲು ಆಗುವುದಿಲ್ಲ’ ಎಂದು ಹೇಳಿದರು.

ಬಳಿಕ ಮಾತನಾಡಿದ ಸಿದ್ದರಾಮಯ್ಯ ಅವರು, ‘ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದವರಲ್ಲಿ ಯಾರೂ ಪ್ರಧಾನಿ ಆಗಬೇಕು ಎಂದು ಕನಸು ಕಂಡವರಲ್ಲ. 75 ವರ್ಷಗಳಲ್ಲಿ ರಸ್ತೆ, ಬಂದರು, ವಿಮಾನ ನಿಲ್ದಾಣ, ಆಹಾರ ಸ್ವಾವಲಂಬನೆ ಸೇರಿ ಎಲ್ಲವೂ ಆಗಿವೆ. ಅದಕ್ಕೆ ಕಾಂಗ್ರೆಸ್ ಪಕ್ಷ ಮತ್ತು ಅದರ ಚುಕ್ಕಾಣಿ ಹಿಡಿದವರು ಕಾರಣ’ ಎಂದು ಪ್ರತಿಪಾದಿಸಿದರು.

‘ಎಲ್ಲಾ ಪ್ರಜೆಗಳಿಗೂ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಸಿಗದಿದ್ದರೆ ಸ್ವಾತಂತ್ರ್ಯ ಸಿಕ್ಕಿದ್ದಕ್ಕೆ ಸಾರ್ಥಕ ಆಗುವುದಿಲ್ಲ. ಕಾಂಗ್ರೆಸ್‌ನ ಈ ಐತಿಹಾಸಿಕ ಸ್ವಾತಂತ್ರ್ಯ ನಡಿಗೆಯಲ್ಲಿ ಭಾಗವಹಿಸಿರುವ ನಾವೆಲ್ಲರೂ ಪ್ರಜಾಪ್ರಭುತ್ವ ಉಳಿಸುವ ಶಪಥ ಮಾಡಬೇಕು’ ಎಂದು ಹೇಳಿದರು..

ಪ್ರಧಾನಿಗೆ ಧನ್ಯವಾದ: ಡಿ.ಕೆ.ಶಿವಕುಮಾರ್

‘ಈ ದೇಶಕ್ಕೆ ನೆಹರೂ ಕುಟುಂಬ ನೀಡಿರುವ ಕೊಡುಗೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ನೆಹರೂ ಅವರನ್ನು ಚರಿತ್ರೆಯಿಂದ ತೆಗೆದು ಹಾಕುವ ಪ್ರಯತ್ನವನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ನೆಹರೂ ಅವರನ್ನು ನೆನಪಿಸಿಕೊಂಡಿದ್ದಾರೆ. ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

‘ಸ್ವಾತಂತ್ರ್ಯ ನಡಿಗೆಗೆ ನಿರೀಕ್ಷೆಗೂ ಮೀರಿ ಜನ ಬಂದಿದ್ದಾರೆ. ರಾತ್ರಿ 9 ಗಂಟೆಯ ವೇಳೆಗೇ 1 ಲಕ್ಷಕ್ಕೂ ಹೆಚ್ಚು ಜನ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರು. ನೋಂದಣಿ ಆಗದವರೂ ಬಂದಿದ್ದಾರೆ. ಒಂದೂವರೆ ಲಕ್ಷ ಟೀ–ಶರ್ಟ್, ಟೋಪಿ ಮತ್ತು ಬಾವುಟ ವಿತರಿಸಿದ್ದೆವು. ಆದರೂ ಅರ್ಧದಷ್ಟು ಜನರಿಗಷ್ಟೇ ತಲುಪಿದೆ. ಉಳಿದ ಎಲ್ಲರಿಗೂ ಪ್ರಮಾಣ ಪತ್ರ ತಲುಪಿಸುವ ಕೆಲಸ ಮಾಡುತ್ತೇವೆ’ ಎಂದು ತಿಳಿಸಿದರು.

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣ: 11 ಮಂದಿ ಕೈದಿಗಳ ಬಿಡುಗಡೆ

ಗೋಧ್ರಾ (ಪಿಟಿಐ): ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಎಲ್ಲಾ 11 ಅಪರಾಧಿಗಳನ್ನು ಗುಜರಾತ್ ಸರ್ಕಾರದ ಕ್ಷಮಾಪಣೆ ನೀತಿ ಅನ್ವಯ ಸೋಮವಾರ ಗೋಧ್ರಾ ಉಪ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಲ್ಕಿಸ್ ಬಾನು ಅವರ ಕುಟುಂಬದ ಏಳು ಸದಸ್ಯರ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆ ಆರೋಪದ ಮೇಲೆ 11 ಮಂದಿಗೆ 2008ರ ಜ.21 ಮುಂಬೈ ವಿಶೇಷ ಸಿಬಿಐ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿತ್ತು. ನಂತರ ಅವರ ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ ಎತ್ತಿ ಹಿಡಿದಿತ್ತು. ಅಪರಾಧಿಗಳು 15 ವರ್ಷಕ್ಕೂ ಹೆಚ್ಚು ಕಾಲ ಜೈಲಿನಲ್ಲಿದ್ದಾರೆ. ಅವರಲ್ಲಿ ಒಬ್ಬರು ಅವಧಿಪೂರ್ವ ಬಿಡುಗಡೆ ಕೋರಿ ಸುಪ್ರೀಂ ಕೋರ್ಟ್‌ ಗೆ ಮನವಿ ಮಾಡಿದ್ದರು.

ಶಿಕ್ಷೆ ಹಿಂತೆಗೆದುಕೊಳ್ಳುವ ವಿಷಯ ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ ಗುಜರಾತ್ ಸರ್ಕಾರಕ್ಕೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಸರ್ಕಾರ ಸಮಿತಿ ರಚಿಸಿತ್ತು ಎಂದು ಸಮಿತಿ ನೇತೃತ್ವ ವಹಿಸಿದ್ದ ಪಂಚಮಹಲ್ ಜಿಲ್ಲಾಧಿಕಾರಿ ಸುಜಲ್ ಮಾಯಾತ್ರಾ ತಿಳಿಸಿದರು.

‘ಸಮಿತಿಯು ಪ್ರಕರಣದ ಎಲ್ಲಾ 11 ಅಪರಾಧಿಗಳ ಕ್ಷಮಾಪಣೆ ಪರವಾಗಿ ಸರ್ವಾನುಮತದ ನಿರ್ಧಾರ ತೆಗೆದುಕೊಂಡು, ರಾಜ್ಯ ಸರ್ಕಾರಕ್ಕೆ ಶಿಫಾರಸು ಕಳುಹಿಸಿತ್ತು. ಭಾನುವಾರ ಅವರ ಬಿಡುಗಡೆ ಆದೇಶ ಸ್ವೀಕರಿಸಿದ್ದೇವೆ’ ಎಂದು ಮಾಯಾತ್ರಾ ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land Converted
Out-Station
ಮಲೆನಾಡಿನಲ್ಲಿ ಜಮೀನು ಬೇಕಾದವರು ಈ ನಂಬರಿಗೆ ಕರೆ ಮಾಡಿ: 9482758603

ಉದ್ಯೋಗಾವಕಾಶ
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General
ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಊಟ,ವಸತಿ ಉಚಿತ. ಸಂಬಳ:12,000 ರಿಂದ15,000/-. ಇಎಸ್ಐ,ಪಿಎಫ್ ಸೌಲಭ್ಯವಿರುತ್ತದೆ.ಬೆಂಗಳೂರು-76. ತಕ್ಷಣ ಸಂಪರ್ಕಿಸಿ:9606385001, 9606523337.

Wanted
ಅಡುಗೆ ಕೆಲಸಕ್ಕೆ ಉತ್ತಮ ರುಚಿ-ಶುಚಿಯಾಗಿ ಅಡುಗೆ ಮಾಡುವ ಲಿಂಗಾಯತ ಮಹಿಳಾ ಅಡುಗೆಭಟ್ಟರು ಬೇಕಾಗಿದ್ದಾರೆ.ಉತ್ತಮ ಸಂಬಳ ಕೊಡಲಾಗುವುದು. ಸಂಪರ್ಕಿಸಿ: 9986767672. ಬೆಂಗಳೂರು.

ಭವಿಷ್ಯ
Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರವಾಸ
Travel
ಗ್ರೂಪ್ ಟೂರ್ಸ್: ಬಾಲಿ 7ದಿನಗಳು, ದುಬೈ 5ದಿನಗಳು, ಕಾಶಿ,ಅಯೋಧ್ಯಾ 6 ದಿನಗಳು ಅಂಡಮಾನ್ 5ದಿನಗಳು,.. Travel Comfort: 08041664646, 9731001111.

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಉಚಿತ ಕೊಡುಗೆಗಳ ಸಂಸ್ಕೃತಿ' ಹೇಳಿಕೆ ಜನಕಲ್ಯಾಣ ಯೋಜನೆಗಳಿಗೆ ಮಾಡಿದ ಅಪಮಾನ'

'ರೇವ್ಡಿ' ಟೀಕೆ: ಮೋದಿ ವಿರುದ್ಧ ವಾಗ್ದಾಳಿ

ನವದೆಹಲಿ/ಜೈಪುರ/ಹೈದರಾಬಾದ್ (ಪಿಟಿಐ): ದೇಶದಾದ್ಯಂತ ಸ್ವಾತಂತ್ರ್ಯೋತ್ಸವವನ್ನು ಸೋಮವಾರ ಆಚರಿಸುವ ವೇಳೆ ಹಲವು ಮುಖ್ಯಮಂತ್ರಿಗಳು ಹಲವು ಜನಪರ ಘೋಷಣೆಗಳನ್ನು ಮಾಡಿದರು. ಮತ್ತೆ ಕೆಲವು ಮುಖ್ಯಮಂತ್ರಿಗಳು, ಪ್ರಧಾನಿ ಮೋದಿ ಅವರ 'ಉಚಿತ ಕೊಡುಗೆಗಳ ಸಂಸ್ಕೃತಿ' ಟೀಕೆಗೆ ಪ್ರತ್ಯುತ್ತರ ನೀಡುವ ವಾಗ್ದಾಳಿಗೆ ಬಳಸಿಕೊಂಡರು.

ಕಲ್ಯಾಣ ಯೋಜನೆಗಳನ್ನು ಉಚಿತ ಕೊಡುಗೆ ಎಂದು ಕರೆಯುವುದು 'ಅಪಮಾನ ಮಾಡಿದಂತೆ' ಎಂದು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್, ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದರು.

'ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿದೆ. ರಾಜ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸುತ್ತಿದೆ. ಅಧಿಕಾರ ಕೇಂದ್ರೀಕರಣ ಮಾಡುತ್ತಿದೆ. ದಿನಬಳಕೆ ವಸ್ತುಗಳಿಗೆ ತೆರಿಗೆ ವಿಧಿಸಿ, ಬಡ ಮತ್ತು ಮಧ್ಯಮ ವರ್ಗದವರ ಬದುಕಿಗೆ ಬರೆ ಎಳೆದಿದೆ' ಎಂದು ಅವರು ಆರೋಪಿಸಿದರು.

ರಾಜಸ್ಥಾನದ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು 'ಸಾರ್ವಜನಿಕ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರುವುದು ಪ್ರತಿ ಸರ್ಕಾರದ ಜವಾಬ್ದಾರಿ. ಅಭಿವೃದ್ಧಿಹೊಂದಿರುವ ದೇಶಗಳಲ್ಲಿ ಬಡವರು ಮತ್ತು ವೃದ್ಧರಿಗೆ ವಾರಕ್ಕೊಮ್ಮೆ ಪಿಂಚಣಿ ಪಾವತಿಸಲಾಗುತ್ತಿದೆ. 'ರೇವ್ಡಿ' ಸಂಸ್ಕೃತಿ ಟೀಕೆಯನ್ನು ನಾನು ಪರಿಗಣಿಸಲಾರೆ. ರಾಜಸ್ಥಾನದಲ್ಲಿ ಒಂದು ಕೋಟಿ ಜನರಿಗೆ ಪಿಂಚಣಿ ನೀಡಲಾಗುತ್ತಿದೆ' ಎಂದರು.

'ಉಚಿತ ಯೋಜನೆಗಳಿಂದ ಬಡತನ ನಿರ್ಮೂಲನೆ'

'ಉಚಿತ ಶಿಕ್ಷಣ ಮತ್ತು ಆರೋಗ್ಯ ಸೇವೆಗಳು ಉಚಿತ ಕೊಡುಗೆಯಲ್ಲ. ಈ ಎರಡು ಸೌಲಭ್ಯಗಳಿಂದ ದೇಶದ ಬಡತನ ನಿರ್ಮೂಲನೆ ಸಾಧ್ಯ. ಇವು ಜನ ಕಲ್ಯಾಣ ಯೋಜನೆಗಳು' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಶಾಲಾ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಉಚಿತವಾಗಿ ಕಲ್ಪಿಸಲು ದೇಶದ ರಾಜಧಾನಿಯಲ್ಲಿ ಸಾಧ್ಯವಾಗಿರುವಾಗ, ಇಡೀ ದೇಶಕ್ಕೆ ಈ ಸೌಲಭ್ಯಗಳನ್ನು ಏಕೆ ಒದಗಿಸಲು ಸಾಧ್ಯವಿಲ್ಲ ಎಂದು ಅವರು ಪ್ರಶ್ನಿಸಿದರು.

ನಿರುದ್ಯೋಗ, ಭ್ರಷ್ಟಾಚಾರ ಮತ್ತು ಕೋಮುವಾದದಂತಹ ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಿ, ಸ್ವಾತಂತ್ರ್ಯ ಹೋರಾಟಗಾರರ ಕನಸನ್ನು ನನಸು ಮಾಡಬೇಕು

ಭಗವಂತ್ ಮಾನ್, ಪಂಜಾಬ್ ಮುಖ್ಯಮಂತ್ರಿ

ಮಹಾತ್ಮ ಗಾಂಧಿ ಅವರು ಪ್ರತಿಪಾದಿಸಿದ ಜಾತ್ಯತೀತತೆ ಮತ್ತು ಭ್ರಾತೃತ್ವದ ಆದರ್ಶ ಇಂದು ರಾಷ್ಟ್ರದ ತುರ್ತು ಅಗತ್ಯ

ಎಂ.ಕೆ. ಸ್ಟಾಲಿನ್, ತಮಿಳುನಾಡಿನ ಮುಖ್ಯಮಂತ್ರಿ

ಮಹಿಳೆಯರು ಅಸುರಕ್ಷಿತವೆಂಬ ಭಾವನೆ ಇರದ, ಜನರನ್ನು ವಿಭಜಿಸುವ ದಬ್ಬಾಳಿಕೆಯ ಶಕ್ತಿಗಳಿಗೆ ನೆಲೆ ಇರದಂತಹ ರಾಷ್ಟ್ರ ನಿರ್ಮಿಸಲು ಬಯಸುತ್ತೇನೆ. ನಮ್ಮ ಕನಸಿನ ಭಾರತಕ್ಕಾಗಿ ಪ್ರತಿದಿನವೂ ಶ್ರಮಿಸುತ್ತೇನೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ದೇಶದ 135 ಕೋಟಿ ಜನರು ಒಂದೇ ಧ್ವನಿಯಲ್ಲಿ ಮತ್ತು ಏಕ ಭಾರತ, ಸರ್ವಶ್ರೇಷ್ಠ ಭಾರತ ಎಂಬ ಪರಿಕಲ್ಪನೆಯೊಂದಿಗೆ ತ್ರಿವರ್ಣ ಧ್ವಜ ಹಾರಿಸಿದ್ದಾರೆ. ಪ್ರತಿ ಭಾರತೀಯನೂ ದೇಶದ ಬಗ್ಗೆ ಹೆಮ್ಮೆ ಪಡಬೇಕು

ಯೋಗಿ ಆದಿತ್ಯನಾಥ್, ಉತ್ತರ ಪ್ರದೇಶ ಮುಖ್ಯಮಂತ್ರಿ

ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ನೀಡಿರುವ 10 ಲಕ್ಷ ಉದ್ಯೋಗಗಳ ಭರವಸೆ ಈಡೇರಿಸಲು ತಮ್ಮ ಸರ್ಕಾರ ಬದ್ಧವಾಗಿದೆ

ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ



ಪರಿಶಿಷ್ಟ ಬಾಲಕ ಸಾವು : ಶಾಸಕ ರಾಜೀನಾಮೆ

ಜೈಪುರ (ಪಿಟಿಐ): ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಿಂದ ಮನನೊಂದಿರುವ ಕಾಂಗ್ರೆಸ್ ಶಾಸಕ ಪನಾ ಚಂದ್ ಮೇಘವಾಲ್ ಸೋಮವಾರ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿದ್ದಾರೆ.

ಶಾಲೆಯಲ್ಲಿ ಕುಡಿಯುವ ನೀರಿನ ಮಡಕೆ ಮುಟ್ಟಿದ ಎಂಬ ಕಾರಣಕ್ಕೆ ಶಿಕ್ಷಕನಿಂದ ಹಲ್ಲೆಗೆ ಒಳಗಾಗಿದ್ದ ಪರಿಶಿಷ್ಟ ಜನಾಂಗದ ಬಾಲಕ ಆಸ್ಪತ್ರೆಯಲ್ಲಿ ಮೃತಪಟ್ಟ ಎರಡು ದಿನದ ಬಳಿಕ ಈ ನಿರ್ಧಾರ ಕೈಗೊಂಡಿದ್ದಾರೆ.

'ಸಮುದಾಯದ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗದಿದ್ದರೆ ಶಾಸಕನಾಗಿ ಉಳಿಯುವ ಹಕ್ಕು ನನಗೆ ಇಲ್ಲ. ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದು, ಯಾವುದೇ ಸ್ಥಾನ ಇಲ್ಲದೆ ಸಮಾಜಕ್ಕೆ ಸೇವೆ ಸಲ್ಲಿಸುತ್ತೇನೆ' ಎಂದು ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

'75ನೇ ಸ್ವಾತಂತ್ರ್ಯ ಸಂಭ್ರಮದ ಸಂದರ್ಭದಲ್ಲೂ ದೇಶದಲ್ಲಿ ಪರಿಶಿಷ್ಟರು ಮತ್ತು ಶೋಷಿತ ವರ್ಗಗಳ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ದೌರ್ಜನ್ಯ ನೋಡಿ ನೋವಾಗಿದೆ. ನನ್ನ ಸಮುದಾಯವನ್ನು ಹಿಂಸಿಸುತ್ತಿರುವ ರೀತಿಯನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಈ ನಡುವೆ ರಾಜಸ್ಥಾನ ಮಾನವ ಹಕ್ಕುಗಳ ಆಯೋಗ (ಆರ್‌ಎಸ್‌ಎಚ್‌ಆರ್‌ಸಿ) ಬಾಲಕ ಸಾವಿನ ಪ್ರಕರಣವನ್ನು ಸ್ವಯಂಪ್ರೇರಿತ ದಾಖಲಿಸಿಕೊಂಡು, ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗೆ ನೋಟಿಸ್ ಜಾರಿ ಮಾಡಿದೆ. ಆ.26 ರಂದು ವರದಿ ಸಲ್ಲಿಸುವಂತೆ ಸೂಚಿಸಿದೆ.

ನ್ಯಾಯ ನೀಡುವುದು ಕೇವಲ ನ್ಯಾಯಾಂಗದ ಕೆಲಸವಲ್ಲ: ಮುಖ್ಯ ನ್ಯಾಯಮೂರ್ತಿ ರಮಣ

ನವದೆಹಲಿ (ಪಿಟಿಐ): ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವು ಸಾಂವಿಧಾನಿಕ ಹೊಣೆಗಾರಿಕೆಯ ಸಮಾನ ಜವಾಬ್ದಾರರು. ನ್ಯಾಯ ದೊರಕಿಸುವುದು ಕೇವಲ ನ್ಯಾಯಾಲಯಗಳ ಜವಾಬ್ದಾರಿ ಎಂಬ ಭಾವನೆಯನ್ನು ಸಂವಿಧಾನ ದೂರಮಾಡಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಸೋಮವಾರ ಹೇಳಿದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಸುಪ್ರೀಂ ಕೋರ್ಟ್ ಆವರಣದಲ್ಲಿ ಧ್ವಜಾರೋಹಣ ನಡೆಸಿದ ಬಳಿಕ ಮಾತನಾಡಿದ ಅವರು, ನಿರ್ದೇಶನಾತ್ಮಕ ತತ್ವಗಳ ಕುರಿತ ಸಂವಿಧಾನದ ವಿಧಿ 38ನ್ನು ಉಲ್ಲೇಖಿಸಿದರು. ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಭದ್ರಪಡಿಸುವ ಮೂಲಕ ಸಾಮಾಜಿಕ ವ್ಯವಸ್ಥೆ ರೂಪಿಸುವುದು ಸರ್ಕಾರದ ಜವಾಬ್ದಾರಿ ಎಂದರು.

ನ್ಯಾಯಾಲಯವು ನ್ಯಾಯ ಮತ್ತು ನೆರವನ್ನು ಕೊಡುತ್ತದೆ ಎಂಬ ಭರವಸೆ ಜನರಿಗೆ ಇದೆ. ಆದ್ದರಿಂದಲೇ ಅವರು ವ್ಯಾಜ್ಯಗಳನ್ನು ನ್ಯಾಯಾಲಯಕ್ಕೆ ತರುತ್ತಾರೆ. ಪರಿಸ್ಥಿತಿ ಅವರ ವಿರುದ್ಧ ಇರುವಾಗ ನ್ಯಾಯಾಂಗ ಅವರ ಬೆನ್ನಿಗೆ ನಿಲ್ಲುತ್ತದೆ ಎಂದು ಜನರಿಗೆ ತಿಳಿದಿದೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಸಂವಿಧಾನದ ರಕ್ಷಕ ಭಾರತದ ಸುಪ್ರೀಂ ಕೋರ್ಟ್ ಆಗಿದೆ ಎಂದರು.

ಸಂವಿಧಾನದ ವಿಧಿ 142ನ್ನು ಉಲ್ಲೇಖಿಸಿದ ಅವರು, 'ಸಂಪೂರ್ಣ ನ್ಯಾಯ ನೀಡುವಲ್ಲಿ ಸುಪ್ರೀಂ ಕೋರ್ಟ್‌ಗೆ ಸಂವಿಧಾನವು ವಿಸ್ತೃತ ಅಧಿಕಾರ ಮತ್ತು ವ್ಯಾಪ್ತಿಯನ್ನು ನೀಡಿದೆ' ಎಂದರು.

'ಶೇ 43 ಜನಪ್ರತಿನಿಧಿಗಳಿಗೆ ಅಪರಾಧ ಹಿನ್ನೆಲೆ: ಕಾನೂನಿಗೆ ತಿದ್ದುಪಡಿ ಅಗತ್ಯ'

ದೇಶದ ಶೇಕಡ 43ರಷ್ಟು ಜನಪ್ರತಿನಿಧಿಗಳು ಅಪರಾಧ ಹಿನ್ನೆಲೆಯನ್ನು ಹೊಂದಿದ್ದಾರೆ. ಇಂಥವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ತಡೆಯುವ ಕಾನೂನಿನ ಅಗತ್ಯ ಇದೆ ಎಂದು ಸುಪ್ರೀಂಕೋರ್ಟ್ ಬಾರ್ ಅಸೋಸಿಯೇಷನ್ (ಎಸ್‌ಸಿಬಿಎ) ಅಧ್ಯಕ್ಷ ವಿಕಾಸ್ ಸಿಂಗ್ ಅಭಿಪ್ರಾಯ ಪಟ್ಟಿದ್ದಾರೆ.

ಸುಪ್ರೀಂಕೋರ್ಟ್‌ನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಅವರು, 'ಸ್ವಾತಂತ್ರ್ಯದ 75 ವರ್ಷಗಳ ನಂತರವೂ ಅಪರಾಧ ಹಿನ್ನೆಲೆ ಹೊಂದಿದ ಶೇಕಡ 43ರಷ್ಟು ಜನಪ್ರತಿನಿಧಿಗಳು ಚುನಾಯಿತರಾಗುತ್ತಿದ್ದಾರೆ. ಇದನ್ನು ಸರಿಪಡಿಸಬೇಕಾದ ಅಗತ್ಯವಿದೆ ಎಂದು ಭಾವಿಸುತ್ತೇನೆ. ಆದರೆ ಯಾವ ರಾಜಕೀಯ ಪಕ್ಷಗಳ ನೇತಾರರೂ ಈ ಕೆಲಸಕ್ಕೆಮುಂದಾಗುವುದಿಲ್ಲ. ನಾವೇ ಕಾನೂನಿಗೆ ತಿದ್ದುಪಡಿ ತರಬೇಕು' ಎಂದು ಹೇಳಿದರು.

ಈ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರಿಗೆ ಮನವಿ ಮಾಡಿದರು.

ಮುಕೇಶ್ ಅಂಬಾನಿ ಕುಟುಂಬಕ್ಕೆ ಜೀವ ಬೆದರಿಕೆ: ವ್ಯಕ್ತಿ ಬಂಧನ

ಮುಂಬೈ: ಉದ್ಯಮಿ ಮುಕೇಶ್ ಅಂಬಾನಿ ಹಾಗೂ ಅವರ ಕುಟುಂಬಕ್ಕೆ ದೂರವಾಣಿ ಕರೆ ಮೂಲಕ ಜೀವ ಬೆದರಿಕೆಯೊಡ್ಡಿದ್ದ ವ್ಯಕ್ತಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

'ದಕ್ಷಿಣ ಮುಂಬೈಯಲ್ಲಿರುವ ಸರ್. ಎಚ್.ಎನ್.ರಿಲಯನ್ಸ್ ಫೌಂಡೇಷನ್ ಆಸ್ಪತ್ರೆಗೆ ಸೋಮವಾರ ಬೆಳಿಗ್ಗೆ 10.30ರ ಸುಮಾರಿಗೆ ದುಷ್ಕರ್ಮಿಯೊಬ್ಬ ಪದೇ ಪದೇ ಕರೆ ಮಾಡಿ ಅಂಬಾನಿ ಹಾಗೂ ಅವರ ಕುಟುಂಬದವರಿಗೆ ಜೀವ ಬೆದರಿಕೆ ಹಾಕಿದ್ದ. ಈ ಸಂಬಂಧ ಡಿ.ಬಿ.ಮಾರ್ಗ್ ಪೊಲೀಸ್ ಠಾಣೆಗೆ ದೂರು ನೀಡಿದ್ದೆವು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ದಹಿಸರ್ ಪ್ರದೇಶದಲ್ಲಿ ವ್ಯಕ್ತಿಯೊಬ್ಬನನ್ನು ಬಂಧಿಸಿದ್ದಾರೆ' ಎಂದು ರಿಲಯನ್ಸ್ ಫೌಂಡೇಷನ್ ಆಸ್ಪತ್ರೆಯ ಸಿಇಒ ಡಾ.ತರಂಗ್ ಗ್ಯಾನ್‌ಚಂದಾನಿ ಹೇಳಿದ್ದಾರೆ.

ಮುನ್ನೆಚ್ಚರಿಕೆ ದೃಷ್ಟಿಯಿಂದ ಅಂಬಾನಿ ಅವರ ನಿವಾಸಕ್ಕೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

2021ರ ಫೆಬ್ರುವರಿಯಲ್ಲಿ ಅಂಬಾನಿ ಮನೆಯ ಬಳಿ ಸ್ಫೋಟಕವಿರಿಸಿದ್ದ ಎಸ್‌ಯುವಿ ಕಾರು ಪತ್ತೆಯಾಗಿತ್ತು. ಅದರೊಳಗೆ 20 ಜಿಲೆಟಿನ್ ಕಡ್ಡಿಗಳು ಲಭಿಸಿದ್ದವು.

ಭ್ರಷ್ಟಾಚಾರ ಆರೋಪ: ಸೂಕಿಗೆ 6 ವರ್ಷ ಜೈಲು

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಪ್ರಜಾಪ್ರಭುತ್ವ ನಾಯಕಿ ಆಂಗ್ ಸಾನ್ ಸೂಕಿ ಅವರನ್ನು ಇನ್ನೂ ನಾಲ್ಕು ಭ್ರಷ್ಟಾಚಾರ ಪ್ರಕರಣಗಳಲ್ಲಿ ದೋಷಿ ಎಂದು ಹೇಳಿರುವ ಸೇನಾಡಳಿತದ ನ್ಯಾಯಾಲಯ, ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಈಗಾಗಲೇ ಅವರು 11 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದು, ಹೊಸದಾಗಿ 6 ವರ್ಷಗಳ ಜೈಲು ಶಿಕ್ಷೆ ಅದಕ್ಕೆ ಸೇರ್ಪಡೆಯಾಗಿದೆ.

ಒಟ್ಟು ನಾಲ್ಕು ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸೋಮವಾರ ಗೋಪ್ಯ ವಿಚಾರಣೆ ನಡೆಸಿ ಶಿಕ್ಷೆ ಪ್ರಕಟಿಸಲಾಗಿದೆ ಎಂದು ಕಾನೂನು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಅಧಿಕಾರಕ್ಕೆ ಮರಳಿ ಒಂದು ವರ್ಷ: ತಾಲಿಬಾನಿಗಳ ಹರ್ಷ

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್ ಅನ್ನು ವಶಪಡಿಸಿಕೊಂಡು ಒಂದು ವರ್ಷ ಕಳೆದ ಹಿನ್ನೆಲೆಯಲ್ಲಿ, ತಾಲಿಬಾನ್ ಸೋಮವಾರ ಸಂಭ್ರಮಾಚರಣೆ ಮಾಡಿದೆ.

ಮತ್ತೆ ಅಧಿಕಾರಕ್ಕೆ ಬಂದ ವರ್ಷಾಚರಣೆ ಸಂಬಂಧ, ತಾಲಿಬಾನ್ ಸರ್ಕಾರ ಶಾಲೆಗಳಿಗೆ ರಜೆ ಘೋಷಿಸಿತ್ತು. ತಾಲಿಬಾನ್ ಹೋರಾಟಗಾರರು ಬಂದೂಕು, ಬ್ಯಾನರ್‌ಗಳನ್ನು ಹಿಡಿದು ಕಾಬೂಲ್‌ನ ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡಿದರು.

ಕೆಲವರು ಸೈಕಲ್ ಹಾಗೂ ಬೈಕ್ ರ‍್ಯಾಲಿಗಳನ್ನೂ ನಡೆಸಿದರು. ಅಮೆರಿಕ ರಾಯಭಾರ ಕಚೇರಿ ಇದ್ದ ಕಟ್ಟಡದ ಬಳಿ ತೆರಳಿದ ಹೋರಾಟಗಾರರ ಪುಟ್ಟ ಗುಂಪೊಂದು 'ಇಸ್ಲಾಂಗೆ ಜಯವಾಗಲಿ' ಮತ್ತು 'ಅಮೆರಿಕ ಸಾಯಲಿ' ಎಂಬ ಘೋಷಣೆ ಕೂಗಿದರು.

ತಾಲಿಬಾನಿಗಳು ಕಾಬೂಲ್‌ನನ್ನು ವಶಪಡಿಸಿಕೊಂಡ ಒಂದು ವರ್ಷದ ಬಳಿಕ, ದೇಶದ ಆರ್ಥಿಕ ಸ್ಥಿತಿಯು ತೀರಾ ಹದಗೆಟ್ಟಿದೆ. ವರ್ಷದ ಹಿಂದೆ ತಾಲಿಬಾನ್ ಆಡಳಿತದಿಂದ ತಪ್ಪಿಸಿಕೊಳ್ಳಲು ಇಲ್ಲಿನ ಲಕ್ಷಾಂತರ ಮಂದಿ ಇತರೆ ದೇಶಗಳಿಗೆ ವಲಸೆ ಹೋದರು. ವಿದೇಶಿ ನೆರವು ಕಡಿತವಾಯಿತು. ಇದರಿಂದಾಗಿ ಇಲ್ಲಿನ ಕೋಟ್ಯಂತರ ಮಂದಿ ಬಡತನಕ್ಕೆ ಸಿಲುಕಿದರು. ಆರ್ಥಿಕತೆಯ ಹಿಮ್ಮುಖ ಚಲನೆ ಪ್ರಾರಂಭವಾಯಿತು.

ಮಹಿಳೆಯ ಉದ್ಯೋಗ, ಶಿಕ್ಷಣಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ತಾಲಿಬಾನ್ ಸ್ವಲ್ಪ ಸಡಿಲಿಸಿದೆ. ಆದರೆ, ಇಂದಿಗೂ ಮಹಿಳೆ, ಹೆಣ್ಣುಮಕ್ಕಳ ಸ್ಥಿತಿ ಹಾಗೆಯೇ ಇದೆ. ಸಾರ್ವಜನಿಕವಾಗಿ ಓಡಾಡಬೇಕೆಂದರೆ, ಈಗಲೂ ಮಹಿಳೆಯರು ಅಡಿಯಿಂದ ಮುಡಿಯವರೆಗೆ ಬುರ್ಖಾ ಧರಿಸಬೇಕಿದೆ.

ತಾಲಿಬಾನ್ ಹೋರಾಟಗಾರರು ಕಾಬೂಲ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಎದುರು ಸೋಮವಾರ ಸಂಭ್ರಮಾಚರಣೆ ನಡೆಸಿದರು– ಪಿಟಿಐ ಚಿತ್ರ

6 ತಿಂಗಳ ಒಳಗೆ ಓಮೈಕ್ರಾನ್‌ಗೆಂದೇ ಲಸಿಕೆ ನಿರೀಕ್ಷೆ: ಅದಾರ್ ಪೂನಾವಾಲಾ

ಮುಂಬೈ(ರಾಯಿಟರ್ಸ್): 'ಮುಂದಿನ ಆರು ತಿಂಗಳ ಒಳಗಾಗಿ ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್‌ಗೆಂದೇ ನಿರ್ದಿಷ್ಟ ಲಸಿಕೆ ಅಭಿವೃದ್ಧಿಪಡಿಸುವ ನಿರೀಕ್ಷೆ ಇದೆ' ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅದಾರ್ ಪೂನಾವಾಲಾ ಹೇಳಿದ್ದಾರೆ.

ವಿಶ್ವದ ಅತಿ ದೊಡ್ಡ ಲಸಿಕೆ ತಯಾರಿಕಾ ಸಂಸ್ಥೆಯಾಗಿರುವ ಸೀರಂ ಇನ್‌ಸ್ಟಿಟ್ಯೂಟ್ 'ಕೋವಿಶೀಲ್ಡ್' ಬ್ರ್ಯಾಂಡ್ ಅಡಿಯಲ್ಲಿ ಆಸ್ಟ್ರಾಜೆನೆಕಾದ ಕೋವಿಡ್ ಲಸಿಕೆ ತಯಾರಿಸುತ್ತಿದೆ.

ಓಮೈಕ್ರಾನ್‌ಗೆಂದೇ ನಿರ್ದಿಷ್ಟ ಲಸಿಕೆ ಅಭಿವೃದ್ಧಿಪಡಿಸುವ ನಿರೀಕ್ಷೆ ಹೊಂದಿರುವುದಾಗಿ 'ಎನ್‌ಡಿಟಿವಿ'ಗೆ ನೀಡಿದ ಸಂದರ್ಶನದಲ್ಲಿ ಪೂನಾವಾಲಾ ತಿಳಿಸಿದ್ದಾರೆ.

ಮೂಗಿನ ಮೂಲಕ ನೀಡುವ ಲಸಿಕೆ: ಪರೀಕ್ಷೆ ಯಶಸ್ವಿ

ಹೈದರಾಬಾದ್ (ಪಿಟಿಐ): 3ನೇ ಹಂತದ ಪ್ರಾಯೋಗಿಕ ಪರೀಕ್ಷೆಯಲ್ಲಿ ಮೂಗಿನ ಮೂಲಕ ನೀಡುವ ಲಸಿಕೆಯು (ಬಿಬಿವಿ154) ಸುರಕ್ಷಿತ ಎಂಬ ವರದಿ ಬಂದಿದೆ ಎಂದು ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಹೇಳಿದೆ.

ಮೊದಲನೇ ಮತ್ತು ಎರಡನೇ ಹಂತದ ಪ್ರಾಯೋಗಿಕ ಪರೀಕ್ಷೆಯಲ್ಲೂ ಲಸಿಕೆಯು ಸುರಕ್ಷಿತ ಎಂಬ ವರದಿ ಬಂದಿತ್ತು. ಕಡಿಮೆ ಮತ್ತು ಮಧ್ಯಮ ಆದಾಯ ದೇಶಗಳಿಗಾಗಿ ಮೂಗಿನ ಮೂಲಕ ನೀಡುವ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

ಐಸಿಎಫ್‌ನಲ್ಲಿ ಮೆಟ್ರೊ ರೈಲುಗಳ ಕೋಚ್ ತಯಾರಿಕೆ

ಚೆನ್ನೈ: ಭಾರತೀಯ ರೈಲ್ವೆ ಬೋಗಿ ತಯಾರಿಕೆ ಘಟಕ ಐಸಿಎಫ್‌ನಲ್ಲಿ (ಇಂಟಗ್ರಲ್ ಕೋಚ್ ಫ್ಯಾಕ್ಟರಿ) ದೇಶದಲ್ಲೇ ಮೊದಲ ಬಾರಿಗೆ ಮೆಟ್ರೊ ರೈಲುಗಳ ಕೋಚ್‌ಗಳನ್ನು (ಬೋಗಿ) ನಿರ್ಮಿಸಲಾಗುತ್ತಿದೆ.

ಇಲ್ಲಿ ನಿರ್ಮಿಸುವ ಮೆಟ್ರೊ ರೈಲು ಬೋಗಿಗಳನ್ನು ಮಹಾರಾಷ್ಟ್ರ ಮೆಟ್ರೊ ರೈಲು ನಿಗಮಕ್ಕೆ ಪೂರೈಸಲಾಗುತ್ತದೆ. ರಾಜ್ಯದ ರಾಜಧಾನಿ ಮುಂಬೈ ಮಹಾನಗರದಲ್ಲಷ್ಟೇ ಅಲ್ಲ, ರಾಜ್ಯದ ಹಲವು ನಗರಗಳಲ್ಲಿ ಸಾರಿಗೆ ವ್ಯವಸ್ಥೆಯ ಹೊಸ ಯುಗ ಇದರಿಂದ ಆರಂಭವಾಗಲಿದೆ.

ಸೋಮವಾರ ಸ್ವಾತಂತ್ರ್ಯೋತ್ಸವದಲ್ಲಿ ಮಾತನಾಡಿದ ಐಸಿಎಫ್ ಪ್ರಧಾನ ವ್ಯವಸ್ಥಾಪಕ ಎ.ಕೆ. ಅಗರ್‌ವಾಲ್ ಅವರು ಈ ಘೋಷಣೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ 75 ವಂದೇ ಭಾರತ್ ಎಕ್ಸ್ ಪ್ರೆಸ್ ರೈಲುಗಳನ್ನು ಐಸಿಎಫ್ ತಯಾರಿಸಿ, ದೇಶದಾದ್ಯಂತ ಸೇವೆಗೆ ಒದಗಿಸಲಾಗು ವುದು ಎಂದು ಅಗರ್ವಾಲ್ ಹೇಳಿದರು.

ವಂದೇ ಭಾರತ್ ಎಕ್ಸ್ ಪ್ರೆಸ್ 2.0ನ ಮೊದಲ ಪ್ರೊಟೊಟೈಪ್ ಮಾದರಿಯನ್ನು ಕೆಲವು ದಿನಗಳ ಹಿಂದೆಯೇ ಆರ್‌ಡಿಎಸ್‌ಒಗೆ ಹಸ್ತಾಂತರಿಸಲಾಗಿದ್ದು, ಕೆಲವೇ ತಿಂಗಳಲ್ಲಿ ಭಾರತೀಯ ರೈಲ್ವೆಗೆ ಸೇರ್ಪಡೆಗೊಳಿಸಲಾಗುತ್ತಿದೆ ಎಂದರು.

'ವಂದೇ ಭಾರತ್ ರೇಕ್, ವಿಸ್ತಾಡೋಮ್ ಡೈನಿಂಗ್ ಕಾರ್ ರೈಲು ಸೇರಿ ಸುಮಾರು 50 ವಿಧಗಳಲ್ಲಿ 3,500 ಬೋಗಿಗಳನ್ನು ತಯಾರಿಸಲು ಐಸಿಎಫ್ ಯೋಜಿಸುತ್ತಿದೆ. ಇವು ಸೆಪ್ಟೆಂಬರ್‌ನಿಂದ ಗುಜರಾತ್‌ನಲ್ಲಿ ಸೇವೆಗೆ ಲಭ್ಯವಾಗಲಿವೆ ಎಂದು ಹೇಳಿದರು.

ರಕ್ಷಣಾ ಬಾಂಧವ್ಯ: ಲಂಕಾಗೆ ಭಾರತದ ಡಾರ್ನಿಯರ್ ಹಸ್ತಾಂತರ

ಕೊಲೊಂಬೊ (ಪಿಟಿಐ): ರಕ್ಷಣಾ ಕ್ಷೇತ್ರದ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಭಾರತವು ಕಡಲ ಕಣ್ಗಾವಲು ವಿಮಾನ ಡಾರ್ನಿಯರ್ ಅನ್ನು ಶ್ರೀಲಂಕಾ ನೌಕಾಪಡೆಗೆ ಸೋಮವಾರ ಹಸ್ತಾಂತರಿಸಿದೆ.

ಚೀನಿ ಗೂಢಚಾರಿ ನೌಕೆ ಯುವಾನ್ ವಾಂಗ್ 5 ಶ್ರೀಲಂಕಾದ ಹಂಬಂಟೋಟ ಬಂದರು ಪ್ರವೇಶಿಸುವ ಒಂದು ದಿನದ ಮೊದಲು ಭಾರತದ ಅತ್ಯಾಧುನಿಕ ಡಾರ್ನಿಯರ್ ವಿಮಾನವನ್ನು ಭಾರತೀಯ ನೌಕಾಪಡೆಯ ಉಪ ಮುಖ್ಯಸ್ಥ ಅಡ್ಮಿರಲ್ ಎಸ್.ಎನ್. ಘೋರ್ಮಡೆ ಅವರು, ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರ ಸಮ್ಮುಖದಲ್ಲಿ ಹಸ್ತಾಂತರಿಸಿದರು.

ಚೀನಾ ನೌಕೆಗೆ ಆ.11ರಿಂದ ಪ್ರವೇಶಕ್ಕೆ ಅನುಮತಿಸಿದ್ದ ಶ್ರೀಲಂಕಾ, ಭಾರತ ತನ್ನ ರಕ್ಷಣಾ ವ್ಯವಸ್ಥೆಯ ಮೇಲೆ ಗೂಢಚಾರಿಕೆ ಸಾಧ್ಯತೆಯ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು. ಹೀಗಾಗಿ ಶ್ರೀಲಂಕಾ ಪ್ರವೇಶ ನಿರಾಕರಿಸಿತ್ತು. ಆರ್ಥಿಕವಾಗಿ ದಿವಾಳಿಯಾಗಿ, ಚೀನಿ ಸಾಲದ ಬಲೆಯಲ್ಲಿ ಸಿಲುಕಿರುವ ಲಂಕಾ ನಂತರದ ಬೆಳವಣಿಗೆಯಲ್ಲಿ ಇದೇ 16ರಿಂದ 22ರವರೆಗೆ ನೌಕೆಗೆ ಲಂಗರು ಹಾಕಲು ಅನುಮತಿಸಿದೆ.

ನೌಕೆಗೆ ಪ್ರವೇಶ: ಉಪಗ್ರಹಗಳು ಮತ್ತು ಖಂಡಾಂತರ ಕ್ಷಿಪಣಿಗಳನ್ನು ಪತ್ತೆ ಹಚ್ಚುವ ನೌಕೆ ಹಂಬಂಟೋಟ ಬಂದರಿನಲ್ಲಿ ಲಂಗರು ಹಾಕಲು ಅನುಮತಿ ಸಿಕ್ಕಿರುವುದಾಗಿ ಚೀನಾ ಸೋಮವಾರ ಹೇಳಿದೆ. ಈ ಸಂಬಂಧ ಕೊಲೊಂಬೊ ಜತೆ ನಡೆದಿರುವ ಮಾತುಕತೆ ವಿವರ ಬಹಿರಂಗಕ್ಕೆ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್ ಬಿನ್ ನಿರಾಕರಿಸಿದರು.

ಅಮೆರಿಕದ ಮತ್ತೊಂದು ಉನ್ನತ ನಿಯೋಗ ತೈವಾನ್‌ಗೆ ಭೇಟಿ ನೀಡಿರುವುದಕ್ಕೆ ಚೀನಾ ಸೋಮವಾರ ಸೇನಾ ತಾಲೀಮು ತೀವ್ರಗೊಳಿಸಿದೆ.

'ರಶ್ದಿ ಮೇಲಿನ ದಾಳಿ: ಇರಾನ್ ಕೈವಾಡವಿಲ್ಲ'

ದುಬೈ (ಎಪಿ): 'ಲೇಖಕ ಸಲ್ಮಾನ್ ರಶ್ದಿ ಅವರ ಮೇಲಿನ ದಾಳಿಯಲ್ಲಿ ಇರಾನ್ ಕೈವಾಡ ಇಲ್ಲ' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ನಾಸಿರ್ ಖನಾನಿ ಸೋಮವಾರ ಸ್ಪಷ್ಟಪಡಿಸಿದ್ದಾರೆ. ರಶ್ದಿ ಅವರ ಮೇಲೆ ನಡೆದ ದಾಳಿ ಬಳಿಕ ಇರಾನ್ ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿದೆ.

'ದಾಳಿ ಸಂಬಂಧ ಯಾರನ್ನಾದರೂ ದೂಷಿಸಬೇಕೆಂದಿದ್ದರೆ, ಅದು ರಶ್ದಿ ಮತ್ತು ಅವರ ಹಿಂಬಾಲಕರನ್ನು ದೂಷಿಸಬೇಕಷ್ಟೆ. ಇರಾನ್ ಅನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಯಾರಿಗೂ ಹಕ್ಕಿಲ್ಲ' ಎಂದು ಖನಾನಿ ಹೇಳಿದ್ದಾರೆ.

ನ್ಯೂಯಾರ್ಕ್ ವರದಿ: ತೀವ್ರವಾಗಿ ಹಲ್ಲೆಗೊಳಗಾದರೂ ರಶ್ದಿ ಅವರ 'ಸ್ಫೂರ್ತಿಯುತ ಮತ್ತು ದಿಟ್ಟತನ'ದ ಸ್ವಭಾವ ಕಳೆಗುಂದಿಲ್ಲ ಎಂದು ರಶ್ದಿ ಅವರ ಮಗ ಮತ್ತು ಮಾಜಿ ಪತ್ನಿ ಭಾನುವಾರ ಹೇಳಿದ್ದಾರೆ. ರಶ್ದಿ ಅವರ ಮೇಲಿನ ದಾಳಿಯು ಪೂರ್ವಯೋಜಿತವಾಗಿತ್ತು ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಸಿಯಾಚಿನ್: ನಾಪತ್ತೆಯಾಗಿ 38 ವರ್ಷಗಳ ಬಳಿಕ ಯೋಧನ ಮೃತದೇಹ ಪತ್ತೆ

ಹಲ್‌ದ್ವಾನಿ(ಉತ್ತರಾಖಂಡ): ಗಸ್ತಿನಲ್ಲಿದ್ದಾಗ ಹಿಮಪಾತಕ್ಕೆ ಸಿಲುಕಿ ನಾಪತ್ತೆಯಾಗಿದ್ದ ಯೋಧರೊಬ್ಬರ ಮೃತದೇಹ 38 ವರ್ಷಗಳ ಬಳಿಕ ಸಿಯಾಚಿನ್‌ನ ಹಳೆಯ ಬಂಕರೊಂದರಲ್ಲಿ ಪತ್ತೆಯಾಗಿದೆ.

ಪತ್ತೆಯಾಗಿರುವ ಮೃತದೇಹವು 19 ಕುಮಾವುಂ ರೆಜಿಮೆಂಟ್‌ನ ಯೋಧ ಚಂದ್ರಶೇಖರ ಹರ್ಬೋಲಾ ಅವರದ್ದು ಎಂದು ರಾಣಿಖೇತ್‌ನಲ್ಲಿರುವ ಸೇನೆಯ ಅಧಿಕಾರಿಗಳು ಗುರುತಿಸಿದ್ದಾರೆ.

ಮತ್ತೊಬ್ಬ ಯೋಧನ ಮೃತದೇಹ ಕೂಡ ಸಿಕ್ಕಿದ್ದು, ಅವರ ಗುರುತು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1984ರಲ್ಲಿ ಪಾಕಿಸ್ತಾನದ ವಿರುದ್ಧ ಹೋರಾಡಲು 'ಆಪರೇಷನ್ ಮೇಘದೂತ್'ನ ಭಾಗವಾಗಿ ಚಂದ್ರಶೇಖರ ಸೇರಿದಂತೆ 20 ಮಂದಿಯಿದ್ದ ಯೋಧರ ತಂಡವನ್ನು ವಿಶ್ವದ ಅತಿ ಎತ್ತರದ ಯುದ್ಧಭೂಮಿಯಾದ ಸಿಯಾಚಿನ್‌ಗೆ ಕಳುಹಿಸಲಾಗಿತ್ತು. ಈ ತಂಡವು ಗಸ್ತು ತಿರುಗುತ್ತಿದ್ದಾಗ ಹಿಮಪಾತಕ್ಕೆ ಸಿಲುಕಿತ್ತು. ತಂಡದಲ್ಲಿದ್ದ 15 ಮಂದಿಯ ಮೃತದೇಹಗಳು ಪತ್ತೆಯಾಗಿದ್ದವು. ಆದರೆ ಚಂದ್ರಶೇಖರ ಸೇರಿದಂತೆ ಐವರ ಮೃತದೇಹಗಳು ಪತ್ತೆಯಾಗಿರಲಿಲ್ಲ.

ಚಂದ್ರಶೇಖರ ಪತ್ನಿ ಶಾಂತಿ ದೇವಿ ಹಲ್‌ದ್ವಾನಿಯದ ಸರಸ್ವತಿ ವಿಹಾರ್ ಕಾಲೊನಿಯಲ್ಲಿ ವಾಸವಿದ್ದಾರೆ.

ಹಲ್‌ದ್ವಾನಿಯ ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಅವರು ಚಂದ್ರಶೇಖರ ಮನೆಗೆ ಭೇಟಿ ನೀಡಿದ್ದಾರೆ. ಸಕಲ ಸೇನಾ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರುಕಟ್ಟೆಗೆ ಬರಲು ಸೂಕ್ತ ಸಮಯ: ಸಮೂಹದ ಅಧ್ಯಕ್ಷ ಆನಂದ ಮಹೀಂದ್ರ

ಮಹೀಂದ್ರ: ಐದು ಇ-ಎಸ್‌ಯುವಿ ಅನಾವರಣ

ಲಂಡನ್ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಐದು ಎಲೆಕ್ಟ್ರಿಕ್ ಎಸ್‌ಯುವಿ ಬಿಡುಗಡೆ ಮಾಡುವುದಾಗಿ ಸೋಮವಾರ ಘೋಷಿಸಿದೆ.

ಬ್ಯಾನ್‌ಬರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂಪನಿಯು ಈ ಎಸ್‌ಯುವಿಗಳನ್ನು ಅನಾವರಣಗೊಳಿಸಿತು. ಮೊದಲ ನಾಲ್ಕು ಇ-ಎಸ್‌ಯುವಿಗಳು 2024ರಿಂದ 2026ರ ಒಳಗಾಗಿ ಮಾರುಕಟ್ಟೆಗೆ ಬರುವ ನಿರೀಕ್ಷೆ ಮಾಡಲಾಗಿದೆ.

'ವಿದ್ಯುತ್ ಚಾಲಿತ ವಾಹನಗಳ ಬಗ್ಗೆ ಗ್ರಾಹಕರಲ್ಲಿ ಅರಿವು ಹೆಚ್ಚಾಗುತ್ತಿದೆ. ಸರ್ಕಾರವೂ ಇ.ವಿಗೆ ಬೆಂಬಲ ನೀಡುತ್ತಿದೆ. ಹೀಗಾಗಿ ವಿದ್ಯುತ್ ಚಾಲಿತ ಪ್ರಯಾಣಿಕ ವಾಹನ ವಿಭಾಗವನ್ನು ಪ್ರವೇಶಿಸಲು ಇದು ಸೂಕ್ತ ಸಮಯ' ಎಂದು ಮಹೀಂದ್ರ ಸಮೂಹದ ಅಧ್ಯಕ್ಷ ಆನಂದ ಮಹೀಂದ್ರ ಹೇಳಿದ್ದಾರೆ.

ಮುಖ್ಯಾಂಶಗಳು

- 2024ರ ಅಂತ್ಯದ ವೇಳೆಗೆ ಭಾರತದಲ್ಲಿ ಮೊದಲ ಎಲೆಕ್ಟ್ರಿಕ್ ಎಸ್‌ಯುವಿ
- ಇ.ವಿ. ಬಳಕೆ ಬಗ್ಗೆ ಗ್ರಾಹಕರಲ್ಲಿ ಹೆಚ್ಚಿದ ಅರಿವು

ಕಂಪನಿಯ ಜಾಗತಿಕ ಮಹತ್ವಾಕಾಂಕ್ಷೆಗಳಿಗೆ ಸಂಬಂಧಿಸಿದಂತೆ ಈ ಐದು ಎಲೆಕ್ಟ್ರಿಕ್ ಎಸ್‌ಯುವಿಗಳು ಮಹತ್ವದ್ದಾಗಿವೆ ಎಂದು ಅವರು ತಿಳಿಸಿದ್ದಾರೆ.

ಎಕ್ಸ್‌ಯುವಿ ಹಾಗೂ ಆಲ್-ನ್ಯೂ ಎಲೆಕ್ಟ್ರಿಕ್-ಓನ್ಲಿ ಬ್ರ್ಯಾಂಡ್ 'ಬಿಇ' ಅಡಿಯಲ್ಲಿ ಐದು ಎಲೆಕ್ಟ್ರಿಕ್ ಎಸ್‌ಯುವಿ ಮಾದರಿಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

'2027ರ ಹೊತ್ತಿಗೆ ನಾವು ಮಾರಾಟ ಮಾಡುವ ಎಸ್‌ಯುವಿಗಳ ನಾಲ್ಕರಲ್ಲಿ ಒಂದು ಭಾಗವು ಎಲೆಕ್ಟ್ರಿಕ್ ಆಗಿರುವ ನಿರೀಕ್ಷೆ ಇದೆ' ಎಂದು ಮಹೀಂದ್ರ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಅನಿಶ್ ಶಾ ಹೇಳಿದ್ದಾರೆ.

ಎಕ್ಸ್‌ಯುವಿ.ಇ9

ಸಮೂಹವು 2021-22ರಲ್ಲಿ ದೇಶದಲ್ಲಿ 2.25 ಲಕ್ಷ ಎಸ್‌ಯುವಿ ಮಾರಾಟ ಮಾಡಿದೆ.

ಸಮೂಹದ ವಿದ್ಯುತ್ ಚಾಲಿತ ವಾಹನ (ಇ.ವಿ.) ಕಂಪನಿಯಲ್ಲಿ ₹ 1,925 ಕೋಟಿ ಹೂಡಿಕೆ ಮಾಡುವುದಾಗಿ ಬ್ರಿಟೀಷ್ ಇಂಟರ್‌ನ್ಯಾಷನಲ್ ಇನ್‌ವೆಸ್ಟ್‌ಮೆಂಟ್ (ಬಿಐಐ) ಈಗಾಗಲೇ ತಿಳಿಸಿದೆ.

ಎರಡೂ ಸಂಸ್ಥೆಗಳ ನಡುವಿನ ಒಪ್ಪಂದದ ಪ್ರಕಾರ, ಇ.ವಿ. ವಾಹನಗಳನ್ನು ತಯಾರಿಸುವ ಹೊಸ ಕಂಪನಿಯಲ್ಲಿ 2024ರಿಂದ 2027ರ ನಡುವೆ ಒಟ್ಟು ₹ 8 ಸಾವಿರ ಕೋಟಿ ಹೂಡಿಕೆ ಆಗಲಿದೆ.

ಇವಿ ಉತ್ಪನ್ನಗಳ ವಿನ್ಯಾಸ ಕೇಂದ್ರ 'ಮಹೀಂದ್ರ ಅಡ್ವಾನ್ಸ್ಡ್ ಡಿಸೈನ್ ಯುರೋಪ್' (ಎಂ.ಎ.ಡಿ.ಇ) ಅನ್ನು ಸೋಮವಾರ ಉದ್ಘಾಟಿಸಲಾಯಿತು.

ಮಹೀಂದ್ರ-ಫೋಕ್ಸ್‌ವ್ಯಾಗನ್ ಒಪ್ಪಂದ: ವಿದ್ಯುತ್ ಚಾಲಿತ ವಾಹನ ವಿಭಾಗದಲ್ಲಿ ಸಹಕಾರವನ್ನು ಬಲಪಡಿಸಲು ಮಹೀಂದ್ರ ಸಮೂಹ ಮತ್ತು ಫೋಕ್ಸ್‌ವ್ಯಾಗನ್ ಒಪ್ಪಂದ ಮಾಡಿಕೊಂಡಿವೆ.

'ಸ್ಕೋಡಾ ಬ್ರ್ಯಾಂಡ್ ಅಡಿ ಭಾರತಕ್ಕೆ ಇ.ವಿ'

ನವದೆಹಲಿ (ಪಿಟಿಐ): ಫೋಕ್ಸ್‌ವ್ಯಾಗನ್ ಸಮೂಹವು ಭಾರತಕ್ಕೆ ಎಲೆಕ್ಟ್ರಿಕ್ ವಾಹಗಳನ್ನು ತರಲು ಉದ್ದೇಶಿಸಿದ್ದು, ಸ್ಕೋಡಾ ಬ್ರ್ಯಾಂಡ್ ಅಡಿಯಲ್ಲಿ ಕೆಲವು ವಾಹನಗಳ ಪರೀಕ್ಷೆಯನ್ನೂ ಆರಂಭಿಸಿರುವುದಾಗಿ ಹೇಳಿದೆ.

ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ಬೇಡಿಕೆ ಇದೆ ಎನ್ನುವುದನ್ನು ನಾವು ಗುರುತಿಸಿದ್ದೇವೆ. ಹೀಗಾಗಿ ಈಗಾಗಲೇ ಪೋರ್ಷೆ ಟೈಕಾನ್ ಮತ್ತು ಔಡಿ ಇ-ಟ್ರಾನ್ ಬಿಡುಗಡೆ ಮಾಡಲಾಗಿದೆ. ಇವರೆಡಕ್ಕೂ ಮಾರುಕಟ್ಟೆಯಲ್ಲಿ ಉತ್ತಮ ಸ್ಪಂದನೆ ದೊರೆತಿದೆ ಎಂದು ಸ್ಕೋಡಾ ಆಟೊ-ಫೋಕ್ಸ್‌ವ್ಯಾಗನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಪೀಯೂಷ್ ಅರೋರಾ ಹೇಳಿದ್ದಾರೆ.

ವಿದ್ಯುತ್ ಚಾಲಿತ ವಾಹನ ವಿಭಾಗದಲ್ಲಿ ಸ್ಕೋಡಾ ಮತ್ತು ಫೋಕ್ಸ್‌ವ್ಯಾಗನ್ ಯಾವ ಉತ್ಪನ್ನಗಳನ್ನು ಭಾರತದ ತರಬಹುದು ಎನ್ನುವ ಆಲೋಚನೆ ಮಾಡಲಾಗುತ್ತಿದೆ. ಸ್ಕೋಡಾ ಬ್ರ್ಯಾಂಡ್‌ನಲ್ಲಿ ಈಗಾಗಲೇ ಕೆಲವು ವಾಹನಗಳ ಪರೀಕ್ಷೆ ನಡೆಸಲಾಗಿದ್ದು, ಮಾರುಕಟ್ಟೆಗೆ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಸಮಯವನ್ನು ನಿರ್ಧರಿಸಲಾಗುವುದು ಎಂದು ಹೇಳಿದ್ದಾರೆ.

ಬಿಪಿ: ₹ 1.4 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ತೈಲಯೇತರ ವಹಿವಾಟುಗಳ ಬೆಳವಣಿಗೆಗಾಗಿ ಮುಂದಿನ ಐದು ವರ್ಷಗಳಲ್ಲಿ ₹1.4 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಸೋಮವಾರ ತಿಳಿಸಿದೆ.

ಪೆಟ್ರೊಕೆಮಿಕಲ್ಸ್, ನೈಸರ್ಗಿಕ ಅನಿಲ ಮತ್ತು ಶುದ್ಧ ಇಂಧನ ವಹಿವಾಟಿನ ಬೆಳವಣಿಗೆಗಾಗಿ ಇಷ್ಟು ಮೊತ್ತದ ಹೂಡಿಕೆ ಮಾಡಲು ಉದ್ದೇಶಿಸಿರುವುದಾಗಿ ಅದು ಹೇಳಿದೆ.

'ತೈಲ ಸಂಸ್ಕರಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ದೇಶದ ಎರಡನೇ ಅತಿ ದೊಡ್ಡ ಕಂಪನಿ ಆಗಿರುವ ಬಿಪಿಸಿಎಲ್, ಹೊಸ ಅವಕಾಶಗಳನ್ನು ಬಳಸಿಕೊಳ್ಳಲು ಕಾರ್ಯತಂತ್ರಗಳನ್ನು ಮರುಪರಿಶೀಲನೆಗೆ ಒಳಪಡಿಸುತ್ತಿದೆ' ಎಂದು ಕಂಪನಿಯ ಅಧ್ಯಕ್ಷ ಅರುಣ್ ಕುಮಾರ್ ಸಿಂಗ್ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ.

2024ಕ್ಕೆ ಬರಲಿದೆ ಓಲಾ ಎಲೆಕ್ಟ್ರಿಕ್ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ ಎಲೆಕ್ಟ್ರಿಕ್ ಕಂಪನಿಯು 2024ರಲ್ಲಿ ಭಾರತದ ಮಾರುಕಟ್ಟೆಗೆ ತನ್ನ ಮೊದಲ ವಿದ್ಯುತ್ ಚಾಲಿತ ಕಾರನ್ನು ಬಿಡುಗಡೆ ಮಾಡುವ ಯೋಜನೆ ಹೊಂದಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಭವಿಷ್ ಅಗರ್ವಾಲ್ ಈ ಕುರಿತು ಮಾಹಿತಿ ನೀಡಿದರು.

'ಮೊದಲಿಗೆ ಪ್ರೀಮಿಯಂ ಕಾರು ಬಿಡುಗಡೆ ಮಾಡಲಾಗುವುದು. ಏಕೆಂದರೆ, ಭಾರತದ ಮಾರುಕಟ್ಟೆಯು ವಿಶ್ವ ದರ್ಜೆಯ ತಂತ್ರಜ್ಞಾನಕ್ಕೆ ಇನ್ನೂ ಸಜ್ಜಾಗಿಲ್ಲ ಎಂದು ಜಾಗತಿಕ ವಾಹನ ತಯಾರಕರು ಭಾವಿಸುತ್ತಾರೆ. ಈ ಮನೋಭಾವವನ್ನು ಈಗ ಬದಲಾಯಿಸಬೇಕಾಗಿದೆ' ಎಂದು ಭವಿಷ್ ತಿಳಿಸಿದರು.

ಓಲಾ ಕಾರು ದೇಶದಲ್ಲಿನ ಅತ್ಯಂತ ವೇಗದ ಕಾರುಗಳಲ್ಲಿ ಒಂದಾಗಿರಲಿದೆ. ಕೇವಲ ನಾಲ್ಕು ಸೆಕೆಂಡ್‌ಗಳಲ್ಲಿ ಗಂಟೆಗೆ 100 ಕಿಲೋ ಮೀಟರ್ ವೇಗವನ್ನು ತಲುಪುವ ಸಾಮರ್ಥ್ಯ ಹೊಂದಿದೆ. ಒಮ್ಮೆ ಚಾರ್ಜ್ ಮಾಡಿದರೆ 500 ಕಿಲೋ ಮೀಟರ್ ಪ್ರಯಾಣಿಸುವ ಸಾಮರ್ಥ್ಯ ಹೊಂದಿರಲಿದೆ' ಎಂದು ಅವರು ಮಾಹಿತಿ ನೀಡಿದರು.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿ ಇರುವ ಘಟಕದಲ್ಲಿಯೇ ವಿದ್ಯುತ್ ಚಾಲಿತ ಕಾರು, ದ್ವಿಚಕ್ರ ಮತ್ತು ಬ್ಯಾಟರಿಗಳನ್ನು ತಯಾರಿಸುವ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಎಸ್1 ಇ-ಸ್ಕೂಟರ್

ಓಲಾ ಎಸ್1

ಓಲಾ ಕಂಪನಿಯು ಇ-ಸ್ಕೂಟರ್ ವಿಭಾಗದಲ್ಲಿ 'ಓಲಾ ಎಸ್1' ಸ್ಕೂಟರ್ ಅನ್ನು ರಿ-ಲಾಂಚ್ ಮಾಡಿದೆ. ಇದರ ಪರಿಚಯಾತ್ಮಕ ಬೆಲೆ ₹ 99,999 ಇದೆ ಎಂದು ಕಂಪನಿಯು ತಿಳಿಸಿದೆ.

3ಕೆಡಬ್ಲ್ಯುಎಚ್ ಲೀಥಿಯಂ ಅಯಾನ್ ಬ್ಯಾಟರಿ ಪ್ಯಾಕ್ ಇರುವ ಓಲಾ ಎಸ್1, ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ 90 ಕಿಲೋ ಮೀಟರ್‌ನಿಂದ 128 ಕಿಲೋ ಮೀಟರ್‌ವರೆಗೆ ಪ್ರಯಾಣಿಸಬಹುದು ಎಂದು ಹೇಳಿದೆ.

'ಐಟಿ ಪೋರ್ಟಲ್ ಚೆನ್ನಾಗಿ ಕೆಲಸ ಮಾಡುತ್ತಿದೆ'

ಬೆಂಗಳೂರು (ಪಿಟಿಐ): 'ಆದಾಯ ತೆರಿಗೆಯ ಇ-ಫೈಲಿಂಗ್ ಪೋರ್ಟಲ್ ಮತ್ತು ಜಿಎಸ್‌ಟಿಎನ್ ಬಹಳ ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ' ಎಂದು ಇನ್ಫೊಸಿಸ್ ಸಿಇಒ ಸಲೀಲ್ ಪಾರೇಖ್ ಸೋಮವಾರ ತಿಳಿಸಿದ್ದಾರೆ.

ಎರಡೂ ಜಾಲತಾಣಗಳನ್ನು ಇನ್ಫೊಸಿಸ್ ಅಭಿವೃದ್ಧಿಪಡಿಸಿದ್ದು, ತಾಂತ್ರಿಕ ಬೆಂಬಲವನ್ನೂ ನೀಡುತ್ತಿದೆ.

'ಕಳೆದ ವರ್ಷ ಜೂನ್ 7ರಂದು ಐ.ಟಿ. ಪೋರ್ಟಲ್ ಬಳಕೆಗೆ ಲಭ್ಯವಾದಾಗ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿದ್ದವು. ನಂತರ ಆಗೊಮ್ಮೆ ಈಗೊಮ್ಮೆ ಸಮಸ್ಯೆ ಕಂಡುಬಂದಿತ್ತು. ಎಲ್ಲವನ್ನೂ ಈಗ ಪರಿಹರಿಸಲಾಗಿದೆ' ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಐಟಿಆರ್ ಸಲ್ಲಿಕೆಗೆ ಜುಲೈ 31 ಕಡೆಯ ದಿನವಾಗಿತ್ತು. ರಿಟರ್ನ್ಸ್ ಸಲ್ಲಿಕೆಯು ಸುಗಮವಾಗಿ ನಡೆಯಿತು. ಆ ದಿನವೇ 70 ಲಕ್ಷ ರಿಟರ್ನ್ಸ್ ಸಲ್ಲಿಕೆ ಆಗಿದೆ. ತೆರಿಗೆ ಇಲಾಖೆ ಮತ್ತು ತೆರಿಗೆದಾರರ ದೃಷ್ಟಿಯಿಂದ ವ್ಯವಸ್ಥೆಯು ಪರಿಣಾಮಕಾರಿ ಆಗಿ ಕೆಲಸ ಮಾಡಿದೆ ಎಂದು ಹೇಳಿದ್ದಾರೆ.

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಯಶಸ್ವಿನಿ ಘೋರ್ಪಡೆ

ಟೇಬಲ್ ಟೆನಿಸ್: ಯಶಸ್ವಿನಿಗೆ ಕಂಚು

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಸ್ವೀಡನ್‌ನಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿದ್ದಾರೆ.

ಭಾನುವಾರ ನಡೆದ 19 ವರ್ಷದೊಳಗಿನವರ ವಿಭಾಗದ ಸೆಮಿಫೈನಲ್‌ನಲ್ಲಿ ಯಶಸ್ವಿನಿ 11–9, 7–11, 9–11, 4–11ರಿಂದ ದಕ್ಷಿಣ ಕೊರಿಯಾದ ಕಿಮ್ ಸಿಯೊಂಗ್ ಜಿನ್ ಎದುರು ಸೋತರು.

ಮೊದಲ ಗೇಮ್ ಗೆದ್ದ ಅವರು ಬಳಿಕದ ಮೂರು ಗೇಮ್‌ಗಳಲ್ಲಿ ನಿರಾಸೆ ಅನುಭವಿಸಿದರು.

ಇದಕ್ಕೂ ಮೊದಲು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಯಶಸ್ವಿನಿ 11-7,10-12,15-13,11-6ರಿಂದ ಭಾರತದವರೇ ಆದ ಪ್ರಿತಾ ಪ್ರಿಯಾ ಎದುರು ಗೆದ್ದಿದ್ದರು. ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ 8-11,11-8,13-11,13-11ರಿಂದ ಚೀನಾ ತೈಪೆಯ ಹುವಾಂಗ್ ಯು ಜಿ ಎದುರು ಜಯಿಸಿದ್ದರು.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ: ಮಂಗಳೂರಿಗೆ 66 ರನ್‌ಗಳ ಸೋಲು

ಅನಿರುದ್ಧ ಮಿಂಚು: ಬೆಂಗಳೂರಿಗೆ ಜಯ

• ಮೋಹನ್ ಕುಮಾರ ಸಿ.

ಮೈಸೂರು: ಮಿಂಚಿನ ಅರ್ಧ ಶತಕ ಸಿಡಿಸಿದ ಅನಿರುದ್ಧ ಜೋಶಿ ಬ್ಯಾಟಿಂಗ್ ಬಲದಿಂದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡ, ಇಲ್ಲಿ ನಡೆದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು ಮಂಗಳೂರು ಯುನೈಟೆಡ್ ತಂಡವನ್ನು 66 ರನ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಮಂಗಳೂರು ನಾಯಕ ಆರ್.ಸಮರ್ಥ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆರಂಭಿಕರಾಗಿ ಕಣಕ್ಕಿಳಿದ ಎಲ್.ಆರ್.ಚೇತನ್ (6) ಬೇಗನೆ ಔಟಾದರೆ, ಮಯಂಕ್ ಅಗರವಾಲ್ (47; 27ಎ, 4x2, 6x3) ಬಿರುಸಿನ ಆಟವಾಡಿದರು. ಅವರಿಗೆ ಕೆ.ವಿ.ಅನಿಷ್ (40) ಸಾಥ್ ನೀಡಿದರು.

ಅನಿರುದ್ಧ ಅಬ್ಬರ: 3ನೇ ಕ್ರಮಾಂಕದಲ್ಲಿ ಅನಿರುದ್ಧ ಜೋಶಿ (57; 24ಎ, 4x7, 6x3) ಸ್ಫೋಟಕ ಆಟವಾಡಿದರು. ಅನುಭವಿ ಬೌಲರ್‌ಗಳಾದ ಎಚ್.ಎಸ್. ಶರತ್, ವೈಶಾಖ್ ವಿಜಯ್ ಕುಮಾರ್ ಅವರನ್ನು ದಂಡಿಸಿದರು. ರಕ್ಷಿತ್ ಶಿವಕುಮಾರ್ (34) ಜೊತೆ ಕೊನೆಯ 5 ಓವರ್‌ಗಳಲ್ಲಿ 68 ರನ್ ದೋಚಿದ ಅವರು, ತಂಡವು 20 ಓವರ್‌ಗಳಲ್ಲಿ 4ಕ್ಕೆ 191 ರನ್ ಪೇರಿಸಲು ನೆರವಾದರು.

ಗುರಿ ಬೆನ್ನಟ್ಟಿದ ಮಂಗಳೂರು ಯುನೈಟೆಡ್ ಆರಂಭಿಕ ಆಘಾತ ಅನುಭವಿಸಿತು. ಮ್ಯಾಕ್‌ನೈಲ್ ನೊರೊನ್ಹಾ (5), ನಿಖಿನ್ ಜೋಸ್ (7), ಅನೀಶ್ವರ್ ಗೌತಮ್ (1), ಸುಜಯ್ ಸತೇರಿ (8) ಒಂದಂಕಿ ದಾಟಲಿಲ್ಲ. ಏಕಾಂಗಿ ಹೋರಾಟ ನಡೆಸಿದ್ದ ನಾಯಕ ಆರ್.ಸಮರ್ಥ್ (32; 24ಎ, 4x4) ಕೂಡ ವಿಕೆಟ್ ಒಪ್ಪಿಸಿದರು.

ಬಿರುಗಾಳಿ ಬೌಲಿಂಗ್: ಬೆಂಗಳೂರಿನ ಮಧ್ಯಮ ವೇಗಿ ಟಿ.ಪ್ರದೀಪ್ (20ಕ್ಕೆ 3) ಹಾಗೂ ಸ್ಪಿನ್ನರ್ ರಿಷಿ ಬೋಪಣ್ಣ (26ಕ್ಕೆ 3) ಜೋಡಿಯ ಬೌಲಿಂಗ್ ದಾಳಿಗೆ ಮಂಗಳೂರು ನಲುಗಿತು. ಕಳೆದ ಪಂದ್ಯದಲ್ಲಿ ಅರ್ಧಶತಕ ಸಿಡಿಸಿದ್ದ ಅಭಿನವ್ ಮನೋಹರ್ (23; 17ಎ, 4x1, 6x2), ಬೋಪಣ್ಣಗೆ ವಿಕೆಟ್ ಒಪ್ಪಿಸಿದರು.

ಮೂರು ಸಿಕ್ಸರ್ ಸಿಡಿಸಿ ಭರವಸೆ ಮೂಡಿಸಿದ್ದ ಎಚ್.ಎಸ್.ಶರತ್ (ಅಜೇಯ 22) ಹೋರಾಟ ಫಲಿಸಲಿಲ್ಲ. ಮಂಗಳೂರು 16 ಓವರ್‌ಗಳಲ್ಲಿಯೇ ಎಲ್ಲ ವಿಕೆಟ್ ಕಳೆದುಕೊಂಡಿತು.

ಲವ್‌ನಿತ್ ಅರ್ಧಶತಕ; ಹುಬ್ಬಳ್ಳಿಗೆ ಜಯ: ಎಡಗೈ ಬ್ಯಾಟರ್ ಲವ್‌ನಿತ್ ಸಿಸೊಡಿಯಾ (ಅಜೇಯ 96; 55ಎ, 4x10, 6x4) ಸಿಡಿಸಿದ ಅಮೋಘ ಅರ್ಧ ಶತಕದ ಬಲದಿಂದ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 5 ವಿಕೆಟ್‌ಗಳಿಂದ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 4ಕ್ಕೆ 191 (ಅನಿರುದ್ಧ ಜೋಶಿ 57, ಮಯಂಕ್ ಅಗರ್‌ವಾಲ್ 47. ಸೋಮಣ್ಣ 19ಕ್ಕೆ 1) ಮಂಗಳೂರು ಯುನೈಟೆಡ್ 16 ಓವರ್‌ಗಳಲ್ಲಿ 10ಕ್ಕೆ 125 (ಆರ್.ಸಮರ್ಥ್ 32, ಅಭಿನವ್ ಮನೋಹರ್ 23. ಟಿ.ಪ್ರದೀಪ್ 20ಕ್ಕೆ 3, ರಿಷಿ ಬೋಪಣ್ಣ 26ಕ್ಕೆ 3)

ಫಲಿತಾಂಶ: ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ಗೆ 66 ರನ್ ಜಯ.

ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ನ ಅನಿರುದ್ಧ ಜೋಶಿ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮುಖ್ಯಾಂಶಗಳು

- 24 ಎಸೆತಗಳಲ್ಲಿ 57 ರನ್ ಗಳಿಸಿದ ಅನಿರುದ್ಧ
- ಪ್ರದೀಪ್, ರಿಷಿ ಬೋಪಣ್ಣ ಪ್ರಭಾವಿ ಬೌಲಿಂಗ್
- ಅಗ್ರಸ್ಥಾನಕ್ಕೇರಿದ ಬೆಂಗಳೂರು

ನಾಳೆಯಿಂದ ಬೆಂಗಳೂರಿನಲ್ಲಿ ಪಂದ್ಯಗಳು

ಮೈಸೂರಿನಲ್ಲಿ ಆಯೋಜಿಸಿದ್ದ ಮಹಾರಾಜ ಟ್ರೋಫಿಯ ಪಂದ್ಯಗಳಿಗೆ ಸೋಮವಾರ ತೆರೆಬಿದ್ದಿದೆ. ಒಟ್ಟು 18 ಪಂದ್ಯಗಳು ನಡೆದವು. ಇನ್ನುಳಿದ 15 ಪಂದ್ಯಗಳು ಆ.17ರಿಂದ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಪ್ಲೇ ಆಫ್ ಪಂದ್ಯಗಳು ಆ.23ರಿಂದ ಆರಂಭವಾಗಲಿದ್ದು, ಫೈನಲ್ ಆ.26ರಂದು ನಡೆಯಲಿದೆ.

ನಾಳಿನ ಪಂದ್ಯಗಳು: ಮೈಸೂರು ವಾರಿಯರ್ಸ್– ಮಂಗಳೂರು ಯುನೈಟೆಡ್ (ಮಧ್ಯಾಹ್ನ 3ರಿಂದ), ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್– ಶಿವಮೊಗ್ಗ ಸ್ಟ್ರೈಕರ್ಸ್ (ರಾತ್ರಿ 7ರಿಂದ). ಸ್ಥಳ: ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು. **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಫ್ಯಾನ್‌ಕೋಡ್ ಆ್ಯಪ್

ಸುದ್ದಿ 2 ನಿಮಿಷ

ಕ್ರಿಕೆಟ್ ವೀಕ್ಷಕ ವಿವರಣೆಗೆ ಇಯಾನ್ ಚಾಪೆಲ್ ವಿದಾಯ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್‌ನ ದಿಗ್ಗಜ ಆಟಗಾರರಲ್ಲಿ ಒಬ್ಬರಾಗಿರುವ ಇಯಾನ್ ಚಾಪೆಲ್ ತಮ್ಮ 45 ವರ್ಷಗಳ ವೀಕ್ಷಕ ವಿವರಣೆಕಾರ ವೃತ್ತಿಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ.

ರಿಚಿ ಬೆನಾಡ್, ಬಿಲ್ ಲಾರಿ ಮತ್ತು ಟೋನಿ ಗ್ರೆಗ್ ಅವರೊಂದಿಗೆ ಚಾಪೆಲ್ ಅವರು ‘ಚಾನೆಲ್ 9’ಗೆ ಸುದೀರ್ಘ ಅವಧಿಯವರೆಗೆ ವೀಕ್ಷಕ ವಿವರಣೆಕಾರನಾಗಿ ಕೆಲಸ ಮಾಡಿದ್ದಾರೆ.

‘ವೀಕ್ಷಕ ವಿವರಣೆ ವೃತ್ತಿಗೆ ವಿದಾಯ ಹೇಳಲು ಚಿಂತಿಸುತ್ತಿದ್ದೇನೆ’ ಎಂದು 78 ವರ್ಷದ ಅವರು ‘ಸಿಡ್ನಿ ಮಾರ್ನಿಂಗ್ ಹೆರಾಲ್ಡ್’ಗೆ ಹೇಳಿದ್ದಾರೆ.

‘ಕೆಲ ವರ್ಷಗಳ ಹಿಂದೆ ಲಘು ಹೃದಯಾಘಾತಕ್ಕೆ ಒಳಗಾಗಿದ್ದೆ. ಆ ಬಳಿಕ ಪ್ರವಾಸ ಮಾಡುವುದು, ಮೆಟ್ಟಿಲು ಹತ್ತುವುದು, ಕೆಲಸದ ನಿಮಿತ್ತ ಅತ್ತಿತ್ತ ಓಡಾಟ ಎಲ್ಲವೂ ಕಷ್ಟ ಎನಿಸತೊಡಗಿತು. ಆರೋಗ್ಯದ ಮೇಲಿನ ಕಾಳಜಿಯಿಂದ ಈ ತೀರ್ಮಾನಕ್ಕೆ ಬಂದಿದ್ದೇನೆ’ ಎಂದಿದ್ದಾರೆ.

ಅಗ್ರ ಕ್ರಮಾಂಕದ ಬ್ಯಾಟರ್ ಆಗಿದ್ದ ಚಾಪೆಲ್ 1964 ರಿಂದ 1980ರ ವರೆಗಿನ ಅವಧಿಯಲ್ಲಿ 75 ಟೆಸ್ಟ್ ಪಂದ್ಯಗಳಲ್ಲಿ ಆಡಿದ್ದು, 42.2ರ ಸರಾಸರಿಯಲ್ಲಿ 5,345 ರನ್ ಕಲೆಹಾಕಿದ್ದಾರೆ. 30 ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದರು. 16 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

1980 ರಲ್ಲಿ ನಿವೃತ್ತಿಯಾದ ಬಳಿಕ ವೀಕ್ಷಕ ವಿವರಣೆಕಾರನಾಗಿ ಎರಡನೇ ಇನಿಂಗ್ಸ್ ಆರಂಭಿಸಿದ್ದರು.

ಜೈನ್ ಕಾಲೇಜು ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಜೈನ್ ಕಾಲೇಜು ತಂಡವು ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಡೆದ ಅಂತರ್ ಪದವಿಪೂರ್ವ ಕಾಲೇಜುಗಳ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ರೇವಾ ಸ್ವತಂತ್ರ ಪಿಯು ಕಾಲೇಜು ಆಯೋಜಿಸಿದ್ದ ಟಿ20 ಟೂರ್ನಿಯ ಫೈನಲ್ ಪಂದ್ಯದಲ್ಲಿ ಸೋಮವಾರ ವಿವಿ ಪುರಂನ ಜೈನ್ ತಂಡವು ಐದು ವಿಕೆಟ್‌ಗಳಿಂದ ಆತಿಥೇಯ ರೇವಾ ತಂಡವನ್ನು ಪರಾಭವಗೊಳಿಸಿತು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರೇವಾ 18.5 ಓವರ್‌ಗಳಲ್ಲಿ 128 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಗುರಿ ಬೆನ್ನತ್ತಿದ ಜೈನ್ ಕಾಲೇಜು 13ನೇ ಓವರ್‌ನಲ್ಲಿ ಜಯ ಗಳಿಸಿತು.

ಸಂಕ್ಷಿಪ್ತ ಸ್ಕೋರು: ರೇವಾ ಸ್ವತಂತ್ರ ಪಿಯು ಕಾಲೇಜು: 18.5 ಓವರ್‌ಗಳಲ್ಲಿ 128 (ವಿಷ್ಣು ವಿ.ಎಸ್. 30, ರವಿ ಕೈರವ್ ರೆಡ್ಡಿ 29; ಪ್ರಣವ್ 20ಕ್ಕೆ 2, ಸಮರ್ಥ್ ಎಂ.ಪಿ. 37ಕ್ಕೆ 4). ಜೈನ್ ಕಾಲೇಜು: 12.1 ಓವರ್‌ಗಳಲ್ಲಿ 5 ವಿಕೆಟ್‌ಗೆ 129 (ಸೃಜನ್ ನಂದನ್ ಔಟಾಗದೆ 77, ರೋಹನ್ ರೇವಣಕರ್ 17; ಶ್ರೀಕಾಂತ್ ಬಿ. 21ಕ್ಕೆ 3, ವಿಕ್ರಂ ಕುಮಾರ್ 6ಕ್ಕೆ 3). ಫಲಿತಾಂಶ: ಜೈನ್ ತಂಡಕ್ಕೆ ಐದು ವಿಕೆಟ್‌ಗಳ ಜಯ.

ವಾಟರ್‌ಪೋಲೊ: ಗ್ಲೋಬಲ್ ತಂಡಕ್ಕೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಲೋಬಲ್ ಮತ್ತು ಬಸವನಗುಡಿ ಈಜು ಕೇಂದ್ರದ ತಂಡಗಳು ರಾಜ್ಯ ಸೀನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ತಂಡ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದವು.

ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ (ಎನ್‌ಎಸಿ) ಭಾನುವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಗ್ಲೋಬಲ್ ಈಜು ಕೇಂದ್ರದ ಪುರುಷರ ತಂಡವು ಅಗ್ರಸ್ಥಾನ ಗಳಿಸಿತು. ಬಸವನಗುಡಿ ಈಜು ಕೇಂದ್ರ (ಬಿಎಸಿ) ಬೆಳ್ಳಿ ಮತ್ತು ಎನ್‌ಎಸಿ ತಂಡ ಕಂಚಿನ ಪದಕ ಜಯಿಸಿದವು.

ಮಹಿಳೆಯರ ವಿಭಾಗದಲ್ಲಿ ಬಿಎಸಿ ಚಿನ್ನ ಮತ್ತು ಎನ್‌ಎಸಿ ಬೆಳ್ಳಿ ಪದಕ ಗೆದ್ದುಕೊಂಡವು.

ಬಿಎಸಿ ತಂಡದ ಧನುಷ್ ಕೆ. ಮೂರ್ತಿ ಮತ್ತು ಕಂಕಣಾ ಆರ್. ಭಿಂದೆ ಅವರು ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಶ್ರೇಷ್ಠ ಅಥ್ಲೀಟ್‌ಗಳಾಗಿ ಹೊರಹೊಮ್ಮಿದರು.

ಡೈವಿಂಗ್‌ನಲ್ಲಿ ಜಾನ್ಸನ್ ಮಿಂಚು: ಪುರುಷರ ವಿಭಾಗದ ಡೈವಿಂಗ್‌ನಲ್ಲಿ ಎಂಇಜಿ ತಂಡದ ಟಿ. ಜಾನ್ಸನ್ ಎರಡು ಚಿನ್ನ ಗೆದ್ದರು. ಒಂದು ಮೀಟರ್ ಸ್ಪ್ರಿಂಗ್‌ಬೋರ್ಡ್ ಮತ್ತು ಮೂರು ಮೀ. ಸ್ಪ್ರಿಂಗ್‌ಬೋರ್ಡ್ ವಿಭಾಗಗಳಲ್ಲಿ ಅವರು ಅಗ್ರಸ್ಥಾನ ಗಳಿಸಿದರು.

ಒಂದು ಮೀ. ಸ್ಪ್ರಿಂಗ್‌ಬೋರ್ಡ್ ಮತ್ತು ಮೂರು ಮೀ. ಸ್ಪ್ರಿಂಗ್‌ಬೋರ್ಡ್ ಎರಡೂ ವಿಭಾಗಗಳಲ್ಲಿ ಡಾಲ್ಫಿನ್ ಈಜುಕೇಂದ್ರದ ವರುಣ್ ಸತೀಶ್ ಪೈ ಮತ್ತು ಎಬಿಬಿಎ ಸ್ಪೋರ್ಟ್ಸ್ ಕ್ಲಬ್‌ನ ಓಂ ಹೊಂಗೇಕರ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಹೈ ಬೋರ್ಡ್‌ನಲ್ಲಿ ಎಂಇಜಿಯ ರಾಜ್‌ದ್ವೀಪ ದಾಸ್ ಚಿನ್ನ, ಡಾಲ್ಫಿನ್‌ನ ಸಂದೀಪ್‌ಕುಮಾರ್ ಪ್ರಜಾಪತಿ ಬೆಳ್ಳಿ ಜಯಿಸಿದರು.

ಡಾಲ್ಫಿನ್ ತಂಡದ ಶಕಿನಾ ಜೆ. ರಾವ್ ಮಹಿಳೆಯರ ಒಂದು ಮೀ. ಮತ್ತು ಮೂರು ಮೀಟರ್ ಸ್ಪ್ರಿಂಗ್‌ಬೋರ್ಡ್ ವಿಭಾಗಗಳಲ್ಲಿ ಚಿನ್ನ ಜಯಿಸಿದರು. ಒಂದು ಮೀ. ಸ್ಪ್ರಿಂಗ್‌ಬೋರ್ಡ್‌ನಲ್ಲಿ ಎಬಿಬಿಎ ತಂಡದ ರುತುಜಾ ಪವಾರ್ ಬೆಳ್ಳಿ ಮತ್ತು ಡಾಲ್ಫಿನ್‌ನ ನಯನಾ ಪಿ. ಕಂಚು ಗೆದ್ದರೆ. ಮೂರು ಮೀ. ವಿಭಾಗದಲ್ಲಿ ಡಾಲ್ಫಿನ್‌ನ ಪೂರ್ವಿಕಾ ವೆಂಕಟೇಶ್ ಮತ್ತು ನಯನಾ ಪಿ. ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮೈಸೂರು ಪ್ಯಾಂಥರ್ಸ್‌ಗೆ ಜಯ

ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್: ತಾನ್ಯಾ ಉತ್ತಮ ಆಟ, ವೂಲ್ವ್ಸ್‌ಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾನ್ಯಾ ಹೇಮಂತ್ ಅವರ ಉತ್ತಮ ಆಟದ ನೆರವಿನಿಂದ ಮೈಸೂರು ಪ್ಯಾಂಥರ್ಸ್ ತಂಡ, ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯಲ್ಲಿ 5-4 ರಲ್ಲಿ ಕೆಜಿಎಫ್ ವೂಲ್ವ್ಸ್ ವಿರುದ್ಧ ಜಯಿಸಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಅಂಗಣದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ ನಾಲ್ಕು ಪಂದ್ಯಗಳನ್ನು ಜಯಿಸಿದ ಪ್ಯಾಂಥರ್ಸ್, ‘ಸೂಪರ್ ಮ್ಯಾಚ್’ಅನ್ನು ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟಿತು.

ಮೊದಲು ನಡೆದ ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ತಾನ್ಯಾ ಹೇಮಂತ್ 15–5, 15–3 ರಲ್ಲಿ ರಶ್ಮಿ ಗಣೇಶ್ ಅವರನ್ನು ಮಣಿಸಿ, ಪ್ಯಾಂಥರ್ಸ್‌ಗೆ ಮೇಲುಗೈ ತಂದಿತ್ತರು.

ಪುರುಷರ ಡಬಲ್ಸ್‌ನಲ್ಲಿ ಬಿ.ಎಂ.ರಾಹುಲ್–ಚಿರಂಜೀವಿ ರೆಡ್ಡಿ ಜೋಡಿ 13–15, 15–10, 15–13 ರಲ್ಲಿ ಪ್ರಕಾಶ್ ರಾಜ್– ವಿ.ಸುಹಾಸ್ ಅವರನ್ನು ಮಣಿಸಿತು.

ಪುರುಷರ ಸಿಂಗಲ್ಸ್‌ನಲ್ಲಿ ರೋಹಿತ್ ಮರಿಸ್ವಾಮಿ ಅವರು 15–13, 10–15, 15–9 ರಲ್ಲಿ ರುದ್ರ ಶಾಹಿ ವಿರುದ್ಧ ಜಯಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಜಿ.ಕಿರಣ್‌ಕುಮಾರ್–ತಾನ್ಯಾ ಜೋಡಿ 15–8, 7–15, 15–10 ರಲ್ಲಿ ಹೇಮಂತ್ ಎಂ.ಗೌಡ– ಗ್ಲೋರಿಯಾ ವಿನಯಕುಮಾರ್ ಎದುರು ರೋಚಕವಾಗಿ ಗೆದ್ದಿತು. ನಾಲ್ಕು ಪಂದ್ಯಗಳು ಕೊನೆಗೊಂಡಾಗ ಪ್ಯಾಂಥರ್ಸ್ ತಂಡ 5 ಪಾಯಿಂಟ್ ಕಲೆಹಾಕಿ ಗೆಲುವು ಖಚಿತಪಡಿಸಿಕೊಂಡಿತು. ಕೊನೆಯಲ್ಲಿ ನಡೆದ ‘ಸೂಪರ್ ಮ್ಯಾಚ್’ನಲ್ಲಿ ಜಯ ಸಾಧಿಸಿದ ಕೆಜಿಎಫ್,ಸೋಲಿನ ಅಂತರವನ್ನು 4–5ಕ್ಕೆ ತಗ್ಗಿಸಿಕೊಂಡಿತು.

ಸೂಪರ್ ಮ್ಯಾಚ್‌ನಲ್ಲಿ ಕೆಜಿಎಫ್ ತಂಡದ ಹೇಮಂತ್/ ಪ್ರಕಾಶ್ ರಾಜ್/ ವಿ.ಸುಹಾಸ್ ಅವರು 28–26 ರಲ್ಲಿ ಬಿ.ಎಂ.ರಾಹುಲ್/ ಕಿರಣ್ ಕುಮಾರ್/ ರೋಹಿತ್ ಮರಿಸ್ವಾಮಿ ಅವರನ್ನು ಸೋಲಿಸಿದರು.

ಇನ್ನೊಂದು ಪಂದ್ಯದಲ್ಲಿ ಮಲ್ನಾಡ್ ಫಾಲ್ಕನ್ಸ್ 6–1ರಿಂದ ಬೆಂಗಳೂರು ಲಯನ್ಸ್ ಎದುರು ಗೆದ್ದಿತು.

ಇಂದಿನ ಪಂದ್ಯಗಳು: ಕೊಡಗು ಟೈಗರ್ಸ್– ಮಂಡ್ಯ ಬುಲ್ಸ್ (ಮಧ್ಯಾಹ್ನ 3 ಗಂಟೆ).

ಬಂಡೀಪುರ ಟಸ್ಕರ್ಸ್– ಮಂಗಳೂರು ಶಾರ್ಕ್ಸ್ (ಸಂಜೆ 6 ಗಂಟೆ). ನೇರಪ್ರಸಾರ: ಯೂರೋ ಸ್ಪೋರ್ಟ್

ತಾನ್ಯಾ ಹೇಮಂತ್ ಅವರ ಆಟ –ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಕ್ರೀಡಾಪಟುಗಳ ಆಯ್ಕೆಯಲ್ಲಿ ಪಾರದರ್ಶಕತೆ: ಮೋದಿ

ನವದೆಹಲಿ (ಪಿಟಿಐ): ‘ವಿವಿಧ ಕ್ರೀಡೆಗಳಲ್ಲಿ ರಾಷ್ಟ್ರೀಯ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತಂದಿರುವುದರಿಂದಲೇ ಕ್ರೀಡಾಕ್ಷೇತ್ರದಲ್ಲಿ ನಮ್ಮ ದೇಶ ಯಶಸ್ಸಿನ ಹಾದಿಯಲ್ಲಿ ಮುನ್ನಡೆದಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

‘ಸ್ವಜನಪಕ್ಷಪಾತದ ನಕಾರಾತ್ಮಕ ಪರಿಣಾಮ ರಾಜಕೀಯಕ್ಕೆ ಮಾತ್ರ ಸೀಮಿತವಾಗಿರದೆ ಒಂದು ಕಾಲದಲ್ಲಿ ಕ್ರೀಡಾ ಕ್ಷೇತ್ರದ ಮೇಲೂ ತನ್ನ ಪರಿಣಾಮ ಬೀರಿದೆ’ ಎಂದು ಸ್ವಾತಂತ್ರ್ಯೋತ್ಸವ ದಿನದ ಭಾಷಣದಲ್ಲಿ ಸೋಮವಾರ ತಿಳಿಸಿದರು.

‘ತಂಡಗಳ ಆಯ್ಕೆಯಲ್ಲಿ ಪಾರದರ್ಶಕತೆಯ ಕೊರತೆಯಿತ್ತು. ಇದರಿಂದ ನಮ್ಮ ಕ್ರೀಡಾಪಟುಗಳ ಪ್ರತಿಭೆಯು ವ್ಯರ್ಥವಾಗಿ ಹೋಗುತ್ತಿತ್ತು’ ಎಂದರು.

ಇತ್ತೀಚೆಗೆ ಕೊನೆಗೊಂಡ ಕಾಮನ್‌ವೆಲ್ತ್ ಕೂಟದಲ್ಲಿ ಭಾರತ, 22 ಚಿನ್ನ ಸೇರಿದಂತೆ ಒಟ್ಟು 61 ಪದಕಗಳನ್ನು ಗೆದ್ದುಕೊಂಡಿತ್ತು.

19ರಿಂದ ಟೇಕ್ವಾಂಡೊ ಟೂರ್ನಿ

ಬೆಂಗಳೂರು: ಕರ್ನಾಟಕ ಟೇಕ್ವಾಂಡೊ ಸಂಸ್ಥೆಯು ಇದೇ 19ರಿಂದ 21ರವರೆಗೆ ನೈರುತ್ಯ ವಲಯ 17ನೇ ಟೇಕ್ವಾಂಡೊ ಚಾಂಪಿಯನ್‌ಷಿಪ್‌ಅನ್ನು ಬೆಂಗಳೂರಿನಲ್ಲಿ ಆಯೋಜಿಸಲಿದೆ.

ಕೊಡಿಗೆಹಳ್ಳಿ ಮುಖ್ಯರಸ್ತೆಯ ಶಂಕರನಗರ ಒಳಾಂಗಣ ಕ್ರೀಡಾಂಗಣದಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ.

11 ರಾಜ್ಯಗಳ 1000 ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದೆ. ಇಲ್ಲಿ ಪದಕ ಜಯಿಸಿದವರು ನವದೆಹಲಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಕೂಟಕ್ಕೆ ಆಯ್ಕೆಯಾಗುವರು ಎಂದು ಕರ್ನಾಟಕ ಟೇಕ್ವಾಂಡೊ ಸಂಸ್ಥೆಯ ಕಾರ್ಯದರ್ಶಿ ಜೆ. ಪ್ರದೀಪ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಳ್ಳಾರಿಯಲ್ಲಿ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಅನರ್ಘ್ಯಾ, ರಕ್ಷಿತ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನರ್ಘ್ಯಾ ಮಂಜುನಾಥ್ ಅವರು ಬಳ್ಳಾರಿ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ, ಪ್ರಶಸ್ತಿ ಡಬಲ್ ಸಾಧನೆ ಮಾಡಿದರು.

ಸೋಮವಾರ ನಡೆದ ಫೈನಲ್‌ನಲ್ಲಿ ಅನರ್ಘ್ಯಾ 9-11, 11-4, 11-8, 14-12, 11-5 ರಲ್ಲಿ ಸಹನಾ ಮೂರ್ತಿ ವಿರುದ್ಧ ಗೆದ್ದರು. ಮೊದಲ ಗೇಮ್‌ನಲ್ಲಿ ಸೋತರೂ ಮರುಹೋರಾಟ ನಡೆಸುವಲ್ಲಿ ಅನರ್ಘ್ಯಾ ಯಶಸ್ವಿಯಾದರು. 19 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲೂ ಅವರು ಪ್ರಶಸ್ತಿ ಗೆದ್ದಿದ್ದರು.

ನಾಲ್ಕರಘಟ್ಟದ ಪಂದ್ಯಗಳಲ್ಲಿ ಅನರ್ಘ್ಯಾ 11-9, 11-3, 6-11, 11-9, 11-6 ರಲ್ಲಿ ತೃಪ್ತಿ ಪುರೋಹಿತ್ ವಿರುದ್ಧ; ಸಹನಾ 5-11, 15-13, 11-7, 11-5, 12-10 ರಲ್ಲಿ ದೇಷ್ನಾ ಎಂ.ವಂಶಿಕಾ ಎದುರು ಜಯಿಸಿದ್ದರು.

ರಕ್ಷಿತ್‌ಗೆ ಪ್ರಶಸ್ತಿ: ಕೆನರಾ ಬ್ಯಾಂಕ್‌ನ ರಕ್ಷಿತ್ ಬಾರಿಗಿಡದ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು. ಪ್ರಬಲ ಪೈಪೋಟಿ ನಡೆದ ಫೈನಲ್‌ನಲ್ಲಿ ಅವರು 6-11, 8-11, 11-4, 11-7, 11-8, 11-2 ರಲ್ಲಿ ಕೆ.ಜೆ. ಆಕಾಶ್ ಎದುರು ಜಯಿಸಿದರು.

ಬಾಲಕರ 19 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಗಿದ್ದ ಆಕಾಶ್ ಅವರು ಮೊದಲ ಎರಡು ಗೇಮ್‌ಗಳನ್ನು ಗೆದ್ದು ಪ್ರಶಸ್ತಿ ‘ಡಬಲ್’ ಸಾಧನೆಯ ನಿರೀಕ್ಷೆ ಮೂಡಿಸಿದ್ದರು. ಆದರೆ ರಕ್ಷಿತ್ ಅದಕ್ಕೆ ಅವಕಾಶ ನೀಡಲಿಲ್ಲ. 0–2 ರಲ್ಲಿ ಹಿನ್ನಡೆಯಲ್ಲಿದ್ದರೂ, ಒತ್ತಡಕ್ಕೆ ಒಳಗಾಗದೆ ಮರುಹೋರಾಟ ನಡೆಸಿ ಪಂದ್ಯ ಗೆದ್ದರು.

ಸೆಮಿಫೈನಲ್ ಪಂದ್ಯಗಳಲ್ಲಿ ರಕ್ಷಿತ್ 11-7, 11-5, 11-7, 11-8 ರಲ್ಲಿ ಅನಿರ್ಬನ್ ರಾಯ್ ಚೌಧರಿ ವಿರುದ್ಧ ಗೆದ್ದಿದ್ದರೆ, ಆಕಾಶ್ 13-11, 12-10, 8-11, 11-5, 11-8 ರಲ್ಲಿ ಶ್ರೀಕಾಂತ್ ಕಶ್ಯಪ್ ಅವರನ್ನು ಮಣಿಸಿದ್ದರು.

ತಂಡ ವಿಭಾಗ: ತಂಡ ವಿಭಾಗದಲ್ಲಿ ಬಿಎನ್‌ಎಂ ‘ಎ’ 2–1 ರಲ್ಲಿ ಪಿಎಸ್‌ಟಿಟಿಎ ವಿರುದ್ಧ ಜಯಿಸಿತು. ಸಿಂಗಲ್ಸ್‌ನಲ್ಲಿ ಅನಿರ್ಬನ್ ರಾಯ್‌ಚೌಧರಿ 11-7, 11-7, 11-9 ರಲ್ಲಿ ಶ್ರೇಯಲ್ ತೆಲಾಂಗ್ ಅವರನ್ನು ಸೋಲಿಸಿದರು.

ಡಬಲ್ಸ್‌ನಲ್ಲಿ ತೆಲಾಂಗ್–ಕಶ್ಯಪ್ ಜೋಡಿ 11-3, 11-8, 11-8 ರಲ್ಲಿ ಅನಿರ್ಬನ್– ಅನರ್ಘ್ಯಾ ಎದುರು ಗೆದ್ದಿತು. ಇನ್ನೊಂದು ಸಿಂಗಲ್ಸ್‌ನಲ್ಲಿ ಶ್ರೀಕಾಂತ್ ಕಶ್ಯಪ್ 11-8, 11-5, 11-7 ರಲ್ಲಿ ಯಶವಂತ್ ಅವರನ್ನು ಮಣಿಸಿದರು

ರಾಜ್ಯ ರ‍್ಯಾಂಕಿಂಗ್ ಟಿಟಿ ಟೂರ್ನಿಯ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದವರು. (ಎಡದಿಂದ) ಅನರ್ಘ್ಯಾ ಮಂಜುನಾಥ್, ಶ್ರೀಕಾಂತ್, ದೇಷ್ನಾ ವಂಶಿಕಾ, ಶ್ರೇಯಲ್ ತೆಲಾಂಗ್ ಮತ್ತು ರಕ್ಷಿತ್

ಮುಖ್ಯಾಂಶಗಳು

- ಅನರ್ಘ್ಯಾ ಪ್ರಶಸ್ತಿ ಡಬಲ್ ಸಾಧನೆ
- ಫೈನಲ್‌ನಲ್ಲಿ ಸಹನಾ ಎದುರು ಗೆಲುವು
- ಪ್ರಶಸ್ತಿ ಸುತ್ತಿನಲ್ಲಿ ಎಡವಿದ ಆಕಾಶ್

ಬಿಎಫ್‌ಸಿ ತಂಡದಲ್ಲಿ 8 ಹೊಸಮುಖ

ಕೋಲ್ಕತ್ತ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದ ಜತೆ ಹೊಸದಾಗಿ ಒಪ್ಪಂದ ಮಾಡಿಕೊಂಡಿರುವ ಎಂಟೂ ಆಟಗಾರರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಡುರಾಂಡ್ ಕಪ್ ಟೂರ್ನಿಗೆ 25 ಸದಸ್ಯರ ಬಿಎಫ್‌ಸಿ ತಂಡವನ್ನು ಸೋಮವಾರ ಪ್ರಕಟಿಸಲಾಯಿತು. ಬೆಂಗಳೂರಿನ ತಂಡ ಬುಧವಾರ ನಡೆಯಲಿರುವ ತನ್ನ ಮೊದಲ ಪಂದ್ಯದಲ್ಲಿ ಜಮ್ಶೆಡ್‌ಪುರ ಎಫ್‌ಸಿ ತಂಡವನ್ನು ಎದುರಿಸಲಿದೆ.

ರಾಯ್ ಕೃಷ್ಣ, ಪ್ರಬೀರ್ ದಾಸ್, ಜೆವಿ ಹೆರ್ನಾಂಡೆಸ್, ಸಂದೇಶ್ ಜಿಂಗಾನ್, ಫೈಸಲ್ ಅಲಿ, ಹೀರಾ ಮೊಂಡಲ್, ಅಲೆಕ್ಸಾಂಡರ್ ಜೊವನೊವಿಚ್ ಮತ್ತು ಅಮೃತ್ ಗೋಪೆ ಅವರು ಬಿಎಫ್‌ಸಿ ಜತೆ ಹೊಸದಾಗಿ ಒಪ್ಪಂದ ಮಾಡಿಕೊಂಡಿರುವ ಆಟಗಾರರು.

ರಾಯ್ ಕೃಷ್ಣ

ಮುಖ್ಯ ಕೋಚ್ ಸೈಮನ್ ಗ್ರೇಸನ್ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿರುವ ಬಿಎಫ್‌ಸಿ ತಂಡ, ಬೆಂಗಳೂರಿನಿಂದ ಭಾನುವಾರ ಕೋಲ್ಕತ್ತಕ್ಕೆ ಬಂದಿಳಿಯಿತು.

ಸುನಿಲ್ ಚೆಟ್ರಿ ನೇತೃತ್ವದ ತಂಡ ‘ಎ’ ಗುಂಪಿನಲ್ಲಿ ಜಮ್ಶೆಡ್‌ಪುರ ಎಫ್‌ಸಿ, ಇಂಡಿಯನ್ ಏರ್‌ಫೋರ್ಸ್ ಫುಟ್‌ಬಾಲ್ ಕ್ಲಬ್, ಎಫ್‌ಸಿ ಗೋವಾ ಮತ್ತು ಮಹಮಡನ್ ಸ್ಪೋರ್ಟಿಂಗ್ ಕ್ಲಬ್ ಜತೆ ಸ್ಥಾನ ಪಡೆದಿದೆ.

ತಂಡದ ಇತರ ಸದಸ್ಯರು: ಸುನಿಲ್ ಚೆಟ್ರಿ (ನಾಯಕ), ಗುರುಪ್ರೀತ್ ಸಿಂಗ್ ಸಂಧು, ಲಾರಾ ಶರ್ಮಾ, ಅಲನ್ ಕೋಸ್ಟಾ, ನಮ್‌ಗ್ಯಾಲ್ ಭುಟಿಯಾ, ಪರಾಗ್ ಶ್ರೀವಸ್, ಡಬ್ಲ್ಯು.ಮ್ಯುರಂಗ್, ಬ್ರೂನೊ ರಮಿರೆಸ್, ಜಯೇಶ್ ರಾಣೆ, ಸುರೇಶ್ ವಾಂಗ್‌ಜಮ್, ದಾನಿಶ್ ಫರೂಖ್, ರೋಹಿತ್ ಕುಮಾರ್, ಬಿಸ್ವ ದರ್ಜೀ, ಪ್ರಿನ್ಸ್ ಇಬಾರ, ಉದಾಂತ ಸಿಂಗ್, ಶಿವಶಕ್ತಿ ನಾರಾಯಣನ್, ಲಿಯೊನ್ ಆಗಸ್ಟಿನ್.

ಸಂಕ್ಷಿಪ್ತ ಸುದ್ದಿ

ಫೆನ್ಸಿಂಗ್ ಟೂರ್ನಿ: ರಾಘವೇಂದ್ರಗೆ ಬೆಳ್ಳಿ

ರಾಘವೇಂದ್ರ

ಬೆಂಗಳೂರು: ಕರ್ನಾಟಕದ ಪಿ.ರಾಘವೇಂದ್ರ ಅವರು ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬೆಳ್ಳಿಯ ಪದಕ ಗೆದ್ದಿದ್ದಾರೆ.

ಆ.8 ರಿಂದ 13ರ ವರೆಗೆ ನಡೆದಿದ್ದ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದ ಅವರು ವೈಯಕ್ತಿಕ ವಿಭಾಗ ಹಾಗೂ ತಂಡ ವಿಭಾಗದಲ್ಲಿ ಬೆಳ್ಳಿ ಜಯಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕ್ರೀಡಾಂಗಣ ಸಿಬ್ಬಂದಿ ಮಕ್ಕಳಿಗೆ ಕೆಎಸ್‌ಸಿಎ ನೆರವು

ಬೆಂಗಳೂರು: ಕ್ರೀಡಾಂಗಣ ಸಿಬ್ಬಂದಿಯ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಯೋಜನೆ ಜಾರಿಗೊಳಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮುಂದಾಗಿದೆ.

ಮೈಸೂರಿನ ಗಂಗೋತ್ರಿ ಗ್ಲೇಡ್ಸ್ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ‘ನಾವು ಆಯೋಜಿಸುವ ಟೂರ್ನಿಗಳು ಯಶಸ್ವಿಯಾಗಲು ಅಂಗಳದ ಸಿಬ್ಬಂದಿಯ ಪರಿಶ್ರಮ ಪ್ರಮುಖ ಕಾರಣ. ಆದ್ದರಿಂದ ಅಂಗಳದ ಸಿಬ್ಬಂದಿಯ ಮಕ್ಕಳ ಶಿಕ್ಷಣಕ್ಕೆ ನೆರವು ನೀಡಲಾಗುವುದು’ ಎಂದು ಹೇಳಿದರು.

‘ಬಡ ಕುಟುಂಬದಿಂದ ಬಂದಿರುವ ರಾಜ್ಯದ ಎಂಟು ಪ್ರತಿಭಾನ್ವಿತ ಕ್ರಿಕೆಟ್ ಆಟಗಾರರನ್ನು ಗುರುತಿಸಿ ಅವರಿಗೆ ಸ್ಕಾಲರ್‌ಷಿಪ್ ನೀಡುವ ಯೋಜನೆಯನ್ನೂ ಜಾರಿಗೊಳಿಸಲಾಗುತ್ತದೆ’ ಎಂದು ತಿಳಿಸಿದರು.

ಟೆನಿಸ್: ಕರೆನೊ ಬುಸ್ಟಾಗೆ ಪ್ರಶಸ್ತಿ

ಮಾಂಟ್ರಿಯಲ್, ಕೆನಡಾ (ಎಪಿ): ಸ್ಪೇನ್‌ನ ಪ್ಯಾಬ್ಲೊ ಕರೆನೊ ಬುಸ್ಟಾ ಅವರು ಇಲ್ಲಿ ನಡೆದ ನ್ಯಾಷನಲ್ ಬ್ಯಾಂಕ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಭಾನುವಾರ ತಡರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಬುಸ್ಟಾ 3-6, 6-3, 6-3ರಿಂದ ಎಂಟನೇ ಶ್ರೇಯಾಂಕದ ಆಟಗಾರ, ಪೋಲೆಂಡ್‌ನ ಹುಬರ್ಟ್ ಹರ್ಕಜ್ ಅವರನ್ನು ಮಣಿಸಿದರು.

ಹಲೆಪ್‌ಗೆ ಪ್ರಶಸ್ತಿ (ಎಎಫ್‌ಪಿ ವರದಿ): ರುಮೇನಿಯಾದ ಸಿಮೊನಾ ಹಲೆಪ್ ಅವರು ಕೆನಡಾದ ಟೊರಂಟೊದಲ್ಲಿ ನಡೆದ ಡಬ್ಲ್ಯುಟಿಎ ಮಾಸ್ಟರ್ಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಮಹಿಳಾ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಹಲೆಪ್ 6-3, 2-6, 6-3ರಿಂದ ಬ್ರೆಜಿಲ್‌ನ ಬೀಟ್‌ರಿಜ್ ಹದ್ದಾದ್ ಮೈಯಾ ಅವರನ್ನು ಮಣಿಸಿದರು.



ಪ್ರಶಸ್ತಿಯೊಂದಿಗೆ ಪ್ಯಾಬ್ಲೊ ಕರೆನೊ ಬುಸ್ಟಾ– ಎಎಫ್‌ಪಿ ಚಿತ್ರ

ಕೊಕ್ಕೊ ಲೀಗ್: ಮುಂಬೈ ಖಿಲಾಡೀಸ್‌ಗೆ ಜಯ

ಪುಣೆ (ಪಿಟಿಐ): ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಮುಂಬೈ ಖಿಲಾಡೀಸ್ ತಂಡವು ರೋಚಕ ಜಯ ಸಾಧಿಸಿತು.

ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮುಂಬೈ 51–43ರಿಂದ ರಾಜಸ್ಥಾನ ವಾರಿಯರ್ಸ್ ಎದುರು ಗೆದ್ದಿತು.

ಭಾನುವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಗುಜರಾತ್ ಜೈಂಟ್ಸ್ ತಂಡವು ಮುಂಬೈ ಖಿಲಾಡೀಸ್‌ಗೆ 69–44ರಿಂದ ಸೋಲುಣಿಸಿತ್ತು. ಪಂದ್ಯದ ಮೊದಲ ಅವಧಿಯ ಬಳಿಕ ಮುಂಬೈ 22–2ರಿಂದ ಮುನ್ನಡೆ ಸಾಧಿಸಿ ಪಾರಮ್ಯ ಮೆರೆಯಿತು. ಆದರೆ ಮೊದಲ ಇನಿಂಗ್ಸ್ ಕೊನೆಗೊಂಡಾಗ ತಿರುಗೇಟು ನೀಡಿದ ಗುಜರಾತ್ ಸ್ಕೋರ್‌ಅನ್ನು 26–24ಕ್ಕೆ ತಂದಿತು. ಎರಡನೇ ಇನಿಂಗ್ಸ್‌ನಲ್ಲಿ ಮುಂಬೈ ಮತ್ತೆ ಚೇತರಿಸಿಕೊಂಡಿತು. 44–30ರಿಂದ ಮುನ್ನಡೆ ಸಾಧಿಸಿತು.

ನಿರ್ಣಾಯಕ ಫೈನಲ್ ಟರ್ನ್‌ನಲ್ಲಿ ಅಮೋಘ 39 ಪಾಯಿಂಟ್ಸ್ ಕಲೆಹಾಕಿದ ಗುಜರಾತ್ ಗೆಲುವು ಒಲಿಸಿಕೊಂಡಿತು.

ದಿನದ ಮತ್ತೊಂದು ಪಂದ್ಯದಲ್ಲಿ ಚೆನ್ನೈ ಕ್ವಿಕ್ ಗನ್ಸ್ 45–20ರಿಂದ ಒಡಿಶಾ ಜಗರ್‌ನಟ್ಸ್ ತಂಡವನ್ನು ಪರಾಭವಗೊಳಿಸಿತು.

ರಾಜೇಂದ್ರಗೆ ಜಯ

ಬೆಂಗಳೂರು: ರಾಜೇಂದ್ರ ಆರ್‌ಇ ಅವರು ಎಫ್‌ಎಂಎಸ್‌ಸಿಐ ಎಂಆರ್‌ಎಫ್ ಮೊಗ್ರಿಪ್ ರಾಷ್ಟ್ರೀಯ 2 ವ್ಹೀಲರ್ ರ‍್ಯಾಲಿಯ ಕೆ1000 ವಿಭಾಗದ ನಾಲ್ಕನೇ ಸುತ್ತಿನಲ್ಲಿ ಜಯ ಗಳಿಸಿದರು.ಭಾನುವಾರ ನಡೆದ ರೇಸ್‌ನಲ್ಲಿ ಪೆಟ್ರಾನಸ್ ಟಿವಿಎಸ್ ತಂಡದ ರಾಜೇಂದ್ರ, ತಮ್ಮದೇ ತಂಡದ ಅಬ್ದುಲ್ ವಾಹಿದ್ ತನ್ವೀರ್ ಅವರನ್ನು ಹಿಂದಿಕ್ಕಿದರು.

ಫುಟ್‌ಬಾಲ್: ಸೆಮಿಗೆ ಕಿಕ್‌ಸ್ಟಾರ್ಟ್

ಬೆಂಗಳೂರು: ಉತ್ತಮ ಆಟವಾಡಿದ ಕಿಕ್‌ಸ್ಟಾರ್ಟ್ ಎಫ್‌ಸಿ ಮತ್ತು ಬಿಎಫ್‌ಸಿ ತಂಡಗಳು ಸಿ. ಪುಟ್ಟಯ್ಯ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಬಿಡಿಎಫ್‌ಎ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ತಲುಪಿದವು.

ಸೋಮವಾರ ನಡೆದ ಪಂದ್ಯಗಳಲ್ಲಿ ಕಿಕ್‌ಸ್ಟಾರ್ಟ್ 1–0ಯಿಂದ ಬಿಎಫ್‌ಸಿ ಎದುರು ಗೆದ್ದರೆ, ರೂಟ್ಸ್ ಎಫ್‌ಸಿ ಇಷ್ಟೇ ಅಂತರದಿಂದ ಕೊಡಗು ಎಫ್‌ಸಿ ಎದುರು ಗೆದ್ದಿತು. ರೂಟ್ಸ್ ಜಯ ಸಾಧಿಸಿದರೂ ಗೋಲು ವ್ಯತ್ಯಾಸದ ಆಧಾರದ ಮೇಲೆ ನಾಲ್ಕರ ಘಟ್ಟ ಪ್ರವೇಶಿಸಲು ವಿಫಲವಾಯಿತು.

ಟೂರ್ನಿಗೆ ಮಂಗಳವಾರ ವಿರಾಮದ ದಿನವಾಗಿದೆ.